ಜಾನಪದ ಮಾಲೆ - ೪

ಬೆಳ್ದಿಂಗ್ಳಪ್ಪನ ಪ್ರಶ್ನೆ

ಅಗ್ರಹಾರ ಕೃಷ್ಣಮೂರ್ತಿ



ಕರ್ನಾಟಕ ಸರಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಜನಪ್ರಿಯ ಪುಸ್ತಕಮಾಲೆ

ಬೆಳ್ದಿಂಗ್ಳಪ್ಪನ ಪೂಜೆ

ಅಗ್ರಹಾರ ಕೃಷ್ಣಮೂರ್ತಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

BELDINGLAPPANA POOJE : A study of a folk-ritual (Moon Worship) by Agrahara Krishna Murthy, Published by V. Sreenivasa, Administrator, Kannada Pustaka Pradhikara (Kannada Book Authority), Pampa Mahakavi Road, Chamarajpet, Bangalore - 560018 Pages : 70+X

ಮೊದಲ ಮುದ್ರಣ : ೧೯೭೬
ಎರಡನೇ ಮುದ್ರಣ : ೧೯೯೯

ಪ್ರತಿಗಳು : ೨೦೦೦

ಮುಖಪುಟ : ಕೆ.ಕೆ. ಮಕಾಳಿ
ಹಿಂಬದಿ ಭಾವಚಿತ್ರ, ಫೋಟೋ : ಪಿ. ಲಂಕೇಶ್

ಬೆಲೆ : ರೂ. 18 = 00

ಅಕ್ಷರ ಜೋಡಣೆ ಮತ್ತು ಮುದ್ರಣ :
ನೀತು ಗ್ರಾಫಿಕ್ಸ್, ದೂರವಾಣಿ : ೬೬೧೪೧೧೩

ಪರಿವಿಡಿ

ಮುನ್ನುಡಿ

ಜ್ಞಾನ ಸಂಪಾದನೆ ಮತ್ತು ಜ್ಞಾನ ಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರೀ ಮಾಧ್ಯಮ ಅಕ್ಷರ ಮಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದ ಕಾರಿಯೂ, ಆತ್ಮಾಕರ್ಷಕವೂ, ಜೀವನ ಸೌಂದರ್ಯದಾಯಕವೂ, ಸಂಸ್ಕೃತಿ ಸಂಪನ್ನವೂ, ಬುದ್ಧಿ ಮನಸ್ಸುಗಳ ವರ್ಧಕವೂ ಆದ ಅಪೂರ್ವ ಮಾಧ್ಯಮವೇ ಸಾಹಿತ್ಯ. ನಿತ್ಯ ಪರಿವರ್ತನಶೀಲವಾದ ಜಗತ್ತಿನ ಜ್ಞಾನ ವಿಜ್ಞಾನ ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರವಹಣ ಮಾಡುತ್ತ ಮನುಷ್ಯನ ಜೀವನವನ್ನು ಪುಷ್ಟಿಗೊಳಿಸುತ್ತ, ತುಷ್ಟಿಗೊಳಿಸುತ್ತ, ವಿಕಾಸಗೊಳಿಸುತ್ತ,ಪೂರ್ಣತೆಯ ಕಡೆಗೆ ಅವನನ್ನು ಕರೆದೊಯ್ಯುವುದೇ ಇದರ ಪರಮ ಗುರಿ. ಇಂಥ ಜೀವನೋತ್ಥಾನ ಕಾರಿಯಾದ ಉತ್ತಮ ಜ್ಞಾನ ಸಂಪತ್ತನ್ನು ವಿಶಿಷ್ಟ ಹಾಗೂ ಅರ್ಥಪೂರ್ಣ ಗ್ರಂಥಗಳ ಮೂಲಕ ಕನ್ನಡ ಓದುಗರಿಗೆ ಒದಗಿಸುವ ಗುರುತರ ಜವಾಬ್ದಾರಿ ಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊತ್ತುಕೊಂಡು ನಿರ್ವಹಿಸುತ್ತಿದೆ.

ಜ್ಞಾನ, ಸಂಸ್ಕೃತಿ ಮತ್ತು ಸಾಹಿತ್ಯ ಪ್ರಸಾರ ಕಾರ್ಯಕ್ಕೆ ಕರ್ನಾಟಕ ಸರ್ಕಾರ ಬಹು ಹಿಂದಿನಿಂದ ಒತ್ತಾಸೆ ನೀಡುತ್ತ ಬಂದಿದೆ. ಈ ಮೌಲಿಕ ಪರಂಪರೆಯನ್ನು ಆರಂಭಿಸಿದ ಕೀರ್ತಿ ಕರ್ನಾಟಕ ಕಂಡ ಅತ್ಯಂತ ದಕ್ಷ ಹಾಗೂ ದೂರದೃಷ್ಟಿಯ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಶ್ರೀ ಕೆಂಗಲ್ ಹನುಮಂತಯ್ಯ ಅವರಿಗೆ ಸಲ್ಲಬೇಕು. ಕನ್ನಡದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಶ್ರೇಷ್ಠ ಗ್ರಂಥಗಳನ್ನು ಸುಲಭ ಬೆಲೆಯಲ್ಲಿ ಓದುಗರಿಗೆ ತಲುಪಿಸುವ ಸ್ತುತ್ಯ ಕಾರ್ಯವನ್ನು ಅಂದಿನಿಂದ ನಿರ್ವಹಿಸುತ್ತ ಬಹುಬೇಡಿಕೆಯ ನೂರಾರು ಕೃತಿಗಳನ್ನು ಸರ್ಕಾರ ಪ್ರಕಟಿಸಿ ಜನಮನ್ನಣೆಯನ್ನು ಗಳಿಸಿದೆ.

ಇದುವರೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸುತ್ತಿದ್ದ ಇಂಥ ಪ್ರಾಚೀನ ಹಾಗೂ ಆಧುನಿಕ ಜನಪ್ರಿಯ ಪುಸ್ತಕಗಳನ್ನು ಈಗ ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಅಲಭ್ಯವಾಗಿರುವ ಹಾಗೂ ಬಹು ಬೇಡಿಕೆಯ, ಸಾಹಿತ್ಯ ಮೌಲ್ಯ ಮತ್ತು ವೈಚಾರಿಕ ಮೌಲ್ಯಗಳನ್ನು ಒಳಗೊಂಡ

ರುವ ಕೃತಿಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಕನ್ನಡ ಸಹೃದಯರಿಗೆ ನೀಡು ವುದೇ ಈ 'ಜನಪ್ರಿಯ ಪುಸ್ತಕಮಾಲೆ'ಯ ಮುಖ್ಯೋದ್ದೇಶ.

ಈ ಮಾಲೆಯಲ್ಲಿ ಇದೀಗ ಶ್ರೀ ಅಗ್ರಹಾರ ಕೃಷ್ಣಮೂರ್ತಿ ಅವರ 'ಬೆಳ್ದಿಂಗಳ್ಳಪ್ಪನ ಪೂಜೆ' ಕೃತಿ ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. ಶ್ರೀ ಅಗ್ರಹಾರ ಕೃಷ್ಣಮೂರ್ತಿಯವರು ಕೇಂದ್ರ ಸಾಹಿತ್ಯ ಅಕಾದೆಮಿಯ ದಕ್ಷಿಣವಲಯ ಪ್ರಾದೇಶಿಕ ಕಛೇರಿಯಲ್ಲಿ ಕಾರ್ಯದರ್ಶಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಾಹಿತ್ಯ, ಚಿಂತನೆ, ವಿಚಾರ, ವಿಮರ್ಶೆಗಳಲ್ಲಿ ತೀವ್ರವಾದ ಆಸಕ್ತಿಯನ್ನು ಹೊಂದಿರುವ ಹಾಗೂ ಜಾನಪದದ ಬಗ್ಗೆ ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ದೃಷ್ಟಿಕೋನವನ್ನು ರೂಢಿಸಿಕೊಂಡಿರುವ ಶ್ರೀ ಅಗ್ರಹಾರ ಕೃಷ್ಣ ಮೂರ್ತಿ ಅವರು ೧೯೭೬ರಲ್ಲಿ ಪ್ರಕಟಿಸಿದ ಕೃತಿಯ ಮರುಮುದ್ರಣವಿದು. ಜನಪದ ಸಂಪ್ರದಾಯದಲ್ಲಿ 'ಬೆಳ್ದಿಂಗಳ್ಳಪ್ಪನ ಪೂಜೆ' ಒಂದು ಮುಖ್ಯವಾದ ಸಂಪ್ರದಾಯ. ಜನಪದರ ಸಾಂಸ್ಕೃತಿಕ ಮುಖವೊಂದಕ್ಕೆ ಇದು ಕನ್ನಡಿ ಹಿಡಿಯು ತ್ತದೆ. ಈ ಪೂಜೆಯ ಹುಟ್ಟು, ವಿಕಾಸ, ಅದರ ಸಾಂಕೇತಿಕತೆ ಮತ್ತು ಅರ್ಥ ಪೂರ್ಣತೆಗಳನ್ನು ಶ್ರದ್ಧಾಯುತವಾದ ಕ್ಷೇತ್ರಕಾರ್ಯ ಮತ್ತು ವೈಚಾರಿಕ ವ್ಯಾಖ್ಯಾನದ ಮೂಲಕ ಶ್ರೀ ಕೃಷ್ಣಮೂರ್ತಿ ಅವರು ಇಲ್ಲಿ ಪ್ರಸ್ತುತಪಡಿಸಿದ್ದಾರೆ. ಜನಪದದ ಸಂಸ್ಕೃತಿಯ ಅಭ್ಯಾಸಿಗಳಿಗೆ ಇದೊಂದು ಉಪಯುಕ್ತ ಕೃತಿ. ಇಂತಹ ಕೃತಿಯನ್ನು ಪ್ರಾಧಿಕಾರದ ಮೂಲಕ ಪ್ರಕಟಿಸಲು ಅವಕಾಶ ನೀಡಿದ ಶ್ರೀ ಅಗ್ರಹಾರ ಕೃಷ್ಣಮೂರ್ತಿ ಅವರಿಗೆ, ಇದನ್ನು ಸುಂದರವಾಗಿ ಮುದ್ರಿಸಿ ಕೊಟ್ಟ ನೀತು ಗ್ರಾಫಿಕ್ಸ್ ಮಾಲೀಕರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಹಾಗೂ ಈ ಪುಸ್ತಕವನ್ನು ಪ್ರಕಟಿಸಲು ಸಮ್ಮತಿಸಿದ ಪ್ರಾಧಿಕಾರದ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ದಿ : ೨೭.೩.೯೯
ಸ್ಥಳ : ಬೆಂಗಳೂರು

ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಮತ್ತೆ ಬೆಳ್ದಿಂಗಳು

ಸಾವಿರದ ಒಂಭೈನೂರ ಎಪ್ಪತ್ತಾರರಲ್ಲಿ ಮೊದಲು ಈ ಪುಸ್ತಕ ಹೊರ ಬರುವ ವೇಳೆಗೆ ಬೆಳ್ದಿಂಗ್ಳಪ್ಪನ ಪೂಜೆ ಮಾಡುವ ಸಂಪ್ರದಾಯ ಅವಸಾನದ ಅಂಚಿನಲ್ಲಿತ್ತು. ಬಾಲ್ಯದಲ್ಲಿ ನಾನು ಜೆಟ್ಟಿ ಅಗ್ರಹಾರದ ನಮ್ಮ ದೊಡ್ಡಮ್ಮನ ಬಳಿ ರಾತ್ರಿ ಹೊತ್ತಿನಲ್ಲಿ ದೂರದಿಂದ ಕೇಳಿಬರುತ್ತಿದ್ದ ಹಾಡುಗಳನ್ನುದ್ದೇಶಿಸಿ ಕೇಳುತ್ತಿದ್ದೆ. 'ಬೆಳ್ದಿಂಗ್ಳಪ್ಪನ್ನ ಹೊಯ್ದಿರಬೇಕು' ಎನ್ನುತ್ತಿದ್ದರು. ನಾನು ನೋಡ ಬೇಕು ಎಂದಾಗ ನಾಯಕರ ಹಟ್ಟಿಯಲ್ಲಿ ಹೊಯ್ದಾಗ ನೋಡಿವಂತೆ ಮಾದಿಗರ ಹಟ್ಟಿಗೆ ಹೋಗಬಾರದು ಅನ್ನುತ್ತಿದ್ದರು. ಆಮೇಲೆ ನಾನೆಂದೂ ಬೆಳ್ದಿಂಗ್ಳಪ್ಪನ ಪೂಜೆಯ ಬಗ್ಗೆ ಯೋಚಿಸುವ ಪ್ರಮೇಯವೇ ಇರಲಿಲ್ಲ. ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದಾಗ ಜಾನಪದ ನನ್ನ ವಿಶೇಷ ಅಧ್ಯಯನದ ವಿಷಯ ವಾಗಿತ್ತು. ಹಳ್ಳಿಯಿಂದ ಬಂದವರಿಗೆ ಅದು ಸ್ವಲ್ಪ ಅನುಕೂಲಕರವಾಗಿಯೂ ಇದ್ದ ವಿಷಯ. ಈ ಸಂಪ್ರದಾಯದ ಬಗ್ಗೆ ಎಂ.ಎ. ತರಗತಿಯಲ್ಲಿ ಒಂದು ಸೆಮಿನಾರ್ ಪೇಪರ್ ಬರೆದು ಮಂಡಿಸಿದ್ದೆ. ಆಗತಾನೆ ಕನ್ನಡ ಅಧ್ಯಯನ ಕೇಂದ್ರಕ್ಕೆ ಬಂದಿದ್ದ - ಈಗ ಡಾಕ್ಟರ್, ಪ್ರೊಫೆಸರ್ ಹಾಗೂ ಕರ್ನಾಟಕ ಜಾನ ಪದ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರೂ ಆಗಿರುವ - ಶ್ರೀ ಕಾಳೇಗೌಡ ನಾಗವಾರ ನನ್ನನ್ನು ಹಿಡಿದುಕೊಂಡರು. ಕನ್ನಡ ಅಧ್ಯಯನ ಕೇಂದ್ರದಲ್ಲಿದ್ದ ಧ್ವನಿಮುದ್ರಣ ಯಂತ್ರ ಮತ್ತು ಕ್ಯಾಮರಾಗಳ ಸಮೇತ ನನ್ನ ಜೊತೆಗೆ ಹೊರಟು ನನ್ನಿಂದ ಕ್ಷೇತ್ರಕಾರ್ಯಮಾಡಿಸಿ, ಈ ಪುಸ್ತಕ ಬರೆಯಿಸಿದ್ದಷ್ಟೇ ಅಲ್ಲ ಪ್ರಕಾಶಗೊಳಿಸಿದರು. ಆ ಕಾಲಕ್ಕೆ ಜಾನಪದ ಸಂಗ್ರಹಕ್ಕೆ, ಅಧ್ಯಯನಕ್ಕೆ ಅನುಪಮ ಪ್ರೋತ್ಸಾಹ ನೀಡುತ್ತಿದ್ದ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಗೆ ಈ ನನ್ನ ಪುಸ್ತಕಗಳನ್ನು ಬಗಲಚೀಲದಲ್ಲಿ ತುಂಬಿಕೊಂಡು ಹೋಗಿ ಅಲ್ಲಿನ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಮಾರಿ ಬಂದ ನೆನಪು ಇನ್ನೂ ಹಸಿರಾಗಿದೆ ! ಈಗ ಸಿಕ್ಕರೂ ಆಗ ಕೊಂಡಿದ್ದವರು ಅದನ್ನು ನೆನಪು ಮಾಡುತ್ತಾರೆ !

ಬೆಳದಿಂಗಳ ಪೂಜೆಯನ್ನು, ತಿಂಗಳುಮಾವನ ಪೂಜೆ ಎಂದು ಕೆಲವು ಕಡೆ ಆಚರಿಸುವ ಸಂಪ್ರದಾಯದ ಬಗ್ಗೆ ಒಂದೆರಡು ಪುಸ್ತಕಗಳಲ್ಲಿ - ವಿಶೇಷವಾಗಿ ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರು - ಉಲ್ಲೇಖ ಮಾಡಿದ್ದರೂ ಆವರೆಗಿನ ಸಂಗ್ರಹಗಳಲ್ಲಿ ಕೇವಲ ಹಾಡುಗಳನ್ನಷ್ಟೇ ಸಂಗ್ರಹಿಸಲಾಗಿತ್ತು. ಜಾನಪದವನ್ನು ಕೇವಲ ಸಾಹಿತ್ಯಕ ಮೌಲ್ಯಗಳಿಂದಷ್ಟೇ ನೋಡುವ ದೃಷ್ಟಿಕೋನ ನನಗೆ ಒಪ್ಪಿತವಲ್ಲವಾದ್ದರಿಂದ ನಾನು ಆಚರಣೆಯ ಇತರ ಆಯಾಮಗಳನ್ನು ಪರೀಕ್ಷಿಸಿ, ಹಾಡುಗಳನ್ನು ಕೇವಲ ಸಹಾಯಕ ಸಾಮಗ್ರಿಯನ್ನಾಗಿ ಬಳಸಿಕೊಂಡು ಅನುಬಂಧಕ್ಕೆ ಸೇರಿಸಿದೆ. ಅವುಗಳನ್ನು ಸಾಹಿತ್ಯಕ ಕಾರಣಗಳಿಗಾಗಿ, ಅವುಗಳ ಲಯ, ಛಂದಸ್ಸುಗಳ ಕಾರಣಗಳಿಗಾಗಿಯೂ ಯಾರಾದರೂ ಕುತೂಹಲಿಗಳು ಓದಬಹುದು. ಇಪ್ಪತ್ತುಮೂರು ವರ್ಷಗಳಾದರೂ ಅವುಗಳನ್ನು ಹಾಡುವ ಧಾಟಿ ನನ್ನ ಮನಸ್ಸಿನಿಂದ ಮರೆಯಾಗಿಲ್ಲ. ಆ ಗೀತೆಗಳಿಗೆ ಸಾಧ್ಯವಾದರೆ ಸಂಗೀತದ ಸ್ವರ ಪ್ರಸ್ತಾರವನ್ನು ಹಾಕಿಸಿ ಅಚ್ಚುಮಾಡುವ ಆಸೆ ನನ್ನಲ್ಲಿ ಉಳಿದೇ ಇದೆ.

ಕರ್ನಾಟಕದ ಜನಪದ ಆಚರಣೆಯೊಂದನ್ನೇ ತನಿಯಾಗಿ ಆಯ್ಕೆಮಾಡಿಕೊಂಡು ಅಭ್ಯಾಸ ಮಾಡಿದ ಅದರ ಸಾಹಿತ್ಯೇತರ ಆಯಾಮಗಳಾದ ಮಾನವಶಾಸ್ತ್ರೀಯ, ಸಾಂಸ್ಕೃತಿಕ, ಸಾಮಾಜಿಕ ಆಯಾಮಗಳನ್ನು ದಾಖಲೆಗೊಳಿಸಿದ ಪ್ರಥಮ ಜನಪದ ಕೃತಿಯಾಗಿ ''ಬೆಳ್ದಿಂಗಳ್ಳಪ್ಪನ ಪೂಜೆ'' ಪ್ರಕಟವಾದಾಗ ನನಗಿಂತಲೂ ಹೆಚ್ಚು ಸಂತೋಷಪಟ್ಟವರು ಡಾ. ಕಾಳೇಗೌಡ ನಾಗವಾರ, ಪ್ರೊ. ಕಿ.ರಂ. ನಾಗರಾಜ್, ಪ್ರೊ.ಕೆ.ವಿ. ನಾರಾಯಣ್, ಗೆಳೆಯರಾಗಿದ್ದ ಎಸ್.ಜಿ. ಸಿದ್ದರಾಮಯ್ಯ, ಡಾ. ಸಿದ್ದಲಿಂಗಯ್ಯ, ಡಿ.ಆರ್., ಬೀಚನಹಳ್ಳಿ ಕರೀಗೌಡ, ಡಿ.ವಿ. ರಾಜಶೇಖರ್ ಹಾಗೂ ಗೆಳತಿ 'ದಾಚಿ'.

ಆ ವೇಳೆಗೆ ಹೀಗೆ ಒಂದು ಜನಪದ ಸಂಪ್ರದಾಯವೊಂದನ್ನೇ ಪ್ರತ್ಯೇಕವಾಗಿ ಅಧ್ಯಯನ ಮಾಡಿದ್ದು ಅಪರೂಪ. ಅದಕ್ಕೆ ಅಪವಾದವೆಂದರೆ ಪ್ರೊ.ಡಿ. ಲಿಂಗಯ್ಯನವರು 'ಕೊಂತಿಪೂಜೆ' ಯನ್ನು ಕುರಿತು ಬರೆದಿದ್ದ ಒಂದು ಲೇಖನ. 'ಬೆಳ್ದಿಂಗಳ್ಳಪ್ಪನ ಪೂಜೆ' ಬಂದ ಕೆಲವು ದಿನಗಳಲ್ಲೇ 'ಕೊಂತಿಪೂಜೆ'ಯೂ ಹೆಚ್ಚಿನ ಮಾಹಿತಿಯೊಂದಿಗೆ ಪರಿಷ್ಕಾರಗೊಂಡು ಪ್ರತ್ಯೇಕ ಪುಸ್ತಕವಾಗಿ ಪ್ರಕಟಗೊಂಡದ್ದು ಕರ್ನಾಟಕ ಜಾನಪದ ಅಧ್ಯಯನದ ದೃಷ್ಟಿಯಿಂದ ಅತ್ಯಂತ ಸಂತೋಷದ ವಿಷಯ.

ಒರಿಸ್ಸಾದ ಕಟಕ್‌ನಲ್ಲಿ ೧೯೭೮ರಲ್ಲಿ ನಡೆದ ಅಂತರಾಷ್ಟ್ರೀಯ ಜಾನಪದ ಮತ್ತು ಮಾನವ ಶಾಸ್ತ್ರೀಯ ಸಮಾವೇಶದಲ್ಲಿ ಬೆಳ್ದಿಂಗಳ ಪೂಜೆಯ ಆಚರಣೆಯನ್ನು ಕುರಿತಂತೆ ನಾನು ಒಂದು ಪ್ರಬಂಧವನ್ನು ಮಂಡಿಸಿದಾಗ ಬೇರೆಬೇರೆ ದೇಶಗಳಿಂದ ಬಂದಿದ್ದ ಜಾನಪದ ವಿದ್ವಾಂಸರು ಅತ್ಯಂತ ಕುತೂಹಲವನ್ನು ವ್ಯಕ್ತಪಡಿಸಿ ನನ್ನಲ್ಲಿ ಪುಲಕವನ್ನುಂಟುಮಾಡಿದ್ದು ಮರೆಯಲಾಗದ ನೆನಪಾಗಿದೆ.

ಈಗ ಮತ್ತೆ 'ಬೆಳ್ದಿಂಗ್ಳಪ್ಪನ ಪೂಜೆ' ಪ್ರಕಟವಾಗುತ್ತಿದೆ. ಇಪ್ಪತ್ತಮೂರು ವರ್ಷಗಳ ನಂತರದ ಈ ಬೆಳ್ದಿಂಗಳಿಗೆ ಮುಖ್ಯ ಕಾರಣಕರ್ತರು ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಗೆಳೆಯ ಪ್ರೊ. ನೆಲಮನೆ ದೇವೇಗೌಡ ಹಾಗೂ ಹಾಲಿ ಅಧ್ಯಕ್ಷರಾದ ಪ್ರೊ.ಹೆಚ್.ಜೆ. ಲಕ್ಕಪ್ಪಗೌಡರು ಹಾಗೂ ಎರಡೂ ಅವಧಿಯ ಸಲಹಾಮಂಡಳಿಯ ಸದಸ್ಯರು. ಅವರೆಲ್ಲರಿಗೂ ನನ್ನ ಕೃತಜ್ಞತೆಗಳು. ಕ್ಷೇತ್ರಕಾರ್ಯ ಕಾಲದಲ್ಲಿ ಸಹಾಯಮಾಡಿದ ಪ್ರಿಯರಾದ ಹಾಗಲವಾಡಿ ಕರಿಯಪ್ಪಚೆಟ್ಟಿಯವರನ್ನು, ಅವರ ಮಿತ್ರರಾದ ಗುಡ್ಡೇನಹಳ್ಳಿ ಕರಿಯಪ್ಪ, ವೀರಭದ್ರಯ್ಯ, ರಂಗಸ್ವಾಮಿ, ಜುಂಜಪ್ಪನಹಟ್ಟಿಯ ಬೈಲಜ್ಜ ಮತ್ತು ಶಿವಪುರದ ದೊಡ್ಡಯ್ಯ ಎಲ್ಲರನ್ನೂ ಪ್ರೀತಿಯಿಂದ ನೆನೆಯುತ್ತೇನೆ. ಆಚರಣೆಯ ಸಂದರ್ಭದಲ್ಲಿ ಹಳ್ಳಿಗರು ಬರೆಯುವ ಚಿತ್ರವನ್ನೇ ಆಧರಿಸಿ ಅತ್ಯಂತ ಸಹಜ ಹಾಗೂ ಸುಂದರ ಹಸೆಯನ್ನು ಪುಸ್ತಕದ ಮುಖಪುಟಕ್ಕೆ ಬರೆದಿರುವವರು ಗೆಳೆಯ ಶ್ರೀ. ಕೆ.ಕೆ. ಮಕಾಳಿ. ಪ್ರಾಧಿಕಾರದ ಆಡಳಿತಾಧಿಕಾರಿಗಳು ಹಾಗೂ ಗೆಳೆಯರಾದ ಶ್ರೀ ವೆಂ. ಶ್ರೀನಿವಾಸ್, ಗೆಳೆಯರಾದ ಜೆ.ಎನ್. ಶಾಮರಾವ್ ಮತ್ತು ಬಸು ಇವರೆಲ್ಲರಿಗೂ ಕೃತಜ್ಞತೆಗಳು.

ಅಗ್ರಹಾರ ಕೃಷ್ಣಮೂರ್ತಿ

೩೧ ಮಾರ್ಚ್ ೧೯೯೯
ಬೆಂಗಳೂರು
ಚಾಂದ್ರಮಾನ ಪ್ರಮಾಥಿ ಸಂವತ್ಸರ
ಚೈತ್ರಶುದ್ಧ ಹುಣ್ಣಿಮೆ.

ಪೂಜೆಗೆ ಮೊದಲು

ಜಾನಪದ ಅಧ್ಯಯನದ ಉದ್ದೇಶ ಒಂದು ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳುವುದು. ನಮ್ಮದು ಹಲವು ಭಿನ್ನ ಸಂಸ್ಕೃತಿಗಳ ಘರ್ಷಣೆ ಮತ್ತು ಸಂಬಂಧಗಳಿಂದ ಉಂಟಾದ ಸಂಸ್ಕೃತಿ. ನಮ್ಮ ಯಾವುದೇ ಸಾಂಸ್ಕೃತಿಕ ಚಟುವಟಿಕೆಗಳಿಗೆ ಒಂದು ಚರಿತ್ರೆ ಹುಡುಕುವುದಾದರೆ ನಮಗೆ ಸಿಕ್ಕುವುದು ವೇದಕಾಲದ ಮತ್ತು ಅಲ್ಲಿಂದ ಈಚೆಗಿನ ವಿವರಗಳು ಮಾತ್ರ. ಆರ್ಯರ ಆಗ ಮನಕ್ಕಿಂತ ಮೊದಲು ಇದ್ದ ಜನಾಂಗಗಳ ಜೀವನ ವಿಧಾನದ ವಿವರಗಳು ನಮಗೆ ದೊರಕುತ್ತವಾದರೂ, ಅವು ತೀರಾ ತೆಳುವಾದವು. ಹೀಗಾಗಿ ಇಂದಿನ ನಮ್ಮ ಆಚಾರ-ವಿಚಾರ, ಸಂಪ್ರದಾಯ, ನಂಬಿಕೆಗಳು ಆರ್ಯಮೂಲವೋ, ಆರ್ಯೇತರ ಮೂಲವೋ-ಹೇಳುವುದು ತೊಡಕಿನ ಸಂಗತಿ.

ಬಹಳಕಾಲದಿಂದ ತಲೆಮಾರಿನಿಂದ ತಲೆಮಾರಿಗೆ ನಿರಂತರವಾಗಿ ನಡೆದು ಬಂದ ನಡವಳಿಕೆ, ಉಡುಪು, ಆಟ, ಊಟ, ಹಾಡು, ಕತೆ ಇತ್ಯಾದಿ ಗಳು ಒಂದು ಜನಾಂಗ ರೂಢಿಸಿಕೊಂಡ ಸಂಪ್ರದಾಯಗಳು. ಧಾರ್ಮಿಕ ವಿಧಿ ವಿಧಾನಗಳು, ನಂಬಿಕೆ, ಆಚರಣೆ-ಇವು ಆಗಿಂದಾಗ್ಗೆ ಅನೇಕ ತಲೆಮಾರುಗಳಿಗೆ ವಿಸ್ತರಿಸುತ್ತವೆ. ಹಾಗೆ ವಿಸ್ತರಿಸುವಾಗ ಅವುಗಳ ಸ್ಥಿತಿಯಲ್ಲಿ ಬದಲಾವಣೆಗಳಾ ಗುತ್ತಲೇ ಇರುತ್ತವೆ. ಪ್ರತಿಯೊಂದು ಜನಾಂಗ ಅವುಗಳನ್ನು ಬಹಳ ಕಟ್ಟು ನಿಟ್ಟಾಗಿ ಅಥವಾ ಪ್ರಾಮುಖ್ಯವಲ್ಲದ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿ ರುತ್ತದೆ. ಅಂದರೆ ಮೌಲ್ಯಗಳ ಬಗೆಗೆ ವ್ಯತ್ಯಸ್ಥ ನಂಬಿಕೆಗಳನ್ನಿರಿಸಿಕೊಂಡು ಅನು ಸರಿಸುತ್ತದೆ.

ಸಂಪ್ರದಾಯಗಳೆಂದರೆ ಮುಖ್ಯವಾಗಿ ಆಚರಣೆಗಳಷ್ಟೇ ಅಲ್ಲ. ಅವುಗಳ ಮೌಲ್ಯದ ಬಗೆಗಿನ ನಂಬಿಕೆಗಳನ್ನೊಳಗೊಂಡಿರುವುದೇ ಅಲ್ಲದೆ ಅವುಗಳನ್ನು ಜನಾಂಗಗಳ ಮೇಲೆ ಹೇರುತ್ತಿರುತ್ತವೆ. ಅವು ಜನಾಂಗದ ಸಂಸ್ಕೃತಿಯ ವಾಹಕ

ಗಳಾಗಿ ದುಡಿಯುತ್ತಿರುತ್ತವೆ. ''ಮತ, ಧರ್ಮಗಳಿಂದ ಪ್ರಭಾವಿತವಾದ ನಂಬುಗೆ, ಆಚರಣೆ ಮೊದಲಾದವು ಒಂದು ಜನವರ್ಗದ ಸಂಸ್ಕೃತಿಯನ್ನು ರೂಪಿಸುತ್ತವೆ; ನಮ್ಮ ಶಿಷ್ಟಾಚಾರಗಳನ್ನು ರೂಪಿಸುತ್ತವೆ; ನಮ್ಮ ಸಾಹಿತ್ಯ, ಕಲೆಗಳಲ್ಲಿ ಅವುಗಳ ಸಂಕೇತಗಳು, ಆಶಯಗಳು ಪ್ರಕಟಗೊಳ್ಳುತ್ತವೆ. ಇದಕ್ಕೆ ಸಂಪ್ರದಾಯಗಳು ಬಲವಾದ ಕಾರಣವಾಗಿವೆ. ಸಂಸ್ಕೃತಿ ಎಂಬುದು ಮುಂದುವರಿಯುವುದೇ ಸಂಪ್ರದಾಯಶೀಲತೆಯಿಂದಾಗಿ.''[೧]

ಮಾನವನಿಗೆ ಮೊದಲ ಬಾರಿಗೆ ಮಳೆಯ ಅವಶ್ಯಕತೆಯುಂಟಾದಾಗ ಅವನು 'ಹುಯ್ಯೋ ಹುಯ್ಯೋ ಮಳೆರಾಯ' ಅನ್ನುವುದು ಮಳೆಯನ್ನು ಭೂಮಿಗೆ ಇಳಿಸಿಬಿಡುತ್ತೇನೆಂಬ ನಂಬಿಕೆಯಿಂದಲ್ಲ. ಅದು ಅವನಿಗೆ ಅತ್ಯಾವಶ್ಯಕವಾದ ಮಳೆಯನ್ನು ಕುರಿತ ದಾರುಣವಾದ ಮಾನಸಿಕ ಅಭಿವ್ಯಕ್ತಿ ಅಷ್ಟೇ. ಮಳೆ ಅನಿವಾರ್ಯವಾದಾಗಲೆಲ್ಲ ಅದು ಪುನರಾವರ್ತನಗೊಳ್ಳುತ್ತದೆ. ಮುಂದುವರೆದಂತೆ ಅವನ ಮಾತು ಕಲಾತ್ಮಕ ರೂಪ ಪಡೆಯುತ್ತಾ ಹೋಗುತ್ತದೆ. ಈಗಲೂ ನಮ್ಮಲ್ಲಿ ಮಳೆ ಬರುವ ಕಾಲಕ್ಕೆ 'ಮಳೆರಾಯ'ನನ್ನು ಮಾಡುತ್ತಾರೆ. ಅವರಿಗೆ ಮಳೆರಾಯನನ್ನು ಮಾಡುವುದು ಬಹಳ ಖುಷಿಯ ಸಂಗತಿಯಾಗಿ, ಆನಂದದ ಕುಣಿತವಾಗಿಬಿಡುತ್ತದೆ. ಮೂಲ ಮಾತುಗಳಿಗೆ ಹೊಸ ರೂಪ ಬರುತ್ತದೆ:

'ಹುಯ್ಯೋ ಹುಯ್ಯೋ ಮಳೆರಾಯ
ಹೂವಿನ ಗಿಡಕೆ ನೀರಿಲ್ಲ
ಬಾರೋ ಬಾರೋ ಮಳೆರಾಯ
ಬಾಳೇ ತೋಟಕೆ ನೀರಿಲ್ಲ
ಬಾರಪ್ಪೋಽ ಮಳೆರಾಯ ನೀನು
ಬಂದುಯ್ಯೋಽ ದೇವೀಂದ್ರ'

ಹೀಗೆ ಹೊರಬಿದ್ದ ನುಡಿಗಟ್ಟುಗಳಲ್ಲಿ ನಾವು ಬಹಳ ಬೇಗ ಅದರ ಕಾವ್ಯಾತ್ಮಕತೆ, ಪ್ರಾಸ, ರೂಪ ಇತ್ಯಾದಿಗಳನ್ನು ಹುಡುಕುವುದಕ್ಕೆ ಆತುರಪಡುತ್ತೇವೆ. ಅದರಿಂದ ಮೂಲ ಭಾವನೆಯ ಸೆಲೆ ಅಡಗಿ ಅದೊಂದು ವಿನೋದವಾಗಿಬಿಡುತ್ತದೆ.

ಘಟನೆಗಳು ಪುನರಾವರ್ತನಗೊಳ್ಳುವುದು, ಮಾನವ ತನ್ನ ಪರಿಸರಕ್ಕೆ ಪ್ರತಿಕ್ರಿಯಿಸುವುದು ನಿರಂತರವಾದದ್ದು. ಅಂತಹ ಪ್ರತಿಕ್ರಿಯೆಗಳು ಒಂದು ಜನಾಂಗದ ಸಂಸ್ಕೃತಿಯ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ ಅಂಶಗಳಾ

ಗುತ್ತವೆ. ಹಾಗೆಂದು ಅವುಗಳ ಆಧಾರದಿಂದ ಒಂದು ಜನಾಂಗದ ಸಂಸ್ಕೃತಿಯ ಗುಣಮಟ್ಟವನ್ನು ಗುರುತಿಸಲು ತೊಡಗುವುದು ತಪ್ಪು.

ಸಾಮಾಜಿಕ ಮತ್ತು ಸಾಂಸ್ಕೃತಿಕ ಮಾನವ ಶಾಸ್ತ್ರವು ಪ್ರಮುಖವಾಗಿ ಸಂಸ್ಕೃತಿ, ಸಂಪ್ರದಾಯಗಳಿಗೆ ಸಂಬಂಧಿಸಿರುತ್ತದೆ. ಅವುಗಳ ಗತಕಾಲದ ಹುಟ್ಟು, ರಚನೆ, ಕಾರ್ಯ ಮತ್ತು ಪ್ರಸ್ತುತ ಸ್ಥಿತಿಯ ಬದಲಾವಣೆಗಳನ್ನು ಗುರುತಿಸಿ, ವಿಶ್ಲೇಷಿಸುವುದು ಮಾನವಶಾಸ್ತ್ರಜ್ಞರ ಕೆಲಸ. ಈ ದಿಸೆಯಲ್ಲಿ ಅಭ್ಯಾಸ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ಆದರೂ, ಸಂಪ್ರದಾಯಗಳು ಕೆಲವು ಮೌಲ್ಯಗಳನ್ನೊಳಗೊಂಡಂಥವು ಎಂದು ನಂಬಿಕೊಂಡು, ಅವು ನಿರಂತರವಾಗಿ ಮುಂದುವರಿಯುವಂತೆ ರಕ್ಷಿಸಿದ್ದರೂ ಸಹ ಪ್ರತಿಕೂಲ ಸನ್ನಿವೇಶ. ಹಾಗೂ ಆಶಯಗಳಿಂದಾಗಿ ಅವು ಈಗ ತೀವ್ರವಾಗಿ ವಿಚ್ಛಿದ್ರಗೊಳ್ಳುತ್ತಿವೆ. ಇಂಥ ಸ್ಥಿತಿ ಅಭ್ಯಾಸದ ದೃಷ್ಟಿಯಿಂದ ದೊಡ್ಡ ಕೊರತೆಯಾಗಬಹುದು.

ಪ್ರಪಂಚದಾದ್ಯಂತ ಎಲ್ಲ ಜನಾಂಗಗಳೂ ಸಂಪ್ರದಾಯಗಳನ್ನೊಳ ಗೊಂಡಿರುವಂತೆಯೇ ಕನ್ನಡನಾಡಿನಲ್ಲೂ ಅನೇಕ ಜನಪದ ಸಂಪ್ರದಾಯಗಳು ಆಚರಣೆಯಲ್ಲಿವೆ. ಆದರೆ ಅವು ಆರಂಭದಲ್ಲಿದ್ದ ರೀತಿ ನೀತಿಗಳನ್ನೇ ಅನುಸರಿ ಸಿಕೊಂಡು ಬಂದಿವೆ ಎಂದು ಹೇಳಲುಬಾರದು. ಮುಖ್ಯವಾಗಿ ಧಾರ್ಮಿಕ ಸಂಪ್ರದಾಯಗಳ ಬಗ್ಗೆ ಜನರಲ್ಲಿ ಒಂದು ರೀತಿಯ ಭೀತಿ ಇದ್ದೇ ಇರುತ್ತದೆ. ಅಂತಹ ಭಯ ಭೀತಿಗಳು ಯಾವುದೊ ಒಂದು ಘಟ್ಟದಲ್ಲಿ ಕಳಚಿಕೊಂಡು ಆ ಇಡೀ ಸಂಪ್ರದಾಯ ಅದರ ಮೂಲ ಉದ್ದೇಶ ಸ್ವರೂಪಗಳನ್ನು ಕಳೆದು ಕೊಂಡು ವೈನೋದಿಕ ಅಥವಾ ಮನರಂಜನೆಯ ಬಣ್ಣ ತಳೆಯುತ್ತದೆ. ಹಾಗೆ ಅದರ ಬಗ್ಗೆ ಮೂಲ ಆಸಕ್ತಿ ಕಳೆದುಕೊಳ್ಳಲು ಕಾರಣ ಅವುಗಳ ನಂಬಿಕೆಗಳಲ್ಲಿ ಉಂಟಾಗುವ ಮೌಲ್ಯಗಳ ಸಡಲಿಕೆ. ಈ ಹಿನ್ನೆಲೆಯಲ್ಲಿ ನಮ್ಮ ನಾಡಿನ ಒಂದು ಜನಪದ ಸಂಪ್ರದಾಯವನ್ನು ಅಭ್ಯಾಸಮಾಡುವಾಗ ಆಲೋಚಿಸಿದ ಕೆಲವು ವಿಷಯಗಳನ್ನು ನಿರೂಪಿಸುವುದು ನನ್ನ ಉದ್ದೇಶವಾಗಿದೆ.

ಪ್ರಾಚೀನ ಕಾಲದಿಂದಲೂ ಮಾನವ ಮತ್ತು ನಿಸರ್ಗದ ಸಂಬಂಧ ಗಾಢವಾದದ್ದು. ಮಾನವನ ಜೀವನ ವಿಧಾನವನ್ನು ರೂಪಿಸಿದ್ದು, ಅವನ ನಾನಾ ಬಗೆಯ ಚಟುವಟಿಕೆಗಳಿಗೆ ಕಾರಣವಾದದ್ದು ನಿಸರ್ಗ. ಕಾಲದಿಂದ ಕಾಲಕ್ಕೆ ನಿಸರ್ಗದ ಪರಿಣಾಮ ನಿರ್ದಿಷ್ಟವಾಗುತ್ತಾ ಬಂತು. ಸೂರ್ಯ ಹುಟ್ಟಿ ಬೆಳಕು ತರುವುದು, ಮುಳುಗಿದಾಗ ಕತ್ತಲಾಗುವುದು, ಚಂದ್ರನ ಶೀತಳ

ಬೆಳಕು, ಮೋಡ-ಮಳೆ, ನಕ್ಷತ್ರಗಳ ಮಿನುಗು, ಹಸಿರು, ಹೂ-ಇಂಥ ಅಸಂಖ್ಯಾತ ನೈಸರ್ಗಿಕ ವ್ಯಾಪಾರ ಮಾನವನ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನುಂಟುಮಾಡಿತು. ಆದರಿಂದಾಗಿ ನಾನಾ ಬಗೆಯ ನಂಬಿಕೆ, ಆಚರಣೆಗಳು ರೂಢಿಗೆ ಬಂದವು.

ನಮ್ಮ ಮನಸ್ಸಿನ ಆನಂದವನ್ನು ಪ್ರಚೋದಿಸುವ, ನಮ್ಮ ಉಪಯೋಗಕ್ಕೆ ಬರುವ ಯಾವ ವಸ್ತುವೂ ನಮಗೆ ಪ್ರಿಯವಾಗುತ್ತದೆ. ಅದನ್ನು ಪ್ರೀತಿಸಲು ತೊಡಗುತ್ತೇವೆ. ನಿರಂತರವಾಗಿ ಅನುಭವಿಸಬಯಸುತ್ತೇವೆ, ಪೂಜಿಸುತ್ತೇವೆ, ಆರಾಧಿಸುತ್ತೇವೆ. ನಮಗೆ ಒಪ್ಪಿಗೆಯಾಗದ ಯಾವುದೇ ವಸ್ತು ನಮ್ಮ ತಿರಸ್ಕಾರಕ್ಕೊಳಗಾಗುತ್ತದೆ.

ಸೂರ್ಯ, ಚಂದ್ರ ಜಗತ್ತಿನ ಎಲ್ಲ ಜನಾಂಗಗಳಲ್ಲೂ ಪ್ರಮುಖ ಪಾತ್ರ ವಹಿಸಿವೆ. ಅವುಗಳ ಬಗ್ಗೆ ಪ್ರತಿಜನಾಂಗವೂ ಪುರಾಣ, ನಂಬಿಕೆ, ಕತೆಗಳನ್ನೊಳಗೊಂಡಿದೆ. ಸೌರವ್ಯೂಹದ ಎಲ್ಲ ಗ್ರಹಗಳಿಗಿಂತಲೂ ನಮಗೆ ಬಹಳ ಹತ್ತಿರದಲ್ಲಿರುವ ಗ್ರಹ ಚಂದ್ರ. ಇದೊಂದೇ ಭೂಮಿಯ ಏಕೈಕ ಉಪಗ್ರಹ. ಪ್ರಪಂಚದಾದ್ಯಾಂತ ಸೂರ್ಯನನ್ನು ಆರಾಧಿಸುವ ಜನಾಂಗಗಳಿರುವಂತೆಯೇ ಚಂದ್ರನನ್ನು ಆರಾಧಿಸುವ ಜನಾಂಗಗಳೂ ಬಹಳಷ್ಟಿವೆ. ಮನುಷ್ಯನ ಭಾವಪ್ರಪಂಚದೊಡನೆ ಗಾಢ ಸಂಬಂಧವನ್ನು ಪಡೆದಿರುವುದು ಚಂದ್ರನ ಮುಖ್ಯ ಅಂಶ. ಬೇರಾವ ಆಕಾಶ ಕಾಯಗಳಿಗಿಂತಲೂ ಹೆಚ್ಚು ಕಾವ್ಯಕ್ಕೆ ಪ್ರೇರಕವಾಗಿದೆ. ಅಲ್ಲದೆ ಹೆಚ್ಚೆಚ್ಚು ಮೂಢನಂಬಿಕೆಗಳಿಗೆ ಕಾರಣವಾಗಿದೆ. ಭೂಮಿಯನ್ನು ಸುತ್ತುವ ಚಂದ್ರ ಜೀವಶಕ್ತಿಯಿಲ್ಲದ ಒಂದು ನಿರ್ಜೀವ ಪ್ರಪಂಚ. ಭೂಮಿಗೆ ಸೂರ್ಯನ ಬೆಳಕನ್ನು ಪ್ರತಿಫಲಿಸುವ ವಸ್ತು. ವೈಜ್ಞಾನಿಕವಾಗಿ ಚಂದ್ರ ಭೂಮಿಯ ಮೇಲೆ ಯಾವ ರೀತಿಯ ಪ್ರಭಾವವನ್ನೂ ಬೀರುವುದಿಲ್ಲ. ಚಂದ್ರನ ಗುರುತ್ವಾಕರ್ಷಣೆಯ ಸೆಳೆತದಿಂದಾಗಿ ಭೂಮಿಯಮೇಲೆ ಸಮುದ್ರದ ಉಬ್ಬರವಿಳಿತಗಳುಂಟಾಗುತ್ತವೆ. ಇಷ್ಟುಬಿಟ್ಟರೆ ಪ್ರಪಂಚದ ಹಲವಾರು ಕಡೆ ನಂಬಿಕೊಂಡಂತೆ ಇಲ್ಲಿನ ಹವಾಮಾನ, ಬೆಳೆ ಇತ್ಯಾದಿಗಳ ಮೇಲೆ ಯಾವ ಪ್ರಭಾವವನ್ನೂ ಬೀರುವುದಿಲ್ಲ. ಆದರೂ ಮಾನವ ಚಂದ್ರನ ಬಗ್ಗೆ ಬೆಳೆಸಿಕೊಂಡ ಕುತೂಹಲ ಹಲವು ಹತ್ತು ರೀತಿಯದು. ಆ ಹತ್ತಿರದ ಗ್ರಹದಮೇಲೆ ಪಾದಾರ್ಪಣವನ್ನೂ ಕೈಗೊಂಡನು.

ಕಾವ್ಯಲೋಕದಲ್ಲಿ ಚಂದ್ರನಿಗೆ ಮಹತ್ವದ ಸ್ಥಾನವಿದೆ. ''ಚಂದ್ರನನ್ನು ವರ್ಣನೆ ಮಾಡದೆ ಇರುವವರು ಪ್ರಸಿದ್ಧರಾದ ಕವಿಗಳಲ್ಲಿ ಯಾರೂ ಇಲ್ಲ.

ಅದರ ಸೊಗಸಿನಿಂದ ಆಕರ್ಷಿಸಲ್ಪಟ್ಟವರಾಗಿ ಹೃದಯ ವಿಕಾಸವನ್ನೂ ಆನಂದವನ್ನೂ ಹೊಂದದೆ ಇರುವವರು ಇಲ್ಲ.''[೨] ಲಾಕ್ಷಣಿಕರ ಅಭಿಪ್ರಾಯದಂತೆ ಮಹಾಕಾವ್ಯಗಳಲ್ಲಿ ಅಷ್ಟಾದಶ ವರ್ಣನೆಗಳಲ್ಲಿ ಚಂದ್ರೋದಯ ವರ್ಣನೆಯೂ ಒಂದು. ಭಾರತೀಯರಲ್ಲಿ ಸೌಂದರ್ಯಕ್ಕೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ಎಲ್ಲ ವಸ್ತುಗಳಿಗೂ ಸ್ತ್ರೀಚೈತನ್ಯಾರೋಪಣೆ ಮಾಡುತ್ತಾರೆ. ಇದು ಕೇವಲ ತಾತ್ವಿಕರಿಗೆ, ಕವಿಗಳಿಗೆ ಸೀಮಿತಗೊಂಡಿಲ್ಲ. ಅತ್ಯಂತ ಸಾಮಾನ್ಯರೂ ಸಹ ಇಂಥ ಆರೋಪಣೆ ಮಾಡುತ್ತಾರೆ. ಸುಂದರ, ಚೆಲುವು, ಲಾಲಿತ್ಯವನ್ನೊಳಗೊಂಡ ಆಕರ್ಷಣೀಯವಾದ ಯಾವ ವಸ್ತುವಿಗೂ ಸ್ತ್ರೀಯೊಂದಿಗೆ ಸಂಬಂಧ ಕಲ್ಪಿಸುವುದನ್ನು ನೋಡಬಹುದು. ಕವಿಗಳು ಹೆಣ್ಣನ್ನು ಚಂದ್ರನೊಂದಿಗೆ ಹೋಲಿಸುವುದುಂಟು. ಸೌಂದರ್ಯವೇ ಹೆಣ್ಣು ಎಂಬ ಅಭಿಪ್ರಾಯ ತಳೆದುದರಿಂದ ಸುಂದರನಾದ ಚಂದ್ರನನ್ನು ಹೆಣ್ಣಿನೊಂದಿಗೆ ಹೋಲಿಸುತ್ತಾರೆ. ''ಸಂಸ್ಕೃತ ಕವಿಗಳು ಸೌಂದರ್ಯವನ್ನು ಸೂಚಿಸಲು ಶ್ರೀ, ಲಕ್ಷ್ಮೀ, ಕಾಂತಿ ಎಂಬ ಮಾತುಗಳನ್ನು ಬಳಸಿದ್ದಾರೆ. ಚಂದ್ರ ಮತ್ತು ಕಮಲ ಎರಡೂ ಲಕ್ಷ್ಮಿಯ ಎಂದರೆ ಸೌಂದರ್ಯದ ನಿವಾಸ ಎನ್ನುವುದು ಸಂಸ್ಕೃತ ಕವಿಗಳ ಅಭಿಪ್ರಾಯ. ಹೆಣ್ಣಿನ ಚೆಲುವನ್ನು ವರ್ಣಿಸಬೇಕಾದರೆ ನಮ್ಮ ಸಂಸ್ಕೃತ ಕವಿಗಳ ಕಾವ್ಯದಲ್ಲಿ ಚಂದ್ರ ಮತ್ತು ಕಮಲಗಳಿಲ್ಲದೆ ಸಾಧ್ಯವೇ ಆಗಿಲ್ಲ.''[೩] ಕನ್ನಡ ಕವಿಗಳು ಬಹುಮಟ್ಟಿಗೆ ಸಂಸ್ಕೃತ ಕಾವ್ಯಸಿದ್ಧಾಂತ, ಸಂಪ್ರದಾಯಗಳನ್ನೇ ಅನುಸರಿಸುತ್ತಿದ್ದರಾದ್ದರಿಂದ ಅವರಲ್ಲೂ ಅಂತಹ ವರ್ಣನೆಗಳು ಬಂದವು. ಚೆಲುವು ಶೃಂಗಾರ ಎಲ್ಲಕ್ಕೂ ಸ್ತ್ರೀ ಆಧಿದೇವತೆ ಎಂದು ಎಲ್ಲ ಕವಿಗಳೂ ವರ್ಣಿಸಿದರು. ಎಲ್ಲಕ್ಕಿಂತ ಹೆಚ್ಚಾಗಿ ''ಚಂದ್ರ ಎಂಬ ವಸ್ತುವಿಗೇ ಸಹಜ ಸೌಂದರ್ಯವಿದೆ: ಮನಸ್ಸನ್ನು ಆಕರ್ಷಿಸುವ ಹಾಗೂ ಆಕ್ರಮಿಸುವ ಶಕ್ತಿ ಇದೆ.''[೪] ಹೆಣ್ಣಿನ ಮೈ ಚೆಲುವಿನ ಬಣ್ಣನೆಯಲ್ಲಿ ಕವಿ ತೋರಿರುವ ಆಸಕ್ತಿ ಅಸಾಧಾರಣವಾದುದು. ಕವಿಯ ಕಣ್ಣಿಗೆ ಹೆಣ್ಣು ಸಮಸ್ತ ಪ್ರಕೃತಿ ಸೌಂದರ್ಯದ ಕಲಶ.''[೫] ನಿಸರ್ಗದ ವಸ್ತುವಾದ ಚಂದ್ರನೇನು ಅದರಿಂದ ಹೊರತಲ್ಲ, ನಿಸರ್ಗದ ಬೇರೆಲ್ಲ ವಸ್ತುಗಳಿಗಿಂತಲೂ ಹೆಚ್ಚಿನ ಸ್ಥಾನವನ್ನು ಚಂದ್ರ ಆಕ್ರಮಿಸಿದ್ದಾನೆ. ಕಾವ್ಯಗಳಲ್ಲಿ ಚಂದ್ರೋದಯ ವರ್ಣನೆಗಳು ಬಂದರೆ ಅದು ಸ್ತ್ರೀಯರನ್ನು ವರ್ಣಿಸುವ ಉದ್ದೇಶಗಳನ್ನೊಳಗೊಂಡಿರುತ್ತವೆ. ಚಂದ್ರ ಸೌಂದರ್ಯದ ಅಳತೆಗೋಲಾಗಿ ಬಿಟ್ಟಿದ್ದಾನೆ. ಮುಖ್ಯವಾಗಿ ಪ್ರಣಯಿಗಳ ವಿರಹಾವಸ್ಥೆಯನ್ನು ತಿಳಿಸಲು ಚಂದ್ರನ ಶೀತಳ ಬೆಳದಿಂಗಳು ಇರಲೇಬೇಕು.

ಚಂದ್ರನಿಗೆ ಸಂಬಂಧಿಸಿದಂತೆ ಕಾವ್ಯದಲ್ಲಿ ಅನೇಕ ಕವಿಸಮಯಗಳನ್ನು ಬಳಸಿರುವುದು ಪ್ರಸಿದ್ಧವಾದ ಸಂಗತಿ. ವಚನಕಾರರಲ್ಲಿ ಸಹ 'ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ,' ಚಂದ್ರ ಕುಂದೆ ಕುಂದುವುದಯ್ಯಾ,' 'ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ' ಮುಂತಾದ ಮಾತುಗಳನ್ನು ಕಾಣುತ್ತೇವೆ. ಕಾವ್ಯಗಳಲ್ಲಿ ನೈದಿಲೆ ಮತ್ತು ಚಕೋರಪಕ್ಷಿಯ ಕವಿಸಮಯ ಪ್ರಸಿದ್ಧವಾದುದು. ಬೆಳದಿಂಗಳನ್ನೇ ಕುಡಿದು ಬದುಕುವ ಚಕೋರಪಕ್ಷಿ ನಮ್ಮ ಕಣ್ಣಿಗೆ ಕಾಣದಿದ್ದರೂ ಚಂದ್ರನನ್ನೇ ಕುಡಿಯುವ ಒಂದು ಆಚರಣೆ ಬಹಳ ಸ್ವಾರಸ್ಯವಾಗಿದೆ. ಮುಸ್ಲಿಂ ಧರ್ಮದಲ್ಲಿ ಚಂದ್ರನಿಗೆ ಬಹಳ ಪ್ರಾಮುಖ್ಯವಿದೆ. ಅವರ ಧರ್ಮ ಸಂಕೇತದಲ್ಲಿ ಹಸಿರು ಬಣ್ಣ, ನಕ್ಷತ್ರ, ಚಂದ್ರ ಇರುವುದನ್ನು ಗಮನಿಸಬಹುದು. ಮುಸ್ಲಿಂ ಧರ್ಮ ಹುಟ್ಟಿದ್ದು ಮರಳುಗಾಡಿನಲ್ಲಿ. ಸಹಜವಾಗಿ ಅಲ್ಲಿಯ ಜನ ಶೀತಳ ಬೆಳಕನ್ನೀಯುವ ಚಂದ್ರ ಮತ್ತು ರಾತ್ರಿಯ ನಕ್ಷತ್ರಗಳನ್ನು ಬಯಸುವುದರಲ್ಲಿ ಆಶ್ಚರ್ಯವಿಲ್ಲ. ಮುಸಲ್ಮಾನರ ನಂಬಿಕೆಯಂತೆ ಕೆಲವರು ಚಂದ್ರನನ್ನು ಕುಡಿಯುತ್ತಾರೆ. ಒಂದು ಪಾತ್ರೆಯಲ್ಲಿ ನೀರನ್ನು ಇಟ್ಟು ಪೂರ್ಣಚಂದ್ರನನ್ನು ಅದರಲ್ಲಿ ಪ್ರತಿಬಿಂಬಿಸಿ ಕಣ್ಣುಮುಚ್ಚಿ ಒಮ್ಮೆಲೆ ಕುಡಿಯುತ್ತಾರೆ. ಈ ರೀತಿಯ ಚಿಕಿತ್ಸೆಯನ್ನು ವೈದ್ಯಕೀಯ ತಜ್ಞರೂ ಸಹ ಬುದ್ಧಿಮಾಂದ್ಯತೆ ಮತ್ತು ಹೃದಯಾತಿಸ್ಪಂದನ ರೋಗಗಳಿಗೆ ಸೂಚಿಸುತ್ತಾರೆ.[೬] ಮುಸ್ಲಿಮರಿಗೆ ಚಂದ್ರ ಕಾಲದ ದೃಷ್ಟಿಯಿಂದಲೂ ಮುಖ್ಯನಾಗುತ್ತಾನೆ. ಅವರು ವರ್ಷಕ್ಕೊಮ್ಮೆ ಉಪವಾಸ ಆಚರಿಸುವ ಒಂದು ತಿಂಗಳ ಅವಧಿಯನ್ನು ಗುರುತಿಸುವುದು ಚಂದ್ರ ಹುಟ್ಟುವ ಮೊದಲ ದಿನದಿಂದಲೆ. ಮತ್ತೊಮ್ಮೆ ಅವನು ಹುಟ್ಟಿದಾಗ ಉಪವಾಸ ನಿಲ್ಲಿಸಿ ಹಬ್ಬ ಆಚರಿಸುತ್ತಾರೆ (ಈದ್ ಕ ಚಾಂದ್). ನಮ್ಮಲ್ಲೂ ಚಂದ್ರನನ್ನು 'ತಿಂಗಳು' ಎಂದು ಕರೆಯುವುದನ್ನು ಗಮನಿಸಬಹುದು. ಇಂಗ್ಲಿಷಿನಲ್ಲಿ **'Month'** ಮತ್ತು **'Moon'** ಎರಡೂ ಹತ್ತಿರದ ಸಂಬಂಧವುಳ್ಳ ಪದಗಳೆಂಬುದನ್ನು ಗಮನಿಸಬೇಕು.

ಸಕಲ ಜನರ ಪ್ರಿಯನಾದ ಚಂದ್ರನನ್ನು ಕವಿ ಲಕ್ಷ್ಮೀಶ 'ಜನಾವಲೋಕಪ್ರಿಯಂ' ಎಂದು ಕರೆದಿದ್ದಾನೆ. ಏನೇ ಆದರೂ ''ಸೌಂದರ್ಯಕ್ಕೆ ಸಮುದ್ರವಾದ ಚಂದ್ರನ ಚೆಲುವಿಕೆಯಲ್ಲಿ ಲವಲೇಶವು ಮಾತ್ರ ಕನ್ನಡ ಕವಿಗಳ ವರ್ಣನೆಯಲ್ಲಿ ರೂಪುಗೊಂಡಿದೆ.''[೭] ಕಾವ್ಯ ರಚಿಸಿದವರೆಲ್ಲ ಸಾಮಾನ್ಯವಾಗಿ ಪುರುಷರೇ ಆದುದರಿಂದ ಚೆಲುವಾದ ಬೆಳದಿಂಗಳನ್ನು ಸ್ತ್ರೀಯರ ವರ್ಣನೆಗೆ ಬಳಸಿದರೆ, ಹನ್ನೆರಡನೆಯ ಶತಮಾನದ ವಚನಕಾರ್ತಿ ಅಕ್ಕಮಹಾದೇವಿ ಚೆನ್ನ

ಮಲ್ಲಿಕಾರ್ಜುನನ ಕುರುಹನ್ನು ತಿಳಿಸಲು 'ಹೊಳೆವ ಕೆಂಜೆಡೆಗಳ ಮೇಲೆ ಎಳ ವೆಳುದಿಂಗಳು'-ಎನ್ನುತ್ತಾಳೆ.

ಚಂದ್ರನ ಶೀತಳ ಬೆಳದಿಂಗಳು ಜನಪದ ಗೀತೆಗಳಲ್ಲಿ 'ನನ್ನೂರ ಹಾಲಿ ನಂತ ಬೆಳದಿಂಗಳೇ' ಎನ್ನುವ ಸುಂದರ ಮಾತುಗಳಿಂದ ಎಲ್ಲರ ಮನಸೆಳೆದಿದೆ. ಪುರಾಣದಲ್ಲಿ ಚಂದ್ರ ಕ್ಷೀರಸಮುದ್ರದಿಂದ ಹುಟ್ಟಿದವನು. ಅವನ ಕಿರಣ ಹಾಲಿನಂತೆ ಬೆಳ್ಳಗಿದೆ. ಈ ಕಿರಣಗಳು ಮಾನವರೆಲ್ಲರನ್ನೂ ತನ್ನೆಡೆಗೆ ಆಕರ್ಷಿ ಸಿರುವ ಒಂದು ವಿಶೇಷ ಬೆಳಕು. ಬೆಳದಿಂಗಳು ಮತ್ತು ಹಾಲಿನ ಬಗ್ಗೆ ಸಂಸ್ಕೃತ ನಾಟಕಕಾರ ಭಾಸ ಬಹಳ ಸೊಗಸಾಗಿ ಹೇಳಿದ್ದಾನೆ : ಬೆಳದಿಂಗಳನ್ನೇ ಹಾಲು ಎಂದುಕೊಂಡು ಒಂದು ಬೆಕ್ಕು ತನ್ನ ಕೆನ್ನೆಯನ್ನೇ ನೆಕ್ಕಿಕೊಂಡಿತಂತೆ.[೮] ಹೀಗೆ ಬೆಳದಿಂಗಳ ನಾನಾ ರೀತಿಯ ವರ್ಣನೆಗಳನ್ನು ಕಾವ್ಯಗಳಲ್ಲಿ ಕಾಣುತ್ತೇವೆ. ರನ್ನನ ಕಲ್ಪನಾಚತುರತೆ ಅವನ ಬೆಳದಿಂಗಳ ವರ್ಣನೆಯಲ್ಲಿ ಸೊಗಸಾಗಿ ಮೂಡಿ ಬಂದಿದೆ.[೯]

ಬೆಳದಿಂಗಳ ದಿವ್ಯ ಅನುಭವವನ್ನು ಬಹುಶಃ ನಗರವಾಸಿಗಳಾರೂ ಅನುಭವಿಸಲಾರರು. ವಿದ್ಯುತ್ತಿನ ಅನುಕೂಲ ಇರುವ ಹಳ್ಳಿಗಳಲ್ಲಿ ಈಗಲೂ ಹುಣ್ಣಿಮೆಯ ದಿನಗಳಲ್ಲಿ ವಿದ್ಯುತ್ ದೀಪ ಹಾಕುವುದಿಲ್ಲ. ಅದು ಅಲ್ಲಿನ ಪಂಚಾಯಿತಿಯವರ ಉಳಿತಾಯದ ಉಪಾಯ ಕೂಡ. ಅದಕ್ಕಿಂತ ಹೆಚ್ಚಿನದು ಬೆಳದಿಂಗಳ ಸವಿಯನ್ನು ಅನುಭವಿಸುವ ಆಸೆ. ''ಬೆಳದಿಂಗಳು ಅಪೂರ್ವವಾದ, ಸಮ್ಮೋಹಕವಾದ ಸಾಮಗ್ರಿ. ಅದರ ಮಾಯೆಗೆ ಮರುಳಾಗದವರಿಲ್ಲ! ಬೆಳುದಿಂ ಗಳು ಕವಿಗಳ ಸೊತ್ತಲ್ಲ; ಸಾಮಾನ್ಯರ ಸೊತ್ತೂಕೂಡ ಆಗಿದೆ.''[೧೦]

ನಮ್ಮ ನಾಡಿನ ಹಬ್ಬಗಳನ್ನು ಅಭ್ಯಾಸ ಮಾಡುವಾಗ ಸಹ ಬಹುತೇಕ ಹಬ್ಬಗಳು ಹುಣ್ಣಿಮೆಯೊಂದಿಗೆ ಸಂಬಂಧ ಹೊಂದಿರುವುದನ್ನು ಗಮನಿಸ ಬಹುದು. ಪ್ರಾಚೀನ ಕಾಲದಲ್ಲಿ ಅಶ್ವಮೇಧಯಾಗವನ್ನು ನಿಗದಿಮಾಡಲ್ಪಡು ತ್ತಿದ್ದುದು ಪೂರ್ಣಚಂದ್ರಮೂಡಿದ ಚೈತ್ರಮಾಸದ ಹುಣ್ಣಿಮೆಯಂದು.[೧೧] ಕಾವ್ಯ ಗಳಲ್ಲಿನ 'ಕೌಮುದಿ ಮಹೋತ್ಸವ' ಬೆಳದಿಂಗಳಲ್ಲಿ ನಡೆಯುವ ಒಂದು ಸಂತೋಷದ ಹಬ್ಬ. ಕೊಡಗಿನಲ್ಲಿ ಹುತ್ತರಿಹಬ್ಬವನ್ನು ಮಾರ್ಗಶಿರ ಹುಣ್ಣಿಮೆ ಯಂದು ಆಚರಿಸಲಾಗುತ್ತದೆ. ನಮ್ಮ ಹಳ್ಳಿಗಳಲ್ಲಿ ಈಗಲೂ 'ಹೊರಬೀಡು ಸಾರುವ' ಸಂಪ್ರದಾಯವಿದೆ. ಊರಿನ ಜನರು ಒಂದು ನಿರ್ದಿಷ್ಟ ಹುಣ್ಣಿಮೆ

ಯಂದು ಹೊರಬೀಡನ್ನು ಆಚರಿಸಲು ಸಿದ್ಧಗೊಳ್ಳಬೇಕೆಂದು ಡಂಗುರ ಹೊಯ್ದು ಸಾರುವ ವ್ಯವಸ್ಥೆ ಮಾಡುತ್ತಾರೆ. ಹೊರಬೀಡು ಸಾರಿದ ಆ ಸಂದರ್ಭದಲ್ಲಿ ಊರಿನ ಯಾರ ಮನೆಗಾದರೂ ನೆಂಟರಿಷ್ಟರು ಬಂದಿದ್ದರೆ ಹೊರಬೀಡು ಸಾರಿದ ನಂತರ ಅದು ಮುಗಿಯುವವರೆಗೆ ಅವರು ತಮ್ಮ ತಮ್ಮ ಊರುಗಳಿಗೆ ಹಿಂತಿರುಗಬಾರದೆಂಬ ನಂಬಿಕೆಯೂ ಇದೆ. ಇದು ನೆಂಟರಿಷ್ಟರು ಇನ್ನಷ್ಟು ದಿನ ತಮ್ಮ ಜೊತೆಗೆ ಇರಬೇಕೆಂಬ ಹಳ್ಳಿಗರ ಇಚ್ಛೆಯನ್ನು ಪ್ರಕಟ ಗೊಳಿಸುತ್ತದೆ. ಊರಿನ ಎಲ್ಲರೂ ನಿಗಧಿಗೊಳಿಸಿದ ಹುಣ್ಣಿಮೆಯ ರಾತ್ರಿಗೆ ಬೇಕಾದ ಅಡಿಗೆ ಸಾಮಗ್ರಿಗಳೊಂದಿಗೆ ಊರಿನಿಂದ ಹೊರಗೆ ತಮ್ಮ ತಮ್ಮ ಹೊಲ, ತೋಟಗಳಿಗೆ ಹೋಗುತ್ತಾರೆ. ಹೊಲ, ತೋಟವಿಲ್ಲದ ಜನರು ಇತರರ ಹೊಲತೋಟಗಳಲ್ಲಿ ಹೊರಬೀಡನ್ನು ಆಚರಿಸುತ್ತಾರೆ. ಆ ರಾತ್ರಿ ದೇವತೆಗಳೋ, ದೆವ್ವಗಳೋ ಊರಿನಲ್ಲಿರುತ್ತವೆಂದೂ, ಒಂದು ನರಪಿಳ್ಳೆಯೂ ಊರೊಳಗೆ ಇರಕೂಡದೆಂದೂ ಹೇಳುತ್ತಾರೆ. ಇಂಥ ನಂಬಿಕೆಯ ಹಿಂದೆ ಮೂಲದಲ್ಲಿ ಒಂದು ಧಾರ್ಮಿಕ ಆಸಕ್ತಿ, ಭೀತಿ ಇದ್ದೇ ಇರುತ್ತದೆ. ಅಂತಹ ಭೀತಿ ಬರುಬರುತ್ತಾ ಮಾಯವಾಗಿ ಬೇರೆ ಸ್ವರೂಪ ತಳೆಯುತ್ತದೆ. ಹೊರ ಬೀಡನ್ನು 'ಬೆಳದಿಂಗ್ಳೂಟ' ಎಂತಲೂ ಕರೆಯುತ್ತಾರೆ. 'ಒಂದು ಹಪ್ಪಳದಲ್ಲಿ ಊರಿಗೆಲ್ಲ ಊಟ ಆಯ್ತು''[೧೨] ಎನ್ನುವುದು ಚಂದ್ರನನ್ನು ಕುರಿತ ಹಳ್ಳಿಗರ ಆಚರಣೆ ಕುರಿತ ಒಂದು ಸೊಗಸಾದ ಒಗಟು. ಇಡೀ ಹಳ್ಳಿಯೇ ಊಟಕ್ಕೆ ಕುಳಿತುಕೊಳ್ಳುವುದು ಅಂಥ ಒಂದು ಸಂದರ್ಭದಲ್ಲಿ ಮಾತ್ರ. ಈ ಒಗಟು ಒಂದು ಸಾಂಪ್ರದಾಯಕ ಸನ್ನಿವೇಶವನ್ನು ಎಷ್ಟು ಅರ್ಥಪೂರ್ಣವಾಗಿ, ಸಮರ್ಥವಾಗಿ ಹೇಳುತ್ತದೆಂಬುದು ಗಮನಾರ್ಹ.

ಮಕ್ಕಳಿಗೆ ಚಂದ್ರ 'ಚೆಂದಕ್ಕಿಮಾಮ' ಎಂದು ಪ್ರಸಿದ್ಧಿ. ಅಳುವ ಮಕ್ಕಳಿಗೆ ತಾಯಂದಿರು ಚಂದ್ರನನ್ನು ತೋರಿಸಿ ಸಮಾಧಾನ ಮಾಡುವುದನ್ನು ಕಾಣುತ್ತೇವೆ. ಶ್ರೀರಾಮ ಮಗುವಾಗಿದ್ದಾಗ ಚಂದ್ರಬೇಕೆಂದು ತನ್ನ ತಾಯಿ ಯನ್ನು ಕಾಡಿದ ಕತೆ ಇದೆ. ಹಾವಿನಿಂದ ಸುತ್ತಲ್ಪಟ್ಟ ಗಣೇಶನ ಹೊಟ್ಟೆ ನೋಡಿದ ತಕ್ಷಣ ಚಂದ್ರನ ನೆನಪಾಗುತ್ತದೆ. ಒಮ್ಮೆ ಗಣೇಶ ಎಡವಿ ಬಿದ್ದು ಹೊಟ್ಟೆ ಒಡೆದುಕೊಂಡದ್ದನ್ನು ಕಂಡ ಚಂದ್ರ ನಗುತ್ತಾನೆ. ಗಣೇಶ ಶಾಪ ಹಾಕುತ್ತಾನೆ. ಆ ಕಾರಣದಿಂದಲೇ ಗಣೇಶ ಚೌತಿಯಂದು ಚಂದ್ರನನ್ನು ನೋಡಬಾರದೆಂಬ ಶಾಪವನ್ನು ನಮ್ಮ ಜನರು ಈಗಲೂ ನಂಬಿದ್ದಾರೆ. ಈ

ನಂಬಿಕೆಯ ಹಿಂದಿನ ಚಾರಿತ್ರಿಕ ಸತ್ಯವನ್ನು ಅರಿತುಕೊಳ್ಳುವುದು ಒಳಿತು. ನಮ್ಮ ದೇವತೆಗಳ ಸಾಲಿಗೆ ಗಣೇಶ ಯಾವಾಗ ಸೇರಿದ? ಅದಕ್ಕಿಂತ ಹಿಂದೆ ಇಂಥ ನಂಬಿಕೆ ಇರಲು ಶಕ್ಯವೇ? ಮತ್ತು ಈಗಲೂ ನಮ್ಮ ಕ್ಯಾಲೆಂಡರ್‌ನಲ್ಲಿ ತಿಂಗಳಿಗೊಮ್ಮೆ ಇರುವ 'ಚಂದ್ರದರ್ಶನ'ದ ಅಂಶಗಳನ್ನು ಅಭ್ಯಾಸಮಾಡಬೇಕು. ಇರಲಿ, ಮಕ್ಕಳಿಗೆ ಚಂದ್ರ 'ಮಾವ' ಎಂತಲೇ ಹೆಚ್ಚು ಪರಿಚಿತ. ಕನ್ನಡ ನಾಡಿನ ಒಂದು ಒಗಟನ್ನು ಗಮನಿಸಬಹುದು: 'ಅಕ್ಕಗೆ ಗಂಡಲ್ಲ, ಅವ್ವಗೆ ತಮ್ಮಲ್ಲ, ಮಾವ ಅನ್ನಸ್ಕೊಳದೆ ಇರಲ್ಲ.'

ಚಂದ್ರನ ಬಗೆಗೆ ನಾನಾ ರೀತಿಯ ನಂಬಿಕೆ (ಮೂಢನಂಬಿಕೆ)ಗಳು ಉಂಟಾಗಿರಲು, ಎರಡು ಮುಖ್ಯ ಅಂಶಗಳನ್ನು ಕಾರಣಗಳನ್ನಾಗಿ ತೆಗೆದುಕೊಳ್ಳಬಹುದು. ಒಂದು ಅವನ ವೃದ್ಧಿಕ್ಷಯ ಗುಣ, ಇನ್ನೊಂದು ಅವನಲ್ಲಿ ಕಾಣುವ ಕಲೆಗಳು. ಅವನಲ್ಲಿ ಕಾಣುವ ಕಲೆಗಳಿಗೆ ಸಂಬಂಧಿಸಿದಂತೆ ಪ್ರಪಂಚದ ಬೇರೆ ಬೇರೆ ಜನಾಂಗಗಳು ತಮ್ಮವೇ ಆದ ಕತೆಗಳನ್ನೊಳಗೊಂಡಿವೆ. ಮಾನವರು ತಮ್ಮ ತಮ್ಮ ಕಲ್ಪನೆಗಳಿಗನುಗುಣವಾಗಿ ಚಂದ್ರನ ಕಲೆಗಳನ್ನು ಕಂಡಿದ್ದಾರೆ. ಒಂದು ಜನಾಂಗದವರಿಗೆ ಚಂದ್ರನಲ್ಲಿ ಒಬ್ಬ ಮನುಷ್ಯ ಕಂಡರೆ, ಇನ್ನೊಂದು ಜನಾಂಗದವರಿಗೆ ಒಂದು ಜಿಗಿಯುತ್ತಿರುವ ನಾಯಿ ಕಾಣಿಸುತ್ತದೆ. ಹೀಗೆ ಜಿಂಕೆ, ಮೊಲ, ಓರ್ವ ಚೆಲುವೆ-ಬಹಳಷ್ಟು ಮೋಹಕ ಕಲ್ಪನೆಗಳನ್ನು ಮಾಡಿದ್ದಾರೆ. ಈಜಿಪ್ಟಿನ ಜನರು ಚಂದ್ರ ಸೌದೆಯಹೊರೆಯನ್ನು ಬೆನ್ನಮೇಲೆ ಹೊರುವ ಶಿಕ್ಷೆ ಅನುಭವಿಸುತ್ತಿದ್ದಾನೆಂದು ನಂಬುತ್ತಾರೆ. ನಮ್ಮಲ್ಲಿ, ಚಂದ್ರನಲ್ಲಿರುವ ಕಲೆ ಮೊಲವೆಂದು ಅದಕ್ಕಾಗಿ ಚಂದ್ರನಿಗೆ ಶಶಾಂಕನೆಂಬ ಹೆಸರಿದೆಯೆಂದು ಹೇಳುತ್ತಾರೆ. ಒಂದು ಐತಿಹ್ಯದ ಪ್ರಕಾರ ಅಹಲ್ಯೆಯಿಂದ ಆಕರ್ಷಿತನಾದ ಚಂದ್ರ ಒಮ್ಮೆ ಅವಳೊಂದಿಗೆ ಇದ್ದುದನ್ನು ಕಂಡ ಗೌತಮ ಅಹಲ್ಯೆಗೆ ಕಲ್ಲಾಗುವಂತೆ ಶಾಪ ಹಾಕಿದ. ತನ್ನ ಪಾದರಕ್ಷೆಯನ್ನು ಚಂದ್ರನ ಮೇಲೆ ಎಸೆದ. ಇಂದಿಗೂ ಚಂದ್ರನ ಮೇಲಿರುವ ಕಲೆ ಗೌತಮನ ಪಾದರಕ್ಷೆಯದು.[೧೩] ಈ ಸಂದರ್ಭದಲ್ಲಿ ಒಂದು ಅಂಶವನ್ನು ಗಮನಿಸುವುದು ಒಳಿತು. ಕರ್ನಾಟಕದ ಆರ್ಯಪೂರ್ವ ಜನಾಂಗವನ್ನು ಹಟ್ಟಿಕಾರರು, ಹಾಲುಮತದವರು ಎಂದು ಹೇಳಿ ಅವರ ಮೂಲ ಚಂದ್ರ ಎಂಬುದನ್ನು ಕೆಲವು ಕಾರಣಗಳ ಸಹಿತ ಕನ್ನಡದ ವಿಶಿಷ್ಟ ಸಂಶೋಧಕರಾದ ಶಂ.ಬಾ. ಜೋಶಿಯವರು ವಿವರಿಸಿದ್ದಾರೆ.[೧೪] ಆರ್ಯರು ಬಂದ ನಂತರ ಆರ್ಯಪೂರ್ವ ಜನಾಂಗಗಳ ಮತ್ತು

ಆರ್ಯರ ರೀತಿ ನೀತಿಗಳನ್ನು ಅಭ್ಯಾಸಮಾಡುವುದು ತೊಡಕಿನ ಸಂಗತಿ. ವೇದಗಳಲ್ಲಿ ಸೂರ್ಯನ ಬಗ್ಗೆ ಮಾಹಿತಿಗಳು ದೊರಕುತ್ತವೆ. ಆರ್ಯರು ಸೂರ್ಯನ ಆರಾಧಕರು. ಬೆಳಕು, ಬೆಂಕಿಯನ್ನು ಆರಾಧಿಸುವವರು. ವೇದದ ಕತೆಗಳಲ್ಲಿ ಚಂದ್ರನ ಬಗೆಗಿನ ಮಾಹಿತಿ ಬಹಳ ಕಡಿಮೆ. ಎರಡು ಜನಾಂಗಗಳ ಸಮ್ಮಿಳನಾ ಪ್ರಕ್ರಿಯೆಯ ಕಾಲ ಘಟ್ಟಗಳಲ್ಲಿ ಅನೇಕ ಪುರಾಣ ಕತೆಗಳಿಗೆ, ದೇವತೆಗಳಿಗೆ ಬೇರೆ ಬೇರೆ ಸ್ವರೂಪಗಳು ಬಂದದ್ದು ನಿಜ. ಚಂದ್ರ ಮುಂದೆ ಹಿಂದೂಧರ್ಮದಲ್ಲಿ ಸೋಮನೊಂದಿಗೆ ಬೆರೆತು ಹೋಗುತ್ತಾನೆ. ಸೋಮ, ಚಂದ್ರ ಎರಡೂ ಒಂದೇ ಆಗುತ್ತ[illegible] ಚಂದ್ರ ಖಚಿತವಾಗಿ ಆರ್ಯೇತರರ ದೇವತೆಯೇ ಆಗಿದ್ದಲ್ಲಿ, ಆರ್ಯ[illegible]ತರರ ಅನೇಕ ಕತೆಗಳಲ್ಲಿ ಚಂದ್ರನನ್ನು ಅನೇಕ ವಿಪರ್ಯಾಸದ ಸಂಗತಿಗಳೊಂದಿಗೆ ಕಾಣಿಸುತ್ತಾರೆ. ಅದಕ್ಕೆ ಅನೇಕ ಪುರಾಣಕತೆಗಳ[illegible]ಧಾರಗಳಾಗು[illegible] ಮೇಲೆ ಹೇಳಿದ ಅಹಲ್ಯೆಯ ಐತಿಹ್ಯ ಕೂಡ ಅಂಥ [illegible]ಮು ಭಿನ್ನ ಸಂಸ್ಕೃತಿಗಳ ಘರ್ಷಣೆಯ ಸಂದರ್ಭದಲ್ಲಿ ಹುಟ್ಟಿರಬಹುದಾದ ಕತೆ, ಚಂದ್ರನಿಗೆ ಗಣೇಶನ ಶಾಪ, ದ್ರಾವಿಡರ ಮೂಲ ದೇವತೆಯಾದ ಶಿವ ಮುಂದೆ ಚಂದ್ರಶೇಖರ, ಸೋಮಶೇಖರ ಆದದ್ದು-ಇವೆಲ್ಲ ಸ್ವಾರಸ್ಯಪೂರ್ಣ ಸಂಗತಿಗಳು. ಚಂದ್ರನನ್ನು ಹರಿದು ಎರಡು ಭಾಗಮಾಡಿ ಹಂಚಿದ ಅಂಶಗಳನ್ನು ಪುರಾಣ ಕತೆಗಳು ಹೇಳುತ್ತವೆ. ಅನೇಕ ದೇವತೆಗಳನ್ನು ಅವಮಾನ ಮಾಡುವ, ಅವುಗಳ ಸ್ಥಾನವನ್ನು ಹೆಚ್ಚು ಕಡಿಮೆ ಮಾಡುವ ಸಂಗತಿಗಳು ನಮ್ಮ ಪುರಾಣಗಳನ್ನು ಬಹಳ ಎಚ್ಚರಿಕೆಯಿಂದ ಅಭ್ಯಾಸ ಮಾಡಿದರೆ ತಿಳಿದೀತು.

ಚಂದ್ರನ ಬಗೆಗಿನ ನಂಬಿಕೆಗಳಲ್ಲಿ ಬೆಳ್ಳಿ ಚಂದ್ರನ ಲೋಹ. ಕೆಲವರು ಚಂದ್ರ ಮೂಡುವಾಗ ಬೆಳ್ಳಿ ನಾಣ್ಯಗಳ ಎರಡೂ ಬದಿಗಳನ್ನು ಚಂದ್ರನಿಗೆ ತೋರಿಸುತ್ತಾರೆ. ಚಂದ್ರನನ್ನು ಗಾಜಿನ ಮೂಲಕ ಅಥವಾ ಮರದ ಕೊಂಬೆಗಳ ಮೂಲಕ ನೋಡುವುದರಿಂದ ಸ್ವಾಭಾವಿಕವಾಗಿ ಅವನು ತರುವ ಅದೃಷ್ಟವು ಲಭಿಸುವುದಿಲ್ಲವೆಂದು ಜನರು ನಂಬಿದ್ದರು. ಇನ್ನು ಕೆಲವರು ತಮ್ಮ ಬಳಿಯ ಹಣವನ್ನು ಚಂದ್ರನಿಗೆ ತೋರಿಸುತ್ತಾರೆ. ಚಂದ್ರ ವೃದ್ಧಿಸುವಂತೆ ತಮ್ಮ ಹಣ ವೃದ್ಧಿಸುವುದೆಂಬ ನಂಬಿಕೆ ಇದಕ್ಕೆ ಕಾರಣ. ಚಿನ್ನ, ಬೆಳ್ಳಿ ಎರಡೂ ಕ್ರಮವಾಗಿ ಸೂರ್ಯ ಮತ್ತು ಚಂದ್ರನ ಲೋಹವೆಂಬುದನ್ನು ಜನಪದ ಒಗಟುಗಳಲ್ಲಿ ಕಾಣಬಹುದು:

'ಚಿಕ್ಕ ಚಿಕ್ಕ ಗುಂಬ
ಚಿನ್ನ ಬೆಳ್ಳಿ ಗುಂಬ
ಲೋಕ ತಿರುಗೋವೆರಡೇ ಗುಂಬ'
(ಉತ್ತರ: ಸೂರ್ಯ, ಚಂದ್ರ)[೧೫]

'ನೀಲಿ ಸಮುದ್ರದಲ್ಲಿ ಬೆಳ್ಳಿ ತಟ್ಟೆ ತೇಲುತ್ತೆ,
ನೀರ ಮೊಗೆ ಮೊಗೆದು ಹೂಯುತ್ತೆ'
(ಉತ್ತರ: ಆಕಾಶ, ಚಂದ್ರ, ಬೆಳದಿಂಗಳು).[೧೬]

ಚಂದ್ರನ ವೃದ್ಧಿಕ್ಷಯಗಳಿಗೆ ಸಂಬಂಧಿಸಿದಂತೆ ಪುರಾಣಗಳು, ನಂಬಿಕೆಗಳು ಬಹಳ ವಿಚಿತ್ರ ರೀತಿಯಲ್ಲಿವೆ. ನಮ್ಮ ಪುರಾಣದ ಪ್ರಕಾರ ವೃದ್ಧಿಕ್ಷಯಗಳಿಂದ ಕೂಡಿದ ಚಂದ್ರ ಆಕಾಶದಲ್ಲಿಯೂ, ವೃದ್ಧಿಕ್ಷಯಗಳಿಲ್ಲದ ಚಂದ್ರ ಶಿವನ ಬಳಿಯೂ ಇವೆ. ಆದಕ್ಕಾಗಿ ಶಿವನಿಗೆ ಚಂದ್ರಶೇಖರನೆಂಬ ಹೆಸರಿದೆ. ಜೀವವುಳ್ಳ ಎಲ್ಲ ವಸ್ತುಗಳ ಮೇಲೆ, ಹುಟ್ಟಿನಿಂದ ಸಾವಿನವರೆಗೆ ಚಂದ್ರ ತನ್ನ ಪ್ರಭಾವ ಬೀರುತ್ತಾನೆಂಬ ನಂಬಿಕೆ ಬಲವಾಗಿತ್ತು. ಮನುಷ್ಯನ ಉತ್ಸಾಹ ಮತ್ತು ಜಡತನಗಳಿಗೆ ಚಂದ್ರನ ವೃದ್ಧಿಕ್ಷಯ ಗುಣವೇ ಕಾರಣ. ಉಪನಿಷತ್ತುಗಳಲ್ಲಿ ಈ ಪ್ರಪಂಚವನ್ನು ತ್ಯಜಿಸಿದವರೆಲ್ಲಾ ನೇರವಾಗಿ ಚಂದ್ರನಲ್ಲಿಗೆ ಹೋಗುತ್ತಾರೆ ಎಂದು ಹೇಳಲಾಗಿದೆ.[೧೭] ಈ ಗುಣಕ್ಕನುಗುಣವಾಗಿ ಅಲ್ಲಿಗೆ ಹೋದವರಿಗೆ ಮರುಜನ್ಮ ದೊರಕುತ್ತದೆ. ಚಂದ್ರ ಸ್ವರ್ಗಕ್ಕೆ ದ್ವಾರ. ಚಂದ್ರ ತನ್ನ ಪ್ರಶ್ನೆಗಳಿಗೆ ಉತ್ತರಿಸಿದವನನ್ನು ತನ್ನ ಬೆನ್ನಲ್ಲಿರುವ ಸ್ವರ್ಗಕ್ಕೆ ಕಳಿಸುತ್ತಾನೆ. ಉತ್ತರಿಸಲಾಗದವನನ್ನು ಮಳೆಯನ್ನಾಗಿ ಪರಿವರ್ತಿಸಿ ಭೂಮಿಗೆ ಸುರಿಸುತ್ತಾನೆ. ಜೀವಿಗಳ ಬೆಳವಣಿಗೆಯನ್ನು ಉದ್ದೀಪನಗೊಳಿಸಲು ಶಕ್ತಿ ಪ್ರಸರಣಮಾಡುತ್ತಾನೆ. ಅವನು ಕ್ಷಯಿಸುವಾಗ ಆ ಶಕ್ತಿ ಕುಂದುತ್ತದೆ. ಅವನು ವೃದ್ಧಿಸುವ ಸಮಯದಲ್ಲಿ ವ್ಯಾಪಾರ, ಮದುವೆ ಮುಂತಾದವುಗಳನ್ನು ಕುದುರಿಸಿದರೆ ಅವು ಯಶಸ್ವಿಯಾಗುತ್ತವೆ-ಇಂಥ ನಂಬಿಕೆಗಳು ಸಾವಿರಾರು. ನೂರಾರು ವರ್ಷಗಳ ಹಿಂದೆ ಹುಚ್ಚು, ಕುರುಡು ಅಥವಾ ಮುಖದ ವಿಕಾರತೆಗೆ ಚಂದ್ರನ ಕಿರಣಗಳೇ ಕಾರಣವೆಂದು ನಂಬಿದ್ದರು. 'ಅಮಾವಾಸ್ಯೆ, ಹುಣ್ಣಿಮೆಗಳಲ್ಲಿ ಹುಚ್ಚು ರೇಗುತ್ತೆ' ಎನ್ನುವ ಮಾತನ್ನು ಈಗಲೂ ಕೇಳುತ್ತಿರುತ್ತೇವೆ. ಚಂದ್ರನ ಸುತ್ತ ಗೂಡು (ಮಂಡಲ) ಕಟ್ಟಿದರೆ ಮಳೆಯಾಗುವುದಿಲ್ಲ- ಹೀಗೆ ಚಂದ್ರನ ಬಗ್ಗೆ ಇರುವ ನಂಬಿಕೆಗಳ ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು.

ಮನುಷ್ಯನ ಮನಸ್ಸಿನ ಮೇಲೆ ಚಂದ್ರ ಪ್ರಭಾವ ಬೀರುತ್ತಾನೆಂಬ ನಂಬಿಕೆಯನ್ನು ನಮ್ಮ ಜ್ಯೋತಿಷ್ಯ ಶಾಸ್ತ್ರಜ್ಞರು ನಂಬುತ್ತಾರೆ. 'ಮನೋಬುದ್ಧಿಪ್ರಸಾದಂತು 'ಮಾತೃ ಚಿಂತಾ ಚ ಚಂದ್ರಮಾಃ '-ಮನುಷ್ಯನ ಮನಸ್ಸು, ಬುದ್ಧಿ, ಗುಣ, ತಾಯಿ, ವ್ಯಸನ ಇವುಗಳನ್ನು ಚಂದ್ರ ಸೂಚಿಸುತ್ತಾನೆ. ಮನಸ್ಸು ಎನ್ನುವುದೊಂದು ಇರುವುದರಿಂದಲೇ ವಾನರ ನರನಾದದ್ದು. ನಮ್ಮ ಎಲ್ಲ ವ್ಯವಹಾರಗಳಿಗೆ ಮನಸ್ಸುಮುಖ್ಯವಾದದ್ದು ಎಂಬುದನ್ನು ಒಪ್ಪಬೇಕು. ಶಾಸ್ತ್ರಕಾರರು 'ಮನಏವಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ' ಎಂದಿದ್ದಾರೆ. ಆದ್ದರಿಂದ, ''ಒಬ್ಬ ವ್ಯಕ್ತಿಯ ಜಾತಕದಲ್ಲಿ ಎಲ್ಲಾ ಗ್ರಹಗಳಿಗಿಂತಲೂ ಚಂದ್ರನ ಸ್ಥಾನಕ್ಕೆ ನಾವು ಹೆಚ್ಚು ಪ್ರಾಶಸ್ತ್ಯಕೊಡಬೇಕು. ಏಕೆಂದರೆ ಚಂದ್ರ ವೃದ್ಧಿಚಂದ್ರನಾಗಿ ಶುದ್ಧನಾಗಿ ಅಂದರೆ ಅವನಿಗೆ ಪಾಪವೀಕ್ಷಣೆ, ಪಾಪ ಸಂಬಂಧಗಳಿಲ್ಲದೇ ಇದ್ದ ಪಕ್ಷದಲ್ಲಿ, ವ್ಯಕ್ತಿಯ ಮನಸ್ಸು ಸದಾ ಸಂತೋಷ ಚಿತ್ತವಾಗಿದ್ದು ಜೀವನದಲ್ಲಿ ಒದಗಬಹುದಾದ ಎಡರು ತೊಡರು, ಕಷ್ಟ ನಿಷ್ಠುರಗಳನ್ನೆಲ್ಲಾ ಸಹಿಸಿಕೊಂಡು ಸಮತ್ವದಿಂದ ಇರಲು ಸಾಧ್ಯವಾಗುತ್ತದೆ. ಹಾಗಿಲ್ಲದ ಪಕ್ಷದಲ್ಲಿ ಅಂದರೆ ಚಂದ್ರ ಕ್ಷೀಣಚಂದ್ರನಾಗಿ ಅವನಿಗೆ ಪಾಪವೀಕ್ಷಣೆ, ಪಾಪ ಸಂಬಂಧಗಳಿದ್ದ ಪಕ್ಷದಲ್ಲಿ ವ್ಯಕ್ತಿಯ ಮನಸ್ಸು ಏನು ಮಾಡಿದರೂ ಸಮಾಧಾನವಾಗಿರುವುದಿಲ್ಲ. ಒಬ್ಬ ವ್ಯಕ್ತಿಯ ಜಾತಕದಲ್ಲಿ ಚಂದ್ರನ ಸ್ಥಾನ ಸರಿಯಿಲ್ಲದಿದ್ದರೆ ಅವನಿಗೆ ಎಷ್ಟೇ ಐಶ್ವರ್ಯವಿರಲಿ, ಐಹಿಕ ಸುಖಸಂಪತ್ತುಗಳೆಂಬುದಾಗಿ ಜನಗಳು ಏನು ಹೇಳುತ್ತಾರೋ ಅವೆಲ್ಲಾ ಇದ್ದರೂ, ಮನೋರೋಗವುಳ್ಳವನಾಗಿ ದುಃಖಿಯಾಗಿಯೇ ಇರುತ್ತಾನೆ,''[೧೮] ಎಂದು ಜ್ಯೋತಿಷಿಗಳು ಹೇಳುತ್ತಾರೆ. ಜ್ಯೋತಿಷ್ಯ ಶಾಸ್ತ್ರ ಎಷ್ಟರ ಮಟ್ಟಿಗೆ ವೈಜ್ಞಾನಿಕ ಎನ್ನುವುದು ಇಲ್ಲಿಗೆ ಹೊರತಾದ ವಿಷಯ. ಮನುಷ್ಯನ ಎಲ್ಲ ಕ್ಷೇತ್ರಗಳಲ್ಲೂ ಚಂದ್ರನ ಪ್ರವೇಶ ಇರುವುದನ್ನು ಇಲ್ಲಿ ವಿಶೇಷವಾಗಿ ಗಮನಿಸಬಹುದು.

ಚಂದ್ರನ ಈ ವೃದ್ಧಿಕ್ಷಯಗಳ ಗುಣಕ್ಕೆ ಎಲ್ಲ ಕಾಲದಲ್ಲೂ ಪ್ರಪಂಚದ ನಾನಾ ಜನರು ನಂಬಿದ ಒಂದು ಸಾಮಾನ್ಯ ನಂಬಿಕೆಯೆಂದರೆ ಬೆಳೆಗೆ ಸಂಬಂಧಿಸಿದ್ದು. ಅವನು ಸಸ್ಯಗಳ ಬೆಳವಣಿಗೆಗೆ ಉತ್ತೇಜನಕಾರಿ ಎಂದು ನಂಬಿದ್ದರು. ಬೆಳೆಯುವ ಚಂದ್ರನ ಬೆಳಕಿನಲ್ಲಿ ನಾಟಿ ಮಾಡುವುದು, ಬಿತ್ತನೆ ಮಾಡುವುದು ಚಂದ್ರನ ಜೊತೆ ಜೊತೆಗೆ ತ್ವರಿತವಾಗಿ, ಸಮೃದ್ಧವಾಗಿ ಬೆಳೆಯುತ್ತವೆಂಬ ನಂಬಿಕೆಯಿಂದ. ವ್ಯವಸಾಯಕ್ಕೆ ಸಂಬಂಧಿಸಿದಂತೆ ಪ್ರಪಂಚದ ನಾನಾ ಕಡೆಯಲ್ಲಿ ಈ

ಕಲ್ಪನೆ ಇದೆ. ಈಗಲೂ ಬ್ರಿಟನ್ನಿನಲ್ಲಿ, ಚಂದ್ರನ ಶೀತಳ ಬೆಳಕು ಇಬ್ಬನಿಯನ್ನು ಉಂಟುಮಾಡಿ ಸಸ್ಯಗಳಿಗೆ ಪುಷ್ಟೀಕರಣವುಂಟುಮಾಡುವ ಸಾರವತ್ತಾದ ಅಂಶ ವನ್ನು ತುಂಬುತ್ತದೆಂದು, ಅಲ್ಲಿನ ತೋಟಗಾರರು ಮತ್ತು ರೈತರು ನಾಟಿಯ ಕೆಲಸವನ್ನು ಚಂದ್ರನ ಬೆಳಕಿನಲ್ಲಿ ಮಾಡುತ್ತಾರೆ. ಚಂದ್ರ ಕ್ಷೀಣಿಸುತ್ತಿರುವ ಸಮಯದಲ್ಲಿ ಬಿತ್ತಿದರೆ ಫಸಲು ಹೆಚ್ಚು ಸಮೃದ್ಧವಾಗುವುದಿಲ್ಲವೆಂದು ನಂಬುತ್ತಾರೆ.

ಬೆಳದಿಂಗಳಲ್ಲಿ ಬೇಟೆಯಾಡಿದರೆ ಬೇಟೆಯಾಡಿದ ಪ್ರಾಣಿಯ ಮಾಂಸ ಹೆಚ್ಚುತ್ತದೆಂಬ ನಂಬಿಕೆಯೊಂದು ಹಿಂದಿನ ಕಾಲದಲ್ಲಿತ್ತು. ಅದಕ್ಕೆ ಕಾರಣವೇನೇ ಇದ್ದರೂ ಬೆಳದಿಂಗಳ ತಂಪು ಬೆಳಕಿನಲ್ಲಿ ಆಯಾಸವಿಲ್ಲದಂತೆ ಬೇಟೆಯಾಡ ಬಹುದೆಂಬುದನ್ನು ಒಪ್ಪಬೇಕು. ಈಗಲೂ ನಮ್ಮ ಹಳ್ಳಿಗಳಲ್ಲಿ ಬೆಳದಿಂಗಳ ರಾತ್ರಿಯಲ್ಲಿ ವರ್ಷಕ್ಕೊಮ್ಮೆ ಬೇಟೆಯಾಡಲು ಹೋಗುತ್ತಾರೆ. ಬೇಟೆ ಎಂಬ ಮುಖ್ಯ ಆರ್ಥಿಕ ಚಟುವಟಿಕೆಯೊಂದನ್ನು ಹವ್ಯಾಸವಾಗಿ ಉಳಿಸಿಕೊಂಡು ಬಂದಿದ್ದಾರೆ. 'ಬೆಳದಿಂಗಳ ಪೂಜೆ' ಪದಗಳಲ್ಲಿ ಬರುವ ಕೆಲವು ಸಾಲುಗಳು ಈ ರೀತಿಯ ಪ್ರಾಚೀನ ಕಾಲದ ಮಾನವನ ಆರ್ಥಿಕ ಚಟುವಟಿಕೆಯ ಅಂಶ ಗಳನ್ನು, ನಂಬಿಕೆಗಳನ್ನು ಸೂಚಿಸುತ್ತವೆ :

ಬೆಳದಿಂಗಳಾ ಬೆಳಕಿನಾಗೇ ನಮ್ಮಣ್ಣ
ಉಳ್ಳಿಯಾ ಸೆಲ್ಲಲೋದ|| ನಮ್ಮಣ್ಣ
ತಗರಿಯಾ ಸೆಲ್ಲಲೋದ

ತಗರಿಯಾ ಸಾಲೆಲ್ಲಾ ಸರಮಲೆ ಗೆಜ್ಜಾಗಿ
ವರಮಲೆ ಗೆಜ್ಜಾಗಿ|| ನಾಯಕಾ
ನಮ್ಮಣ್ಣ ನವುಲು ಬ್ಯಾಟೋಗ್ಯವ್ನೆ

ಬೇಟೆ ಪ್ರಧಾನವಾದ ಆರ್ಥಿಕ ಚಟುವಟಿಕೆಯಾಗಿದ್ದ ಕಾಲದಲ್ಲಿ ಗಂಡಸರು ಬೇಟೆಯಾಡಲು ಹೋದಾಗ ಹೆಂಗಸರು ಕೃಷಿ ಕೆಲಸಗಳಲ್ಲಿ ತೊಡ ಗುತ್ತಿದ್ದುದನ್ನು ಮಾನವಶಾಸ್ತ್ರಜ್ಞರು ಸಿದ್ಧಮಾಡಿ ತೋರಿಸಿದ್ದಾರೆ. ಬೆಳದಿಂಗಳಲ್ಲಿ ಚೆಲ್ಲಿದ ಕಾಳುಗಳು ಗೆಜ್ಜೆ ಆದವು, ಕೆಲವುಕಡೆ ಮುತ್ತು ('ಮುತ್ತಾದ್ವು') ಆದ ವೆಂಬ ರೂಪಕಗಳು ಜನಪದಗೀತೆಗಳಲ್ಲಿ ದೊರಕುತ್ತವೆ. ಕೃಷಿಯನ್ನು ಪ್ರಧಾನ ಆರ್ಥಿಕ ಚಟುವಟಿಕೆಯನ್ನಾಗಿ ರೂಢಿಸಿಕೊಳ್ಳುವುದಕ್ಕೆ ಮೊದಲು ಮಾನವ ಬೇಟೆಯಾಡುತ್ತಾ ಅಲೆಮಾರಿಯಾಗಿದ್ದನು. ಅಲೆಮಾರಿ ಜೀವನದಲ್ಲಿ ತೃಪ್ತ

ನಾಗಿದ್ದ ಅವನಿಗೆ ಬರುಬರುತ್ತಾ ಅನೇಕ ಸಮಸ್ಯೆಗಳನ್ನು ಎದುರಿಸುವ ಸ್ಥಿತಿಯೊದಗಿತು. ಜನಸಂಖ್ಯೆ ಹೆಚ್ಚಾದಂತೆ ಉತ್ಪಾದನೆಯ ಹೆಚ್ಚಳ ಅನಿವಾರ್ಯವಾಗಬೇಕಾಯಿತು. ಅವನ ದುಡಿಮೆಯ ಕಾಲ ಹೆಚ್ಚಾಗಬೇಕಾಯಿತು. ಆದಿಮಾನವನ ಬುದ್ಧಿ ಬೆಳವಣಿಗೆಯಾದಂತೆ ಉತ್ಪಾದನೆ ಹೆಚ್ಚಿಸಿಕೊಳ್ಳಲು ಬೆಳದಿಂಗಳಿನ ಬೆಳಕಿನಲ್ಲಿ ಬೇಟೆಯಾಡಲು ಪ್ರಾರಂಭಿಸಿರಬಹುದು. ತಂಪಾದ ಬೆಳದಿಂಗಳು ಬೇಟೆಗೆ ಪ್ರಶಸ್ತವಾಗಿದ್ದಿರಬಹುದು. ಅಂಥ ಸಂದರ್ಭದಲ್ಲಿ ಗಂಡಸರು ಬೇಟೆ ಹೊರಟಾಗ ಹೆಂಗಸರು ಚಂದ್ರನ ಉಪಯುಕ್ತತೆಯ ಕಾರಣದಿಂದ ಆರಾಧಿಸಲು ತೊಡಗಿರಬಹುದು. 'ಬೆಳದಿಂಗಳ ಪೂಜೆ'ಯ ಸಂದರ್ಭದಲ್ಲಿ ಚಂದ್ರನ ಹಸೆ ಬರೆಯುವಾಗ ಒಂದು ಜಿಂಕೆ ಮತ್ತು ಹೋರಿ ಅಥವಾ ಗಿಣಿಯನ್ನು ಬರೆಯುತ್ತಾರೆ. ಅವಕ್ಕೂ ಪೂಜೆ ಸಲ್ಲುತ್ತದೆ. ಇಲ್ಲಿ ಜಿಂಕೆ ಬೇಟೆಯ ಸಂಕೇತವಾಗಿರಬಹುದು. ನಮ್ಮ ಅನೇಕ ಜನಪದ ಕತೆ, ನಂಬಿಕೆ ಮುಂತಾದವುಗಳಲ್ಲಿ ಒಬ್ಬ ವ್ಯಕ್ತಿ ತನ್ನವರನ್ನು ಬಿಟ್ಟು ದೂರ ಹೋಗಬೇಕಾದರೆ ಮರಳಿ ಬರುವವರೆಗೆ ಕೆಲವು ನಿಯಮಗಳನ್ನು ಪಾಲಿಸುವಂತೆ ಹೇಳಿ ಹೋಗುವುದುಂಟು. ತನ್ನ ಪ್ರಾಣ ಒಂದು ಪ್ರಾಣಿಯಲ್ಲಿ ಅಥವಾ ಒಂದು ಗಿಡದಲ್ಲಿ ಇರುವುದಾಗಿಯೂ ಅದನ್ನು ಜೋಪಾನವಾಗಿ ಕಾಪಾಡುವಂತೆಯೂ ಹೇಳುವುದನ್ನು ಕಾಣುತ್ತೇವೆ. ಪ್ರಸ್ತುತ ಆರಾಧನೆಯ ಹಸೆಯಲ್ಲಿ ಬರೆಯಲಾಗುವ ಜಿಂಕೆ, ಹೋರಿ ಅಥವಾ ಗಿಣಿಗಳ ಚಿತ್ರದ ಬಗ್ಗೆ ಕೆಲವು ಊಹೆಗಳನ್ನು ಮಾಡಬಹುದು. ಕೃಷಿ ಪ್ರಧಾನ ಚಟುವಟಿಕೆಯಾದ ನಂತರ ಬೆಳದಿಂಗಳು ಒಂದು ಪಳೆಯುಳಿಕೆಯಾಗಿ, ಆರಾಧನೆಯ ರೂಪದಲ್ಲಿ ಉಳಿದು ಬಂದಿರಬಹುದು. ಸಾಕಾಣಿಕೆ ಪ್ರವೃತ್ತಿ ಪ್ರಾರಂಭವಾದ ಮೇಲೆ ಹುಲ್ಲುಗಾವಲುಗಳಿಗೆ ಪ್ರಯಾಣ ಮಾಡುವಾಗ ಚಂದ್ರನ ತಂಪು ಬೆಳಕು ಬಹಳ ಸಹಾಯಕವಾಗುತ್ತಿತ್ತು. ಬಹುಶಃ ಇಂಥ ಒಂದು ಕಾರಣಕ್ಕಾಗಿಯೇ ಯಹೂದ್ಯರು ಹುಣ್ಣಿಮೆಯ ರಾತ್ರಿಯನ್ನು ರಾಷ್ಟ್ರೀಯ ದಿನಾಚರಣೆಯನ್ನಾಗಿ ಆಚರಿಸುತ್ತಾರೆ.[೧೯]

ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ, ಬೇರೆ ಬೇರೆ ರೂಪಗಳಲ್ಲಿ ಚಂದ್ರ ಆರಾಧಿಸಲ್ಪಡುತ್ತಿದ್ದ. ಬಹುದೇವತಾರಾಧನೆ ರೂಢಿಯಲ್ಲಿದ್ದ ಕಡೆಗಳಲ್ಲೆಲ್ಲಾ ಸ್ವರ್ಗೀಯ ಅಥವಾ ಆಕಾಶಕಾಯಗಳನ್ನು ಆರಾಧಿಸುತ್ತಿದ್ದರು. ಅವುಗಳಲ್ಲಿ ಚಂದ್ರ ಪ್ರಾಚೀನತಮ ಆರಾಧ್ಯಯೋಗ್ಯನಾಗಿದ್ದನೆನ್ನಲಾಗಿದೆ. ಗ್ರೀಕ್ ಪುರಾಣಗಳಲ್ಲಿ ಆರ್ತಿಮಿಸ್ **(Artemis)** ಕನ್ಯೆದೇವತೆ ಚಂದ್ರನಿಗೆ ಸಂಬಂಧಿಸಿದ ದೇವತೆ. ಗ್ರೀಕರು ಅವಳನ್ನು ಕಾಡು ಮೇಡುಗಳಲ್ಲಿ ಅಲೆಯುವ, ಬೇಟೆಗೆ

ಸಂಬಂಧಿಸಿದ ರಕ್ಷಕ ದೇವತೆಯೆಂದು ಪ್ರೀತಿಸಿ ಪೂಜಿಸುತ್ತಾರೆ. ಪ್ರಾಚೀನ ಇಟಲಿಯ ಡಯಾನಾ (Diana) ಬರುಬರುತ್ತಾ ಗ್ರೀಕರ ಆರ್ತಿಮಿಸ್ ದೇವತೆಯೊಂದಿಗೆ ಪೂರ್ಣವಾಗಿ ಬೆರತುಹೋಗುತ್ತಾಳೆ. ಇಟಲಿಯ ಡಯಾನಾ ದೇವತೆಯನ್ನು ಜನರು ಚಂದ್ರನೆಂದು, ಸಂತಾನ ದೇವತೆಯೆಂದು ಪೂಜಿಸುತ್ತಿದ್ದರು. ಹೆಂಗಸರು ವಿವಾಹದ ಸುಖ ಸಂತೋಷಕ್ಕಾಗಿ ಈ ದೇವತೆಯನ್ನು ಪ್ರಾರ್ಥಿಸುತ್ತಿದ್ದರು. ಗರ್ಭಿಣಿಯರು ಸುಲಭವಾದ ಹೆರಿಗೆಗಾಗಿ ಪೂಜಿಸುತ್ತಿದ್ದರು.[೨೦] ಚೀನಾ ದೇಶದ ಜನಗಳು ಚಂದ್ರನೊಂದಿಗೆ ಸೂಕ್ಷ್ಮ ರೀತಿಯ ಆಕರ್ಷಣೆಗಳನ್ನು ಹೊಂದಿದ್ದರು. ಚಂದ್ರ ಅವರಿಗೆ ಪ್ರೇಮ ದೇವತೆ. ಅವರ ಪುರಾಣದಲ್ಲಿ ಚಾಂಗ್ ಓ (Chang O-ಚಂದ್ರದೇವತೆ) ಸ್ವರ್ಗದಲ್ಲಿದ್ದು ಮನುಷ್ಯರ ಆಸೆ, ಸಂತೋಷ, ದುರಂತ ಇವುಗಳನ್ನು ಅವಲೋಕಿಸುತ್ತಿರುತ್ತಾನೆ.[೨೧] ಬ್ಯಾಬಿಲೋನಿಯಾ ಮತ್ತು ಅಸ್ಸೀರಿಯಾ ದೇಶಗಳ ಸಂಸ್ಕೃತಿಯಲ್ಲಿ ಚಂದ್ರನಿಗೆ ಮಹತ್ವದ ಸ್ಥಾನವಿದೆ. ಭಾರತೀಯರಲ್ಲೂ ಚಂದ್ರನನ್ನು ಆರಾಧಿಸುವ ರೂಢಿಯಿತ್ತು. ನಮ್ಮಲ್ಲಿ ಅನೇಕ ಪುರಾಣ ಪುರುಷರ, ರಾಜರ ವಂಶಕ್ಕೆ ಮೂಲ ಪುರುಷರು ಸೂರ್ಯ, ಚಂದ್ರರೇ ಆಗಿದ್ದಾರೆ.

ಕನ್ನಡನಾಡಿನ ಕೆಲವು ಭಾಗಗಳಲ್ಲಿ ಚಂದ್ರನನ್ನು ಬೆಳದಿಂಗಳ ರೂಪದಲ್ಲಿ ಆರಾಧಿಸುತ್ತಾರೆ. ಅದು ಸಂಪೂರ್ಣವಾಗಿ ಒಂದು ಜನಪದ ಸಂಪ್ರದಾಯ. ಈಗ ನಮಗೆ ದೊರಕುವ ಪೂಜೆಯ ವಿಧಾನದಿಂದ ಅದರ ಸ್ಪಷ್ಟವಾದ ಮೂಲ ಸ್ವರೂಪ ದೊರಕುವುದಿಲ್ಲ. ಚಂದ್ರನನ್ನು ಪೂಜಿಸುವ ಈ ಆಚರಣೆ ಅನೇಕ ಅವಸ್ಥಾಂತರಗಳನ್ನು ದಾಟಿ ಉಳಿದುಕೊಂಡಿದೆ. ಈಗ ಲಭ್ಯವಾಗುವ ಆಚರಣೆಯ ಸ್ವರೂಪ ಬಹುಶಃ ಕೊನೆಯ ಹಂತದ್ದೆನ್ನಬಹುದು, ಏಕೆಂದರೆ ಯಾವುದೇ ಒಂದು ಧಾರ್ಮಿಕ ಆಚರಣೆ ಒಂದು ಜನಾಂಗದ ಮುಖ್ಯ ಸಂಪ್ರದಾಯವಾಗಿರುತ್ತದೆ. ಅದರ ಹಿಂದೆ ಆ ಜನರ ಗೌರವ, ಭಯ, ಭಕ್ತಿಯನ್ನು ಸ್ಪಷ್ಟವಾಗಿ ಗುರುತಿಸಬಹುದು. ಅಂಥ ಪೂರ್ವ ಮೌಲ್ಯರಹಿತ ಸ್ಥಿತಿಯ ಆಚರಣೆ ತನ್ನತನವನ್ನು ಮಾರ್ಪಡಿಸಿಕೊಳ್ಳುತ್ತಾ ಹೋಗುತ್ತದೆ. ಮನರಂಜನೆಯ ಆಚರಣೆಯಾಗುತ್ತದೆ. ಜನರಿಗೆ ಅದರ ಬಗ್ಗೆ ಕಾಳಜಿ ಕಡಿಮೆಯಾಗುತ್ತದೆ.

ನಮ್ಮ ನಾಡಿನ ಕೆಲವು ಸ್ಥಳಗಳಲ್ಲಿ ಚಂದ್ರನ ಆರಾಧನೆಯನ್ನು ಬೆಳದಿಂಗಳಪ್ಪನ ಪೂಜೆ, ಬೆಳದಿಂಗ್ಳಪ್ಪನ್ನ ಹೊಯ್ಯುವುದು, ಚಂದ್ರಾಮನ ಪೂಜೆ, ಚೆಂದ್ರಮ್ಮನ ಪೂಜೆ, ತಿಂಗಳು ಮಾವನ ಪೂಜೆ- ಎಂದು ಹಲವು ಹೆಸರುಗಳಲ್ಲಿ

ಕರೆಯುತ್ತಾರೆ. ಹಳ್ಳಿಗರ ಬಾಯಲ್ಲಿ 'ಚಂದ್ರ' ಅನೇಕ ವೇಳೆ 'ಚೆಂದ್ರಮ್ಮ' ಆಗುವುದನ್ನು ಭಾಷಾಶಾಸ್ತ್ರದ ವಿದ್ಯಾರ್ಥಿಗಳು ಗಮನಿಸಬಹುದು. ಸೂರ್ಯನನ್ನು ಸಹ 'ಸೂರ್ಯದಮ್ಮ' ಎನ್ನುತ್ತಾರೆ. ಸೂರ್ಯ-ಸೂರ್ಯಧಾಮ-ಸೂರ್ಯದಮ್ಮ ಆಗುವುದು, ಚಂದ್ರ-ಚಂದ್ರಮ-ಚಂದ್ರಾಮ-ಚೆಂದ್ರಮ್ಮ ಆಗುವುದು. ಹೀಗೆ 'ಚಂದ್ರಾಮ'ನಿಗೆ ಇದ್ದ 'ಬಾರಪ್ಪ ಬೆಳದಿಂಗಳೇ,' 'ಚೆಂದ್ರಮ್ಮ' ಆದಾಗ 'ಬಾರಕ್ಕ ಬೆಳದಿಂಗಳೇ' ಆಗುತ್ತದೆ.

ನಮ್ಮ ಸಂಸ್ಕೃತಿಯಲ್ಲಿ ಪೂಜೆಯ ಕಲ್ಪನೆ ಎರಡು ರೀತಿಯದೆಂದು ಬಹಳ ಸ್ಪಷ್ಟವಾಗಿ ಗುರುತಿಸಬಹುದು. ಆರ್ಯರ ಪೂಜೆಯ ವಿಧಾನ ಹೋಮ ಹವನಾದಿಗಳ ರೂಪದಲ್ಲಿರುತ್ತದೆ. ಅಗ್ನಿಗೆ ಆಹಾರ ಪದಾರ್ಥಗಳನ್ನು, ಮದ್ಯ, ಮಾಂಸಾದಿಗಳನ್ನು ಅರ್ಪಿಸುತ್ತಿದ್ದರು. ಆದರೆ ಈ ಪದ್ಧತಿಗೆ ತೀವ್ರ ವಿರುದ್ಧವಾದ ಪದ್ಧತಿ 'ಪೂಜೆ'. ಇದು ಸಂಪೂರ್ಣವಾಗಿ ಆರ್ಯೇತರ ಕಲ್ಪನೆ. ಒಂದು ವಿಗ್ರಹ ಅಥವಾ ವಸ್ತುವನ್ನು ದೈವತ್ವದ ಆರೋಪಣೆಗೆ ಗುರಿಮಾಡಿ ಅದನ್ನು ಬಹಳ ಗೌರವ ಮತ್ತು ಭಯದಿಂದ ಸತ್ಕರಿಸುತ್ತಾರೆ. ಹೂವು, ಹಣ್ಣು, ಎಲೆ ಮುಂತಾದವುಗಳಿಂದ 'ಪೂಜೆ' ಮಾಡುತ್ತಾರೆ. ಈ ಸಂಗತಿಯಿಂದಲೇ ಅನೇಕ ಜಾನಪದ ಆಚರಣೆಗಳನ್ನು (ತಿಂಗಳು ಮಾವನ ಪೂಜೆ, ಕೊಂತಿ ಪೂಜೆ, ಗುಳ್ಳವ್ವನ ಪೂಜೆ, ಶೀಗೀ ಗೌರಿಯ ಪೂಜೆ, ಬಸವನ ಪೂಜೆ-ಇತ್ಯಾದಿ), ಅವುಗಳಲ್ಲಿ ಕಾಣುವ 'ಪೂಜೆ' ಪದದಿಂದಾಗಿ ಆರ್ಯೇತರರ ಸಂಪ್ರದಾಯಗಳೆಂದು ಗುರುತಿಸಬಹುದು. ಬೆಳದಿಂಗಳ ಪೂಜೆಯ ಸಂದರ್ಭದಲ್ಲಿ ಚಂದ್ರನಿಗೆ ಮಾಡುವ ಮದುವೆಯನ್ನು ಗಮನಿಸಬೇಕು. ಪ್ರಪಂಚದ ಬೇರೆ ಬೇರೆ ಜನಾಂಗಗಳಲ್ಲಿ ಕೆಲವು ಸಾಂಕೇತಿಕ ವಿನೋದ ಮದುವೆಗಳನ್ನು ಕೃಷಿ ಬೆಳೆಗಳ ಸಮೃದ್ಧ ಬೆಳವಣಿಗೆಯ ಕಾರಣಕ್ಕಾಗಿ ಮಾಡುವುದನ್ನು ಸುಪ್ರಸಿದ್ಧ ಸಂಶೋಧಕ, ಮಾನವಶಾಸ್ತ್ರಜ್ಞ ಜೆ.ಜಿ. ಫ್ರೇಜರ್ ತಮ್ಮ 'ಗೋಲ್ಡನ್ ಬೋ' ಎಂಬ ಜಗದ್ವಿಖ್ಯಾತ ಗ್ರಂಥದಲ್ಲಿ ವಿವರಿಸಿದ್ದಾರೆ. ಬೆಳದಿಂಗಳ ಪೂಜೆಯ ಸಂದರ್ಭದಲ್ಲಿಯೂ ಸಹ ಅಂಥ ಒಂದು ಅಣಕು ಮದುವೆ ನಡೆಯುತ್ತದೆ. ಆದರೆ ಇಲ್ಲಿ ಅಂಥದೇ ನಂಬಿಕೆಯನ್ನೊಳಗೊಂಡಿದೆ ಎಂದು ಖಚಿತವಾಗಿ ಹೇಳುವುದು ಕಷ್ಟ. ಈ ಪೂಜೆಯ ಹಾಡುಗಳಲ್ಲಿ ಚಂದ್ರನಿಗೆ ಮದುವೆ ಆಗಿಲ್ಲವೆಂಬ ಮಾತುಗಳಿವೆ. ಅದಕ್ಕಾಗಿ ಅವನಿಗೆ ಮದುವೆ ಮಾಡುತ್ತೇವೆಂದು ಆಚರಿಸುವವರು ನಂಬಿದ್ದಾರೆ. ಆದರೆ ನಮ್ಮ ಪುರಾಣಗಳ ಪ್ರಕಾರ ಚಂದ್ರ ದಕ್ಷ ಪುತ್ರಿಯರಲ್ಲಿ ಅಶ್ವಿನೀ

ಮೊದಲಾದ ಇಪ್ಪತ್ತೇಳು ಕನ್ಯೆಯರನ್ನು ಮದುವೆಯಾಗಿದ್ದ. ಅಲ್ಲದೆ, ಅವನ ಮೇಲೆ ಗುರುಪತ್ನಿಯನ್ನು ಕದ್ದ ಆರೋಪವೂ ಇದೆ.[೨೨] ಪುರಾಣಗಳಲ್ಲಿ ಅವನ ಮದುವೆ ಬಹಳ ಗೊಂದಲಮಯವಾಗಿದೆ. ಚಂದ್ರನಿಗೆ ಮದುವೆಯೇ ಇಲ್ಲವೆಂಬ ಜನಪದ ನಂಬಿಕೆ ಮತ್ತು ಪುರಾಣಗಳ ಗೊಂದಲಮಯ ಮದುವೆ-ಇವೆರಡರ ನಡುವಿನ ಅಸಂಗತ ಅಂಶ ಕುತೂಹಲಪೂರ್ಣವಾದದ್ದು. ಋಗ್ವೇದದಲ್ಲಿ ಚಂದ್ರ ಸೂರ್ಯರ ಮದುವೆಯ ಕೆಲವು ಮಾಹಿತಿಗಳು ಸಿಗುತ್ತವೆ.[೨೩]

ಆರ್ಯರದು ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಾದರೆ ದ್ರಾವಿಡರದು ಸ್ತ್ರೀ ಪ್ರಧಾನ. ದ್ರಾವಿಡರಲ್ಲಿ ಸ್ತ್ರೀ ದೇವತೆಗಳ ಪೂಜೆಯನ್ನು ಮುಖ್ಯವಾಗಿ ಗುರುತಿಸಬಹುದು. ಇವರಲ್ಲಿ ಚಂದ್ರನ ಪೂಜೆಯ ಸಂಬಂಧವನ್ನು ಹುಡುಕುವುದಕ್ಕೆ ಕೆಲವು ಕಾರಣಗಳನ್ನು ಹುಡುಕಬಹುದು. ಈ ಜನಾಂಗದ ಹಬ್ಬಗಳೆಲ್ಲ ಬಹುತರವಾಗಿ ಹುಣ್ಣಿಮೆಯಲ್ಲಿ ನಡೆಯುತ್ತವೆ. ಇವರ ಒಂದು ನಂಬಿಕೆಯ ಪ್ರಕಾರ ಒಬ್ಬ ಚೆಲುವಾದ ಹುಡುಗ ದೊರೆಯುವವರೆಗೂ ನಮ್ಮ ನಾಡಿನ ಹುಡುಗಿಯರಿಗೆಲ್ಲ 'ಚಂದ್ರಾಮರಾಯ'ನೇ ಗಂಡ. ಈ ಎಲ್ಲ ವಿಚಾರಗಳಿಂದ ದ್ರಾವಿಡರ ಅಧಿಪತಿ ಚಂದ್ರನೆಂದು ಯೋಚಿಸಬಹುದು.[೨೪] ಕೆಲವು ಹೆಂಗಸರು ತಾವು ಧರಿಸುವ ಗರ್ಭಕ್ಕೆ ಕಾರಣ ಚಂದ್ರನೆಂದು ನಂಬುತ್ತಾರೆ.[೨೫] ಚಂದ್ರನ ಮಾಸಚಕ್ರ ಮತ್ತು ಹೆಂಗಸರ ಋತುಚಕ್ರ ಎರಡೂ ಇಪ್ಪತ್ತೆಂಟು ದಿನಗಳಿಗೆ ಒಮ್ಮೆ ಎಂದು ಲೆಕ್ಕ ಹಾಕುತ್ತಾರೆ. ಕೆಲವರು ಚಂದ್ರಕಿರಣಗಳು ಹೆಣ್ಣಿನ ಮಾಸಚಕ್ರವನ್ನು ನಿಯಂತ್ರಿಸುತ್ತವೆಂದು ನಂಬುತ್ತಾರೆ. ಈಗಲೂ ಹೆಂಗಸರೇ ಚಂದ್ರನ ಪೂಜೆ ಮಾಡುವುದಕ್ಕೆ ಕಾರಣ, ಚಂದ್ರ ಗರ್ಭರಕ್ಷಕ ಹಾಗೂ ಸಂತಾನ ದೇವತೆ ಎಂಬ ನಂಬಿಕೆಯಿಂದಾಗಿರಬೇಕು.

ಕರ್ನಾಟಕದಲ್ಲಿ ತುಮಕೂರು ಜಿಲ್ಲೆ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಸುತ್ತಮುತ್ತ, ಹಾಸನ, ಚಿಕ್ಕಮಗಳೂರು, ಅರಸೀಕೆರೆ-ಈ ನಡುವಣ ಪ್ರದೇಶದಲ್ಲಿ ಈ ಸಂಪ್ರದಾಯ ಆಚರಣೆಯಲ್ಲಿದೆ (ಬೇರೆಲ್ಲೆಲ್ಲಿ ಇದೆಯೋ ತಿಳಿಯದು). ಉತ್ತರ ಕರ್ನಾಟಕದಲ್ಲಿ 'ಗುಡಿಯ ಹುಣ್ಣಿಮೆ' ಸಂಪ್ರದಾಯ ಬೆಳದಿಂಗಳ ಆರಾಧನೆಗೆ ಸಂಬಂಧಿಸಿದ್ದು. ಅದನ್ನು ದೇವರು ಕರೆದುಕೊಳ್ಳುವ ಸಂಪ್ರದಾಯವೆಂದು ಕರೆಯುತ್ತಾರೆ. ಕೋಲಾರ ಜಿಲ್ಲೆಯಲ್ಲಿ ಇದನ್ನು ತೆಲುಗು ಜನಪದ ಸಂಪ್ರದಾಯದಲ್ಲಿ ಗುರುತಿಸಬಹುದು. ಆಂಧ್ರ ಪ್ರದೇಶದ ಕನ್ನಡ

ಸರಹದ್ದು ಪ್ರಾಂತಗಳಲ್ಲಿ ವಿಶೇಷವಾಗಿ ಮಡಕಶಿರ, ಹಿಂದೂಪುರ, ಮತ್ತು ಅನಂತಪುರ-ಈ ಸ್ಥಳಗಳಲ್ಲಿ ಈ ಸಂಪ್ರದಾಯವನ್ನು 'ಸುನ್ನಬೂಲು,' 'ಸುನ್ನ ಪ್ಪೂಲು' ಎನ್ನುವ ಆಚರಣೆಯಲ್ಲಿ ಗುರುತಿಸಬಹುದು. ಇದನ್ನು 'ಚೆಂದ್ರಮ್ಮನು ಪೋಸೇದಿ' (ಚಂದ್ರಮ್ಮನ ಹೊಯ್ಯುವುದು), 'ಚೆಂದ್ರಮ್ಮ ಪಾಟ' (ಚೆಂದ್ರಮ್ಮನ ಹಾಡು) ಎಂದೂ ಕರೆಯುತ್ತಾರೆ.

ಮುಂದಿನ ಅಧ್ಯಾಯದಲ್ಲಿ ವಿವರಿಸಿರುವ ಆಚರಣೆಯ ವಿವರಗಳು ಮತ್ತು ಹಾಡುಗಳು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು ಹಾಗಲವಾಡಿ, ಶಿವಪುರ, ಗುಡ್ಡೇನಹಳ್ಳಿ, ಚಿತ್ರ ದೇವರ ಹಟ್ಟಿ, ಜುಂಜಪ್ಪನ ಹಟ್ಟಿ ಮತ್ತು ಕೊರಟಗೆರೆ ತಾಲ್ಲೂಕಿನ ಜೆಟ್ಟಿ ಅಗ್ರಹಾರ, ಕಲ್ಲಗುಟ್ಟರ ಹಳ್ಳಿ ಸುತ್ತಮುತ್ತಲ ಪ್ರದೇಶದವು. ಈ ಆಚರಣೆ ಶಿರಾ, ಮಧುಗಿರಿ ತಾಲ್ಲೂಕಿನಲ್ಲಿ ವಿಶೇಷವಾಗಿದೆ ಯೆಂದು ತಿಳಿದುಬರುತ್ತದೆ. ಈ ಪ್ರದೇಶಗಳಿಗೆ ಸೇರಿದ ಆಸಕ್ತರು ಈ ವಿಷಯದ ಬಗ್ಗೆ ಇನ್ನೂ ಹೆಚ್ಚು ಮಾಹಿತಿಗಳನ್ನು ಸಂಗ್ರಹಿಸಬಹುದು. ಅಲ್ಲಿ ಯವರೆಗೆ ಈ ಸಂಪ್ರದಾಯದ ಅಭ್ಯಾಸ ಅಪೂರ್ಣವೆಂದೇ ಭಾವಿಸ ಬೇಕಾಗುತ್ತದೆ.

ಅಡಿ ಟಿಪ್ಪಣಿಗಳು

೧. ಜಾನಪದ ಗೀತೆಗಳು; ಕೆ. ಶಿವರಾಮ ಕಾರಂತ ಪು.೫

೨. ಕರ್ನಾಟಕ ಸಾಹಿತ್ಯದಲ್ಲಿ ಪ್ರಕೃತಿ ಸೌಂದರ್ಯ; ಡಿ.ಎಲ್. ನರಸಿಂಹಾಚಾರ್

೩. ಸೌಂದರ್ಯ ಸಮೀಕ್ಷೆ; ಜಿ.ಎಸ್. ಶಿವರುದ್ರಪ್ಪ ಪು. ೧೫೧-೧೫೨

೪. ಅದೇ; ಪು. ೧೪

೫. ಅದೇ ; ಪು. ೨೨೪

೬. The Popular Religion and Folkore of Northern India; W. Crooke ಪು.೧೫

೭. ಕರ್ಣಾಟಕ ಸಾಹಿತ್ಯದಲ್ಲಿ ಪ್ರಕೃತಿ ವರ್ಣನೆ; ಡಿ.ಎಲ್.ನರಸಿಂಹಾಚಾರ್

೮. 'ಕರ್ಪೋಲೇ ಮಾರ್ಜಾರಿ ತುಹಿನ ಕಿರಣಾನ್ ಲೇಡಿಶಶಿನಃ'-ಭಾಸ

೯. ಅಜಿತ ಪುರಾಣ; ೬-೪೫

೧೦. ಕಾವ್ಯದಲ್ಲಿ ಬೆಳುದಿಂಗಳು; ತೀನಂಶ್ರೀ ಅವರ ಅಪ್ರಕಟಿತ ಟಿಪ್ಪಣಿಗಳಿಂದ ಪುನಾರಚಿತ-ಕಾಳೇಗೌಡ ನಾಗವಾರ.

೧೧. Indian Myth And Legend; Donald A Mackenzie ಪು. ೯೨

೧೨. ಒಗಟುಗಳು; ಎಚ್.ಜೆ. ಲಕ್ಕಪ್ಪಗೌಡ ಪು. ೧೩

೧೩. Folklore of Northern India; W. Crooke ಪು. ೧೩

೧೪. ಕರ್ನಾಟ-ಸಂಸ್ಕೃತಿಯ ಪೂರ್ವ-ಪೀಠಿಕೆ (ದ್ವಿತೀಯ ಭಾಗ); ಶಂ. ಬಾ. ಜೋಶಿ

೧೫. ಒಗಟುಗಳು; ಎಚ್.ಜೆ. ಲಕ್ಕಪ್ಪಗೌಡ ಪು. ೪೫

೧೬. ಅದೇ; ಪು. ೫೯

೧೭. Indian Myth And Legend; Donald A mackezie ಪು. ೧೧೭

೧೮. ಜ್ಯೋತಿಷ್ಯ ಸಾರ ಸಂಗ್ರಹ; ಎಂ. ರಾಮಸ್ವಾಮಿ, ಪು.೫

೧೯. Folk-lore of Northern India; W. Crooke

೨೦. The Golden Bough; J.G. Frazer

೨೧. The Vision of Asia; L. Cranmer-Byng ಪು. ೨೪೪

೨೨. ಪುರಾಣನಾಮ ಚೂಡಾಮಣಿ; ಬೆನಗಲ್ ರಾಮರಾವ್, ಪಾನ್ಯಂ ಸುಂದರಶಾಸ್ತ್ರಿ ಪು. ೨೦೩-೨೦೫

೨೩. Indian Myth And Legend; Donald A Mackenzie

೨೪. ಕರ್ನಾಟ-ಸಂಸ್ಕೃತಿಯ ಪೂರ್ವಪೀಠಿಕೆ (ದ್ವಿತೀಯ ಭಾಗ); ಶಂ.ಬಾ. ಜೋಶಿ ಪು. ೬೨

೨೫. Folk-lore Myths And Legend of Britan ; ಪು. ೧೯-೨೦

ಬೆಳದಿಂಗಳ ಪೂಜೆ

ಈಗ ನಮಗೆ ದೊರಕುವ ಪೂಜೆಯ ವಿವರಗಳು ಮೂಲ ಸ್ವರೂಪ ದ್ದಲ್ಲ. ಕಾಲ ಕಾಲಕ್ಕೆ ಬದಲಾವಣೆಗೊಂಡ, ತೀವ್ರತೆಯನ್ನು ಕಡಿಮೆಮಾಡಿ ಕೊಂಡ ಸ್ಥಿತಿಯ ಸ್ವರೂಪ. ಧಾರ್ಮಿಕ ಭಾವನೆಗಳ ಜೊತೆ ಜೊತೆಗೆ ಮನರಂ ಜನೆಯ ತೆಳು ಮುಸುಕು ಆವರಿಸುತ್ತಿರುವ ಆಚರಣೆಯ ವಿವರಗಳು ಇವು.

ಈ ಅಧ್ಯಾಯದಲ್ಲಿ ಅಗತ್ಯವಿರುವೆಡೆಗಳಲ್ಲಿ ನಾನು ಧ್ವನಿ ಮುದ್ರಿಸಿ ಕೊಂಡ ಮಾಹಿತಿಗಳನ್ನು ಹಳ್ಳಿಗರ ಮಾತುಗಳಲ್ಲೇ ನಿರೂಪಿಸಿದ್ದೇನೆ. ಆದರಿಂದ ಈ ಆಚರಣೆಯನ್ನು ಮಾಡುವವರ ನಂಬಿಕೆಗಳು, ಅಭಿಪ್ರಾಯಗಳನ್ನು ಸೂಕ್ಷ್ಮ ವಾಗಿ ಗಮನಿಸಲು ಜಾನಪದವನ್ನು ಅಭ್ಯಾಸ ಮಾಡುವವರಿಗೆ ಸಹಾಯವಾಗು ವುದೆಂದು ಭಾವಿಸುತ್ತೇನೆ.

ಬೆಳದಿಂಗಳ ಪೂಜೆಯನ್ನು ವರ್ಷಕ್ಕೊಮ್ಮೆ ''ವುಗಾದಿ ಯಿಂದೇ ಮುಂದೇ ಬ್ಯಾಸಗೇಲಿ ಮಾಡ್ತಾರೆ'' ಸಾಮಾನ್ಯವಾಗಿ ಬಯಲು ಸೀಮೆಯ ಹಳ್ಳಿ ಗಳಲ್ಲಿ ಬೇಸಿಗೆಯ ಬಿಡುವಿನಲ್ಲೇ ಮನರಂಜನೆಗಳು, ಸಾಂಪ್ರದಾಯಿಕ ಆಚರ ಣೆಗಳು ನಡೆಯುವುದು. ಈ ಪೂಜೆಗೆ ಯುಗಾದಿ ಬೆಳಕು ಪ್ರಶಸ್ತವೆಂದು ತಿಳಿದು ಆ ಕಾಲದಲ್ಲಿ ಆಚರಿಸುತ್ತಾರೆ. ಯುಗಾದಿ ನಮ್ಮ ಹಳ್ಳಿಗರಿಗೆ ವರ್ಷದ ಶ್ರೇಷ್ಠ ಹಬ್ಬ. ಹೊಸ ವರ್ಷದ ಪ್ರಾರಂಭ.

ಎಲ್ಲ ಜನಪದ ಸಂಪ್ರದಾಯಗಳಿಗೂ ನಂಬಿಕೆಗಳು ಅಂಟಿಕೊಂಡೇ ಇರುತ್ತವೆ. ಬೆಳದಿಂಗಳ ಪೂಜೆಗೆ ಹಿಂದಿನ ಕಾಲದಲ್ಲಿ ಇದ್ದ ನಿರ್ದಿಷ್ಟ ನಂಬಿಕೆ ಗಳನ್ನು ತಿಳಿದುಕೊಳ್ಳುವುದು ಕಷ್ಟ. ಮುಖ್ಯವಾಗಿ ಹೆಂಗಸರು ಆಚರಿಸುವ ಈ ಪೂಜೆ ಹಳ್ಳಿಗರ ಮನರಂಜನೆಯ ಆಚರಣೆಯೂ ಮಕ್ಕಳ ಹಬ್ಬವೂ ಆಗಿದೆ.

ಸಾಮಾನ್ಯವಾಗಿ ಎಲ್ಲರೂ ''ಏನೋ ಒಂದ್ಕುಸಿ, ಜನ್ಗುಳಗೂ ವಳ್ಳೇದು'' ಎನ್ನುತ್ತಾರೆ.

''ಯಾವ ರೀತಿ ಒಳ್ಳೇದು?'' ಎಂದರೆ

''ಎಂಗೊಳ್ಳೇದೂ.... ಗ್ರಾಂಕ್ಕೊಳ್ಳೇದು, ಮಾಡ್ದೋರಿಗೊಳ್ಳೇದು. ಸ್ವಾಮಿ ಪಾದ್ಪೂಜೆ ಮಾಡಿ ನವಗ್ರ ಪೂಜೆ ಮಾಡ್ತಾರಲ್ಲ ಯಾಕ್ಮಾಡ್ತಾರೇಳಿ?'' ಎಂದು ಮರು ಪ್ರಶ್ನೆ ಹಾಕುತ್ತಾರೆ. 'ಮಾಡ್ದೋರಿಗೊಳ್ಳೇದು' ಎಂದರೆ, ಮುಖ್ಯವಾಗಿ ಇದನ್ನು ಮಾಡುವವರು ಹೆಂಗಸರು, ಅವರಿಗೆ ಯಾವ ವಿಧದಲ್ಲಿ ಒಳ್ಳೆಯದೆಂಬುದನ್ನು ಹೆಚ್ಚಿನ ಸಂಶೋಧನೆಯಿಂದ ತಿಳಿದುಕೊಳ್ಳಬೇಕು.

'ಎಳೆಯ ಬೆಳದಿಂಗಳಲ್ಲಿ' ಬೆಳದಿಂಗಳ ಪೂಜೆ ಮಾಡಲು ಹಳ್ಳಿಯ ಹೆಂಗಸರು ನಿರ್ಧರಿಸುತ್ತಾರೆ. ಪೂಜೆಗೆ ಸೇರಿಕೊಳ್ಳುವವರಿಂದ ತಲಾ ಒಂದು ಅಥವಾ ಎರಡು ರೂಪಾಯಿಗಳನ್ನು ಸಂಗ್ರಹಿಸುತ್ತಾರೆ. ಈ ಹಣ ಅವರು ಪೂಜೆ ನಡೆಸುವಷ್ಟೂ ದಿನದ ಖರ್ಚಿಗಾಗಿ-ಪೂಜೆಗೆ ಬೇಕಾದ ಸಾಮಗ್ರಿ ಕೊಳ್ಳಲು, ಪ್ರತಿ ದಿನದ ಕೊನೆಯಲ್ಲಿ 'ಪಲ್ಲಾರ' ಹಂಚಲು ಉಪಯೋಗಿಸುತ್ತಾರೆ. ಪೂಜೆಗೆ ಸಾಕಷ್ಟು ಹಣ ಸಂಗ್ರಹವಾದ ನಂತರ ಒಂದು ನಿರ್ದಿಷ್ಟ ದಿನವನ್ನು ಗೊತ್ತು ಮಾಡುತ್ತಾರೆ. ಅಂದಿನಿಂದ ಪ್ರಾರಂಭಿಸಿ ಮುಂದಕ್ಕೆ ಐದು ದಿನ, ಒಂಬತ್ತು ದಿನ, 'ತೀರವವರು' ಮೂರು ದಿನ ಬಹಳ ಸಂಭ್ರಮದಿಂದ, ಸಂತೋಷದಿಂದ ಪೂಜೆಯನ್ನು ಆಚರಿಸುತ್ತಾರೆ. ಸಾಮಾನ್ಯವಾಗಿ ಬಹುಪಾಲು ಜನಪದ ಸಂಪ್ರದಾಯಗಳ ಕ್ರಿಯಾತ್ಮಕ ಮತ್ತು ಶಾಬ್ದಿಕ ಸನ್ನಿವೇಶಗಳಲ್ಲಿ ಹೆಂಗಸರದೇ ಮುಖ್ಯಪಾತ್ರ. ಈ ಆಚರಣೆ ಕೂಡ ಅದಕ್ಕೆ ಹೊರತಲ್ಲ.

ಈ ಸಮಯದಲ್ಲಿ ಮಕ್ಕಳಿಗೆ ಎಲ್ಲಿಲ್ಲದ ಸಂಭ್ರಮ. ಪೂಜೆ ಪ್ರಾರಂಭಿಸುವ ದಿನದ ಸಂಜೆ ಎಲ್ಲರೂ ಆನಂದದಿಂದ 'ಮಡಗಿದ ಬಟ್ಟೆ'ಗಳನ್ನು ಧರಿಸಿ ವಿಭೂತಿ ಬಳಿದುಕೊಂಡು ಪೂಜೆ ಮಾಡಲು ನಿರ್ಧರಿಸುವ ದೇವಸ್ಥಾನದ ಹಟ್ಟಿಯ ಅಂಗಳದ ಬಳಿ ಗುಜುಗುಯಿಸುತ್ತಾರೆ. ಹೆಣ್ಣುಮಕ್ಕಳು ಆ ಸ್ಥಳವನ್ನು ಬಹಳ ಎಚ್ಚರಿಕೆಯಿಂದ ಚೊಕ್ಕಟಗೊಳಿಸುವುದರಲ್ಲಿ ನಿರತರಾಗುತ್ತಾರೆ. ಊರಿನ ಎಲ್ಲ ವ್ಯಕ್ತಿಗಳೂ ಈ ಸಂದರ್ಭದಲ್ಲಿ ಬಹಳ ಆಸಕ್ತಿಯಿಂದ ಪಾಲ್ಗೊಂಡಿರುತ್ತಾರೆ. ಮುದುಕ ಮುದುಕಿಯರು ಮಾರ್ಗದರ್ಶಕರಾಗಿ ದೇವಸ್ಥಾನದ ಜಗುಲಿಯ ಮೇಲೆ ಕುಳಿತು ತಾವು ಬಾಲ್ಯದಲ್ಲಿ ಪೂಜೆ ಮಾಡುತ್ತಿದ್ದ ದಿನ

ಗಳನ್ನು ಸಂತೋಷದಿಂದ ನೆನಪಿಸಿಕೊಳ್ಳುತ್ತಿರುತ್ತಾರೆ. ಕೆಲವು ಹೆಣ್ಣುಮಕ್ಕಳು ಕೆರೆ ಅಥವಾ ಬಾವಿಯಿಂದ 'ಗಂಗಮ್ಮ'ನನ್ನು ತರುತ್ತಾರೆ.

ಈ ಪೂಜೆಯಲ್ಲಿ ಮುಖ್ಯವಾಗಿ ಒಂದು ಮದುವೆಯ ಕಾರ್ಯಕ್ರಮ ನಡೆಯುತ್ತದೆ. ಆ ಮದುವೆ ತಿಂಗಳು ಮಾವನಿಗೆ ಎಂದು ಜನಪದರ ನಂಬಿಕೆ. ಅವನಿಗೆ ಮದುವೆಯಿಲ್ಲ, ಅವನು ನಾರಿಯರನ್ನು ಅರಿಯದವನು ಎನ್ನುವ ಮಾತುಗಳನ್ನೆಲ್ಲ ಹಾಡುಗಳಲ್ಲಿ ನೋಡುತ್ತೇವೆ. ಇದರ ಬಗ್ಗೆ ಓರ್ವ ಹಳ್ಳಿಯ ಮುದುಕಿ ಕೊಟ್ಟ ವಿವರ ಹೀಗಿದೆ:

''ಇದು ಪೂಜೆನೋ ಮದ್ವೆನೋ ಅಜ್ಜಿ?''

''ಇದೂ...........ಮದ್ವೆ''

''ಯಾರಿಗೆ?''

''ಯಾರಿಗೆ ಅವ್ನಗೆ.....ಚಂದ್ರಂಗೆ''

''ಚಂದ್ರಂಗೆ ಮದುವಿಲ್ಲ ಅಂತೀರಲ್ಲ?''

''ಮದುವಿಲ್ಲ ಅಂದ್ರೆ......ನಾವು ಕಲಿಯುಗದಾಗ ಕಟ್ಕಂಡಿರದು. ನಾವು ಕಂಡಿದ್ದೀವ. ಚಂದ್ರಂಗೆ ಸೂರ್ಯಂಗೆ ಮದುವಿಲ್ಲಾಂತಾರೆ. ನಾವು ಏನೋ ನಮ್ಮುಕಿಸಿಗೆ ಮಾಡ್ತಿವಿ. ಚಂದ್ರನ ಮ್ಯಾಲೇ ಯೆಣ್ಣುಗಂಡು ಕುಂದ್ರುಸ್ತೀವಲ್ಲ.''

''ಪುರೋಹಿತರು?''

''ಪುರೋಯಿತ್ರೂಯಿಲ್ಲ ಯಾರೂ ಇಲ್ಲ. ಎಲ್ಲಾ ನಾವೆಯಾ.''

ಕೆಲವು ಹಳ್ಳಿಗಳಲ್ಲಿ ಒಬ್ಬ ಅಣಕು ಪುರೋಹಿತನನ್ನು ಮಾಡಿ ಅವನಿಗೆ ವಿಚಿತ್ರವಾದ ಉಡುಗೆ ತೊಡಿಸಿ ಗೇಲಿ ಮಾಡುವುದೂ ಉಂಟು. ಅವನು ಬಾಯಿಗೆ ಬಂದದ್ದನ್ನೇ ಮಂತ್ರದಂತೆ ಗೊಣಗುತ್ತಿರುವುದು ರೂಢಿಯಲ್ಲಿದೆ. ಇದು ಪುರೋಹಿತರನ್ನು ಅಣಕಿಸಲು ಕಲ್ಪಿಸಿಕೊಂಡಿದ್ದಿರಬಹುದು.

ಕೆಲವು ಸ್ಥಳಗಳಲ್ಲಿ 'ಒಂದೇ ಒಂದು ಹೆಣ್ಣು ಮಾಡಿ' 'ತಿಂಗಳು ಮಾವನ ಸೂಳೆ' ಎಂದು ಒಬ್ಬಳನ್ನೇ ಹಸೆಯ ಮೇಲೆ ಕುಳ್ಳಿರಿಸುತ್ತಾರೆ.

ಮದುವೆಗೆ ಹೆಣ್ಣು ಗಂಡನ್ನು ಸಿದ್ಧಪಡಿಸಬೇಕಾಗುತ್ತದೆ. ಇಲ್ಲಿ ಹುಡುಗರಿಗೇ ಪ್ರಾತಿನಿಧ್ಯ. ಸುಮಾರು ಎಂಟರಿಂದ ಹನ್ನೆರಡು ವರ್ಷ ವಯಸ್ಸಿನ ಇಬ್ಬರು ಹುಡುಗರನ್ನು ಮದುವಣಿಗ ಮದುವಣಗಿತ್ತಿಯರನ್ನಾಗಿ ಆರಿಸುತ್ತಾರೆ. ಹೆಣ್ಣು ನಿಜವಾದ ಹೆಣ್ಣಲ್ಲ. ಹುಡುಗನೊಬ್ಬನಿಗೆ ಹೆಣ್ಣಿನಂತೆ ಅಲಂಕಾರ ಮಾಡುತ್ತಾರೆ. ಆಯ್ಕೆಯಾದ ಹುಡುಗರಿಬ್ಬರನ್ನು ಆ ಸಂಜೆ ಉಳಿದ ಹುಡುಗರು ಸುತ್ತುವರೆದು 'ಹೆಣ್ಣುಗಂಡು-ಹೆಣ್ಣುಗಂಡು' ಎಂದು ಕೇಕೆ ಹಾಕಿ ಗೇಲಿ ಮಾಡುತ್ತಾರೆ. ಹೆಣ್ಣುಗಂಡು ಆಗಲು ಒಪ್ಪಿಕೊಂಡವರಿಗಂತೂ ಮನಸ್ಸಿನಲ್ಲೇ ಖುಷಿ. ತಲೆ ತಗ್ಗಿಸಿಕೊಂಡು ಎಷ್ಟುಹೊತ್ತಿಗೆ ತಮ್ಮನ್ನು ಸಿಂಗರಿಸಲು ಕರೆದೊಯ್ಯುವರೋ ಎಂದು ಎಣಿಕೆ ಹಾಕುತ್ತಿರುತ್ತಾರೆ. ಇನ್ನೂ ಹೆಣ್ಣುಗಂಡಿನ ವೇಷತೊಡಿಸುವ ಮೊದಲೇ ಅವರಿಬ್ಬರೂ ನಾಚಿಕೆಯಿಂದ ಓಡಾಡುತ್ತಿರುತ್ತಾರೆ, ಪರಸ್ಪರ ಮಾತಾಡುವುದಿಲ್ಲ! ಹೆಣ್ಣಾಗುವವನನ್ನು ನಿಜವಾದ ಹೆಣ್ಣಿನಂತೆಯೇ ನಡೆಸಿಕೊಳ್ಳುತ್ತಾರೆ. ಕೆಲವು ಪ್ರದೇಶಗಳಲ್ಲಿ ಹೆಣ್ಣಿನ ಪಾತ್ರಕ್ಕೆ ಒಬ್ಬಳು ಹುಡುಗಿಯನ್ನೇ ಆಯ್ಕೆ ಮಾಡಿಕೊಳ್ಳುವುದುಂಟು. ಪ್ರಸ್ತುತ ಆಚರಣೆಯನ್ನು ಅಭ್ಯಾಸ ಮಾಡಿದ ಊರುಗಳಲ್ಲಿ ಹಾಗೆ ನಡೆಯುವುದಿಲ್ಲ. ''ಯೆಣ್ಣುಮಗ ಕರಕಮ್ಮಲ್ಲ. ಇಬ್ರನ್ನೂ ಗಂಡುಮಕ್ಕಳನ್ನ ಮಾಡ್ತಿರಬೇಕು. ಅದ್ರಾಗೆ ಒಂದು ಗಂಡು ಒಂದೆಣ್ಣು ಮಾಡ್ತಿವಿ. ಅವ್ರು ಎಲ್ಲ ಯೆಣ್ಣು ಯೆಣ್ಣಂಗೆ ಮಾತಾಡದು, ಗಂಡು ಗಂಡ್ನಂಗೆ ಮಾತಾಡದೂ, ಎಲ್ಲಾ ಕೈಯಿಡಕಂಡು ಓಗ್ತಿರದು, ಯೆಸರುಕೇಳೀರೆ ಯೆಂಡ್ತಿಯೆಸ್ರೇಳ್ತಿರಬೇಕು....

''ಯೆಣ್ಣುಡಿಗಿ ಕುಂಡ್ರುಸಿದ್ದು ಯಾ ಕಾಲಕ್ಕೂನೂ ಇಲ್ಲ. ಅಂಗ್ಮಾಡಿರೆ ಅವ್ರು ಯೆಣ್ಣುಗಂಡಾಗ್ತಾರೆ. ಇಬ್ಬರೂ ಯೆಣ್ಣುಮಕ್ಕಳನ್ನೂ ಮಾಡ್ಸಿಲ್ಲ. ಕಾಲದಿಂದ್ಲೂ ಬರೇ ಗಂಡುಡುಗ್ರನ್ನೆ ಮಾಡ್ಸದು.''

ಇಂಥ ಕೆಲವು ಸಂದರ್ಭಗಳಲ್ಲಿ ಆಚರಿಸುವವರು ಆಚರಣೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ತೀವ್ರವಾಗಿ ಒಳಗಾಗುತ್ತಾರೆ. ಹೀಗೆ ಒಳಗಾಗುವಿಕೆಯ ಹಿಂದೆ ಆ ಆಚರಣೆಗಳ ಹಿಂದಿನ ಮೌಲ್ಯಗಳನ್ನು, ನಂಬಿಕೆಗಳನ್ನು ಖಚಿತಗೊಳಿಸುತ್ತಿರುತ್ತಾರೆ.

ಹುಡುಗರಿಗೆ ಹೆಣ್ಣುಗಂಡಿನ ಸಿರಿ. ಹೆಂಗಸರು ಎತ್ತರ, ಬಣ್ಣ, ರೂಪಗಳಿಗೆ ಹೆಚ್ಚು ಗಮನ ಕೊಡುವುದಿಲ್ಲ. ಯಾರು ಒಪ್ಪಿಕೊಳ್ಳುತ್ತಾರೋ ಅವರನ್ನೇ ಆರಿಸುತ್ತಾರೆ. ಕೆಲವು ಹುಡುಗರಿಗೆ ತಮ್ಮ ಆಯ್ಕೆಯಾಗದಿದ್ದುದಕ್ಕೆ ಹೊಟ್ಟೆಕಿಚ್ಚು

ಬರಲೂ ಸಾಕು. ತೊಳೆದು ಬೆಳಗಿದ ಬಿಂದಿಗೆಗಳಲ್ಲಿ 'ಗಂಗಮ್ಮ' ಬರುವ ವೇಳೆಗೆ ಕೆಲವು ಹೆಂಗಸರು ಹಸುವಿನ ಸಗಣಿಯಿಂದ ಚಂದ್ರನ ಹಸೆ ಬರೆಯುವಷ್ಟು ಸ್ಥಳವನ್ನು ಸಾರಿಸುತ್ತಾರೆ. ಇನ್ನು ಕೆಲವರು ಹೆಣ್ಣುಗಂಡನ್ನು ಸಿಂಗರಿಸಲು ಕರೆದೊಯ್ಯುತ್ತಾರೆ. ಆ ವೇಳೆಗೆ ಗಂಡಸರು, ವಯಸ್ಸಿನ ಹುಡುಗರು ಚಪ್ಪರಕ್ಕೆ ಬೇಕಾದ ಸಾಮಗ್ರಿಗಳೊಡನೆ ಹಸೆಯ ಚಪ್ಪರ ಹಾಕಲು ಸಿದ್ಧವಾಗುತ್ತಾರೆ. ತೆಂಗಿನಗರಿ, ಬಾಳೆಕಂದು, ಮಾವಿನಸೊಪ್ಪು, ಹೂಗಳಿಂದ ಬಹಳ ಸೊಗಸಾಗಿ ಚಿಕ್ಕದಾದ ಸಿಂಗರಿಸಿದ ಚಪ್ಪರ ಹಾಕುತ್ತಾರೆ. ಕಳಶಕ್ಕೆ ಅಡಿಕೆ ಹೊಂಬಾಳೆ, ಕಣಿಗಲು ಹೂ ತಂದಿರುತ್ತಾರೆ. ಊರಿನ ಪ್ರತಿಯೊಬ್ಬರೂ ಪಾಲ್ಗೊಂಡು ಬಹಳ ಸಂಭ್ರಮದಿಂದ ಸಾಧ್ಯವಾದಷ್ಟೂ ಹೆಚ್ಚು ವೈಭವದಿಂದ ಹಬ್ಬ ಆಚರಿಸುತ್ತಾರೆ.

ಹೆಣ್ಣುಗಂಡು ಸಿಂಗರಿಸುವ ಕಡೆ ಊರಿನ ಸಮಸ್ತರ ಮನೆಯ ಒಡವೆ ವಸ್ತ್ರಗಳು ಬಂದಿರುತ್ತವೆ. ಅವುಗಳಲ್ಲಿ ಹೊಂದಿಕೆಯಾಗುವವನ್ನು ಆಯ್ಕೆಯಾದ ಅಣಕು ಗಂಡು ಹೆಣ್ಣಿಗೆ ತೊಡಿಸುತ್ತಾರೆ.

''ಬೇಕಾದಂಗೆ ವಡವೆ ವಸ್ತ ಎಲ್ಲಾ ಮಡಗಿ ಒಂದು ಲಗ್ನ ಮಾಡ್ದಂಗೆ ಮಾಡ್ತಿವಿ........ಈ........ಗಂಡುಮಕ್ಕಳಿಗೆ ಮೂರ್ತದ್ದಿವ್ಸ ಯಾವ ಬಟ್ಟೆಬರೆ ಇಕ್ಕಿ ಜೋತ್ರಗೀತ್ರ ಉಡುಸ್ತೀವಿ ಅಂಗೆ, ಜೋತರ ಉಡ್ಸುತೀವಿ.''

ಇನ್ನೊಂದು ಕಡೆ ಪೂಜೆಗೆ ಬಹಳ ಮುಖ್ಯವಾಗಿ ಬೇಕಾದ 'ಸಪ್ಪರಟ್ಟಿ'ಯ ಸಿದ್ಧತೆ ನಡೆಯುತ್ತಿರುತ್ತದೆ. ''ಚಂದ್ರನ್ನ ಬರದಿರೋತಾವ್ಲೇ ಎಲ್ಲಾ...... ಇದೂ.... ಸಪ್ಪರಟ್ಟಿ ತಟ್ಟದು. ಅಸೆಮ್ಯಾಲೆ ನಾಕು ಮೂಲಿಗೂ ನಾಕು ಸಪ್ಪರಟ್ಟಿ, ನಡಂತರಕ್ಕೆ ಒಂದು ಸಪ್ಪರಟ್ಟಿ ಮಡಗಿ...ಕಳಸಾನೂ ಇಕ್ತಾರೆ.''

''ಸಪ್ಪರಟ್ಟಿ ಅಂದ್ರೇನಮ್ಮ?''

''ರಟ್ಟಿ ಇರುತ್ತಲ್ಲ, ರಾಗಿ ಅಸೀಟ್ಟ ರಟ್ಟಿತಟ್ಟಿಬಿಡದು. ಐದನೂ ಇಟ್ಟ ಇಟ್ಟು ಪೂಜೆ ಮಾಡದು.''

''ಉಪ್ಪುಯಾಕೆ ಹಾಕಲ್ಲ?''

''ನಾವು ಉಪ್ಪಾಕಲ್ಲ. ಅದು ಬೆಳದಿಂಗ್ಳಪ್ಪಗೇರಲ್ಲ. ಉಪ್ಪಾಕಿದ್ದು ಏರ ಬಾರ್ದು ಅಂತೇಳಿ ನಂಬ್ಕೆ.''

ಸಪ್ಪೆರೊಟ್ಟಿಯನ್ನು ಕೆಲವುಕಡೆ ಬಹಳ ಚಿಕ್ಕ ಚಿಕ್ಕದಾಗಿ ತಟ್ಟುತ್ತಾರೆ. ಇನ್ನು ಕೆಲವು ಕಡೆ ಸಾಮಾನ್ಯ ರೊಟ್ಟಿಗಳಿಗಿಂತ ಹೆಚ್ಚು ಅಗಲವಾಗಿ ತಟ್ಟುತ್ತಾರೆ. ಕೊರಟಗೆರೆ ತಾಲ್ಲೂಕು ಜೆಟ್ಟಿ ಅಗ್ರಹಾರ ಸುತ್ತಮುತ್ತಲಲ್ಲಿ ಈ ರೀತಿಯ ರೊಟ್ಟಿಯ ಕಲ್ಪನೆ ಬಹಳ ಸುಂದರವಾಗಿದೆ. ''ರಟ್ಟಿಗೆ ಉಪ್ಪಾಕಲ್ಲವು. ಒಂದೇ ಮಕ ತಿರವಾಕದು. ಇನ್ನೊಂದ್ಮಕ ಬೆಳ್ಳಗಾನ ಅಂಗೇ ಇರುತ್ತೆ. ಅದೇ ಚೆಂದ್ರಮ್ಮ.'' ರಾಗಿ ರೊಟ್ಟಿಯನ್ನು ಒಂದು ಕಡೆ ಮಾತ್ರ ಸುಡುವುದರಿಂದ ಮತ್ತೊಂದು ಕಡೆ ಅದು ಬೆಳ್ಳಗೇ ಉಳಿಯುದನ್ನು ಗಮನಿಸಬಹುದು. ಅದನ್ನೇ ಅವರು ಹಸೆಯಮೇಲಿಟ್ಟು ಪೂಜಿಸುತ್ತಾರೆ. ಚಂದ್ರನನ್ನೇ ಭೂಮಿಗೆ ಇಳಿಸುವ ಈ ಕಲ್ಪನೆ ರಮ್ಯವಾಗಿದೆ. ರೊಟ್ಟಿಯನ್ನು ಪೂಜೆ ಮುಗಿದ ಕೊನೆಯಲ್ಲಿ ಕೆಲವರು 'ಗಂಗಮ್ಮ'ನಲ್ಲಿಗೋ ಅಥವಾ ಅಶ್ವತ್ಥವೃಕ್ಷದ ಬಳಿಗೋ 'ಸಾಗಾಕ್ತಾರೆ.' ಈ ರೀತಿ ನೀರಿಗೆ ಬಿಡುವುದು ಗಣೇಶ ವಿಸರ್ಜನೆಯ ಅಂಶವನ್ನು ನೆನಪಿಗೆ ತರುತ್ತದೆ. ಚಂದ್ರನನ್ನು ರೊಟ್ಟಿಗೆ ಆರೋಪಿಸಿ ನೀರಿಗೆ ಬಿಡುವ ರೂಢಿ ಜನಪದ ಸಂಪ್ರದಾಯದ್ದು. ಗಣೇಶ ನಮ್ಮ ಸಂಸ್ಕೃತಿಯಲ್ಲಿ ಪ್ರವೇಶವಾಗಿರುವುದು ತೀರಾ ಈಚೆಗೆ ಎನ್ನುವುದನ್ನು ಗಮನಿಸಿದರೆ- ಈ ಬಗೆಯ ವಿಸರ್ಜನೆಯ ಕಲ್ಪನೆ ಜನಪದ ಸಂಪ್ರದಾಯಗಳಿಂದಲೇ ಬಂದದ್ದು ಎಂದು ತೀರ್ಮಾನಿಸಬಹುದು. ಯಾವುದಾದರೂ ಮರದ ಬಳಿಗೆ ಸಾಗುಹಾಕುವ ಪದ್ಧತಿ ಪೂರ್ವದ್ದೋ ಅಥವಾ ನೀರಿಗೆ ಬಿಡುವ ಪದ್ಧತಿ ಪೂರ್ವದ್ದೋ ತಿಳಿಯುವುದು ಕಷ್ಟ. ಅಂತೂ ಪೂಜೆಯನ್ನು ಅಂತ್ಯಗೊಳಿಸುವುದರ ಸೂಚನೆ ಇದು. ರೊಟ್ಟಿಗೂ ಚಂದ್ರನಿಗೂ ಯಾವುದೋ ಸಂಬಂಧ ಇರುವುದನ್ನು ಗಮನಿಸಬಹುದು. ಇದು ಸುಗ್ಗಿಯ ನಂತರದ ಪೂಜೆಯಾದುದರಿಂದ ರೈತರು ಹೊಸ ಫಸಲನ್ನು (ಬಯಲು ಸೀಮೆಯಲ್ಲಿ ಮುಖ್ಯವಾಗಿ ರಾಗಿ) ಪಡೆಯುವುದರಿಂದ ಈ ಪೂಜೆಯ ಸಂದರ್ಭದಲ್ಲಿ ಬೆಳೆಪೂಜೆಯ ಅಂಗವಾಗಿ ಅಥವಾ ಆಹಾರ (ರೊಟ್ಟಿ)ದ ಪೂಜೆಯ ಅಂಗವಾಗಿ ರೊಟ್ಟಿಯನ್ನು ಮಾಡಿ ಪೂಜಿಸುತ್ತಾರೆ.

ರೊಟ್ಟಿ ಮತ್ತು ಚಂದ್ರನ ಸಂಬಂಧ ನಮ್ಮ ಜನಪದ ಸಂಪ್ರದಾಯದಲ್ಲಿ ಮಾತ್ರವಲ್ಲದೇ ಬೇರೆ ಜನಾಂಗಗಳಲ್ಲೂ ಕಾಣಬಹುದು. ಪ್ರಾಚೀನ ಇಟಲಿಯ ಚಂದ್ರದೇವತೆ **(Diana)** ಯ ಹಬ್ಬದ ಸಂದರ್ಭದಲ್ಲಿ ಆಡಿನಮರಿ ಮತ್ತು ರೊಟ್ಟಿ **(cake)** ಗಳನ್ನು ಅರ್ಪಿಸುತ್ತಿದ್ದರು.[೧] ಈಜಿಪ್ಟಿನ ಜನರು ವರ್ಷಕ್ಕೊಮ್ಮೆ

ಚಂದ್ರನ ಆರಾಧನೆಯ ಸಂದರ್ಭದಲ್ಲಿ ಹಂದಿಗಳನ್ನು ಬಲಿಕೊಡುತ್ತಾರೆ. ವರ್ಷದ ಬೇರೆ ಯಾವುದೇ ದಿನಗಳಲ್ಲಿ ಅವರಿಗೆ ಹಂದಿಯ ಮಾಂಸ ನಿಷೇದವಾಗಿರುತ್ತದೆ. ಆದರೆ ಚಂದ್ರಾರಾಧನೆಯ ದಿನ ಅವರು ಹಂದಿಯನ್ನು ಬಲಿಕೊಡುವುದಲ್ಲದೆ ಅದರ ಮಾಂಸವನ್ನು ತಿನ್ನುತ್ತಾರೆ. ಈಜಿಪ್ಟಿನಲ್ಲಿ ಹಂದಿಯನ್ನು ಅರ್ಪಿಸಲಾಗದ ಕಡು ಬಡವ ಮಾತ್ರ ಚಂದ್ರನಿಗೆ ಹಂದಿಗೆ ಬದಲಾಗಿ ಬೇಯಿಸಿದ ರೊಟ್ಟಿಗಳನ್ನು ಅರ್ಪಿಸುತ್ತಾನೆ.[೨] ನಮ್ಮ ವೇದ, ಬ್ರಾಹ್ಮಣಗಳಲ್ಲಿ, ಹುಣ್ಣಿಮೆಯ ಚಂದ್ರನಿಗೆ ರೊಟ್ಟಿಯನ್ನು ಅರ್ಪಿಸುತ್ತಿದ್ದುದುಂಟು ಎಂಬ ಮಾಹಿತಿಗಳು ಸಿಕ್ಕುತ್ತವೆ.

ಸಾಮಾನ್ಯವಾಗಿ ರೊಟ್ಟಿ ಪೂರ್ಣ ಚಂದ್ರನಂತೆ ಗುಂಡಾಗಿರುವುದು ನಾವು ಅದನ್ನು ತಿನ್ನುತ್ತಾ ತಿನ್ನುತ್ತಾ ಚಂದ್ರ ಕ್ಷೀಣಿಸುವಂತೆ ಕ್ಷೀಣಿಸಿ ಕ್ರಮೇಣ ಮುಗಿಯುವುದು; ಚಂದ್ರನಂತಹ ಆಕಾರವುಳ್ಳ ರೊಟ್ಟಿಯನ್ನು ತಿನ್ನುತ್ತೇವೆಂಬ ಅಪರಾಧ ಭಾವನೆಯಿಂದ ಈ ರೊಟ್ಟಿಯ ಪೂಜೆ ಮತ್ತು ಅರ್ಪಣೆಗಳು ರೂಢಿಗೆ ಬಂದಿರಬಹುದೆಂದು ಭಾವಿಸಬಹುದು. ನಮ್ಮ ನಾಡಿನ ಮಕ್ಕಳ ಆಟವೊಂದರಿಂದ ಚಂದ್ರ ಮತ್ತು ರೊಟ್ಟಿಯ ಸಂಬಂಧವನ್ನು ಸೂಕ್ಷ್ಮವಾಗಿ ಗುರುತಿಸಬಹುದೆನಿಸುತ್ತದೆ. ಮಕ್ಕಳು ಸುತ್ತಲೂ ಕುಳಿತು ನೆಲದ ಮೇಲೆ ಅಂಗೈಗಳನ್ನಿಟ್ಟುಕೊಳ್ಳುತ್ತಾರೆ. ಯಾರಾದರೊಬ್ಬರು ಆಟ ಪ್ರಾರಂಭಿಸುತ್ತಾರೆ. ಪ್ರಾರಂಭಿಸುವವರು ಚಿಟ್ಲ-ಪಟ್ಲ-ಕಾಯಿ-ಚಿನ್ನ-ನಳ್ಳಿ-ಕಾಯಿ-ಅಪ್ಪ-ನೋರ-ಗಂಡು-ತಿಪ್ಪ-ಅಪ್ಪ-ಅಯ್ಯ-ಗಾರ-ಗೂರ-ಗಸ್ಸಿ-ಗಟ್ಟಿ-ಎಂದು ಹೇಳುತ್ತಾ ಎಲ್ಲರ ಕೈಗಳಿಗೂ ಒಂದೊಂದು ಪದಕ್ಕೆ ಅನ್ವಯಿಸುವಂತೆ ಬೆರಳಿನಿಂದ ತೋರಿಸುತ್ತಾ ಹೋಗುತ್ತಾರೆ. ಎಲ್ಲರ ಕೈಗಳೂ ಕೊನೆಯ ಪದದೊಂದಿಗೆ ಬೆನ್ನ ಹಿಂದೆ ಅಡಗಿಕೊಳ್ಳುತ್ತವೆ. ಕೊನೆಯಲ್ಲಿ ಉಳಿದವನಿಗೆ ಪ್ರಶ್ನೆಗಳನ್ನು ಕೇಳುತ್ತಾರೆ. ಈ ಆಟದಲ್ಲಿನ ಪ್ರಶ್ನೋತ್ತರ ಬಹಳ ಗಮನಾರ್ಹ:

''ಕೈಯೆಲ್ಲಾ ಎಲ್ಲೋದ್ವು?''
''ಸಂತೇಗೋದ್ವು''
''ಸಂತೆಯಿಂದ ಏನು ತಂದೆ?''
''ಸಂತೆಯಿಂದ ಬಾಳೆಹಣ್ಣು ತಂದೆ''
''ಬಾಳೆಹಣ್ಣು ಏನು ಮಾಡ್ದೆ?''
''ಹಣ್ಣು ತಿಂದು ಸಿಪ್ಪೆ ಬಾಗಲ ಹಿಂದೆ ಹಾಕ್ದೆ''
''ಬಾಗಿಲು ಏನು ಕೊಡ್ತು?''

''ಬಾಗಿಲು ಚಕ್ಕೆ ಕೊಡ್ತು''
''ಚಕ್ಕೆ ಏನು ಮಾಡ್ದೆ?''
''ಒಲೆಗಾಕ್ದೆ''
''ಒಲೆ ಏನ್ಕೊಡ್ತು?''
''ಬೂದಿಕೊಡ್ತು''
''ಬೂದಿ ಏನ್ಮಾಡ್ದೆ?''
''ತಿಪ್ಪೆಗಾಕ್ದೆ''
''ತಿಪ್ಪೆ ಏನ್ಕೊಡ್ತು?
''ತಿಪ್ಪೆ ಗೊಬ್ಬರ ಕೊಡ್ತು''
''ಗೊಬ್ಬರ ಏನ್ಮಾಡ್ದೆ?''
''ಹೊಲಕ್ಕಾಕ್ದೆ''
''ಹೊಲ ಏನ್ಕೊಡ್ತು?''
''ಹೊಲ ರಾಗಿ ಕೊಡ್ತು''
''ರಾಗಿ ಏನ್ಮಾಡ್ದೆ?''

''ರೊಟ್ಟಿ ತಟ್ಟಿ ಅಡ್ಡಗೋಡೆ ಮೇಲಿಟ್ಟಿದ್ದೆ, ಚಂದಮಾಮ ಬೆಂಕಿಗೇಂತ ಬಂದು ಹೊತ್ತುಕಂಡು ಓಡೋದ''- ಎನ್ನುತ್ತಾರೆ. ಈ ಆಟದ ಸ್ವರೂಪ ಬಹಳ ಪುರಾತನವಾದದ್ದು. ಹಳ್ಳಿಯ ಎಲ್ಲ ಹಿರಿಯ ತಲೆಗಳೂ ಇದನ್ನು ಆಡಿ ರುವುದುಂಟು. ಇಲ್ಲಿ ಚಂದ್ರ ಬೆಂಕಿಗಾಗಿ ಬಂದದ್ದು ಅವನು ಸುಟ್ಟರೊಟ್ಟಿ ಕದ್ದು ಓಡುವುದು ಇವೆಲ್ಲ ಗಮನಿಸಿದರೆ ರೊಟ್ಟಿ ಮತ್ತು ಚಂದ್ರನ ಸಂಬಂಧದ ಬಗ್ಗೆ ಕುತೂಹಲ ಕೆರಳುತ್ತದೆ. ರೊಟ್ಟಿ ಚಂದ್ರನಿಗೆ ಸೇರಿದ್ದು ಎಂಬ ನಂಬಿಕೆಗೆ ಕಾರಣವಾಗುತ್ತದೆ.

ಕೆಲವು ಪ್ರದೇಶಗಳಲ್ಲಿ ಪೂಜೆಯಲ್ಲಿ ರೊಟ್ಟಿಗೆ [illegible] ಬೆಲ್ಲವನ್ನಿಡುತ್ತಾರೆ. ಬೆಲ್ಲ ಮತ್ತು ರೊಟ್ಟಿಗೆ ಸಂಬಂಧಿಸಿದಂತೆ ಕೆಲವು ಭಾಗಗಳಲ್ಲಿ ಒಂದು ರೀತಿಯ ಆಟಗಳು ನಡೆಯುತ್ತವೆ. ಈ ಸ್ಪರ್ಧೆಯಲ್ಲಿ ಊರಿನ ಗಂಡು ಹುಡುಗರು ಬೆಲ್ಲ ಮತ್ತು ರೊಟ್ಟಿಯನ್ನು ಕದ್ದುಕೊಂಡು ಓಡಿಹೋಗುತ್ತಾರೆ. ಅವನ್ನು ಕದ್ದವನಿಗೆ ಪ್ರಾಶಸ್ತ್ಯ ದೊರೆಯುತ್ತದೆ. ಹಾಗೆ ಕದ್ದು ಓಡುವಾಗ ಹೆಣ್ಣು ಮಕ್ಕಳು ಅವರನ್ನು ಹಿಂಬಾಲಿಸಿ ಹಿಂಸಿಸುತ್ತಾರೆ. ಅವರ ಮೇಲೆ ತಣ್ಣೀರು ಸುರಿಯಲು ಅವರ ಹಿಂದೆ ಓಡುತ್ತಾರೆ. ಅವರ ಕೈಯಿಂದ ಸಾಧ್ಯವಾಗದಿದ್ದರೆ ಅವರ ಪ್ರತಿನಿಧಿಯನ್ನಾಗಿ ಒಬ್ಬ ಹುಡುಗನನ್ನೇ ಆಯ್ದು ಕದ್ದವನ ಮೇಲೆ

ತಣ್ಣೀರು ಸುರಿಸುತ್ತಾರೆ. ಅನೇಕ ಸಂದರ್ಭಗಳಲ್ಲಿ ಕದ್ದ ಹುಡುಗ ಆ ಗುಂಪಿನ ಹುಡುಗಿಯರಲ್ಲಿ ಯಾರಾದರೊಬ್ಬರನ್ನು ಮದುವೆಯಾಗಲು ಆರಿಸಿಕೊಳ್ಳುವ ಹಕ್ಕನ್ನು ಪಡೆಯುತ್ತಾನಂತೆ. ಅವನೇ 'ಚಂದ್ರಾಮರಾಯ'ನೆ?

ಈ ಕ್ರೀಡೆ ಒಂದು ರೀತಿ ಬೆಳದಿಂಗಳಲ್ಲಿ ನಡೆಯುವ ರಾಸಕ್ರೀಡೆ ಯೆಂಬಂತೆ ಭಾಸವಾಗುತ್ತದೆ. ಅನೇಕ ಆಟಗಳು ಮಾನವನ ಉತ್ಪಾದನಾ ಚಟುವಟಿಕೆಗಳ ವಿಕಟ ರೂಪಗಳೆಂದು ಮಾನವ ಶಾಸ್ತ್ರಜ್ಞರು ವಿವರಿಸುತ್ತಾರೆ. ನಮ್ಮ ಸಂಪ್ರದಾಯಗಳಲ್ಲಿ ಆಟಗಳು ಒಂದು ಸಾಂಸ್ಕೃತಿಕ ಆವರಣಗಳೊಳಗೆ ಸೇರಿಕೊಳ್ಳುವುದು ಅಭ್ಯಾಸಾರ್ಹ ವಿಷಯ. ಒಂದು ಆಚರಣೆಯಲ್ಲಿ ಇಂಥ ಆಟಗಳು ಯಾವ ಕಾಲದಲ್ಲಿ ಸೇರ್ಪಡೆಯಾದವು, ಅವುಗಳ ಕಾರಣಗಳೇನು ಎನ್ನುವುದನ್ನು ತಿಳಿದುಕೊಳ್ಳುವುದು ಕುತೂಹಲದ ಸಂಗತಿಯಾಗುತ್ತದೆ.

ಪೂಜೆಯ ಪ್ರಾರಂಭ

ಮದುಮಕ್ಕಳ ಮತ್ತು ರೊಟ್ಟಿಯ ಸಿದ್ಧತೆಗಳಾದಮೇಲೆ ಮುಖ್ಯ ಕಾರ್ಯಕ್ರಮ ಮೊದಲಾಗುತ್ತದೆ. ಅಚ್ಚುಕಟ್ಟಾಗಿ ಸಾರಿಸಿದ ನೆಲದ ಮೇಲೆ 'ಬೆಳದಿಂಗ್ಳಪ್ಪನ್ನ ಹೊಯ್ಯುತ್ತಾರೆ' ಅಥವಾ 'ಚಂದ್ರಾಮನ್ನ ಬರೀತಾರೆ'. ಇದನ್ನು 'ಬೆಳದಿಂಗ್ಳಪ್ಪನ ಹಸೆ' ಎಂತಲೂ ಕರೆಯುತ್ತಾರೆ. ಹಸೆಗೆ ರಂಗೋಲಿ, ರಾಗಿಹಿಟ್ಟು, ಕೆಮ್ಮಣ್ಣು, ಅಕ್ಕಿ, ಹರಿಷಿಣ, ಕುಂಕುಮ ಮತ್ತು ಹೂ ಉಪ ಯೋಗಿಸುತ್ತಾರೆ. ಸಾರಿಸಿದಷ್ಟು ಸ್ಥಳದ ಅಂಚಿಗೆ ರಂಗೋಲಿಯಲ್ಲಿ ಎರಡೆಳೆಯ ಅಂಚು ಬಿಡುತ್ತಾರೆ. ಮೂಡಲ ಕಡೆಗೆ ರಾಗಿಹಿಟ್ಟು ಅಥವಾ ರಂಗೋಲಿ ಯಿಂದ ಸೂರ್ಯನನ್ನು ಅದರ ಪಕ್ಕದಲ್ಲಿ ಮೂಡುತ್ತಿರುವ ಚಂದ್ರನ ಚಿತ್ರ ವನ್ನು ಕೆಮ್ಮಣ್ಣಿನಲ್ಲೂ, ಅದರ ಮೇಲೆ ರಾಗಿಹಿಟ್ಟಿನಲ್ಲಿ ಅರ್ಧ ಚಂದ್ರನನ್ನೂ ಬರೆಯುತ್ತಾರೆ. ಗಿಣಿ ಅಥವಾ ಹೋರಿ ಮತ್ತು ಜಿಂಕೆಯ ಚಿತ್ರಗಳನ್ನೊಳ ಗೊಂಡಂತೆ ಬಹಳ ಆಕರ್ಷಕವಾದ ಹಸೆಯನ್ನು ಬರೆಯುತ್ತಾರೆ. ಬರೆಯಲು ಪ್ರಾರಂಭಿಸಿದಾಗಿನಿಂದಲೇ ತಿಂಗಳು ಮಾವನ ಹಾಡುಗಳನ್ನು ಹಾಡುತ್ತಾರೆ. ನಾಂದಿ ನಿರ್ದಿಷ್ಟವಾದುದೇನಲ್ಲ. ಸಾಮಾನ್ಯವಾಗಿ ಈ ಕೆಳಕಂಡಂತೆ ಪ್ರಾರಂಭಿ ಸುತ್ತಾರೆ. ಇಲ್ಲಿ ಉದಾಹರಿಸಿರುವ ಪದ್ಯಗಳು ಬೇರೆ ಬೇರೆ ಸ್ಥಳಗಳಲ್ಲಿ ಪ್ರಾರಂಭದಲ್ಲಿ ಹಾಡುವಂತಹವು:

'ಕೋಲು ಮಲ್ಲೀಗೆ ಕೋಲೇ
ಕೋಲು ಸಂಪೀಗೆ ಕೋಲೇ'

ಈ ಧೃವ(ಪಲ್ಲವಿ)ದೊಂದಿಗೆ ಬಹಳ ದೀರ್ಘವಾಗಿ ಹಿಮ್ಮೇಳ ಮುಮ್ಮೇಳಗಳೊಂದಿಗೆ ಹಾಡುತ್ತಾರೆ. ಧೃವವನ್ನು ಎಲ್ಲಿ ಬೇಕಾದರೂ ಎಳೆದು ಹಾಡುತ್ತಾರೆ.

'ತಿಂಗು ತಿಂಗುಳಿಗೆ ತಿಂಗಳು ಮಾವನ ಪೂಜೆ
ಗರುಡನಾ ಪೂಜೆ ಗನಪೂಜೆ॥ ರಂಗಾಪುರದ
ರಂಗನಾ ಪೂಜೆ ಶನಿವಾರ'

ಊರು ಮತ್ತು ವಾರಗಳು ಆಯಾ ಊರಿಗೆ ಮತ್ತು ದೇವರಿಗೆ ಸಂಬಂದಿಸಿದಂತೆ ವ್ಯತ್ಯಾಸಗೊಳ್ಳುತ್ತಿರುತ್ತವೆ.

'ದೊಡ್ಡೋರಾಕಿದ ಗುಡ್ಡೇಸಗಣೇಮ್ಯಾಲೆ
ಎದ್ದು ಮೂಡ್ಯವನೆ ಬೆನುವಣ್ಣಾ ॥ ಗುಲುವಾಡಿ
ಹೆಬ್ಬಾಗಲಾಗೇ ನಿಲಿಸಿಕೊಂಡ'

'ಸೂರ್ಯದೇವನ ನಾರಿ ಮೈನೆರುದಾರೆ
ಜಾಜೀಯವ್ವೂವೆ ಅದಿನಾರು ॥ ಮಾಲೆಕಟ್ಟಿ
ಅಂದ ಅಂಗುಳುದಾಗೆ ಮೆರಣೀಗೆ'

ಈ ತ್ರಿಪತಿಗಳನ್ನು ಎಲ್ಲ ಕಡೆಯೂ ಒಂದಲ್ಲ ಒಂದು ಸಂದರ್ಭದಲ್ಲಿ ಹಾಡುತ್ತಾರೆ. ಇಂಥ ನುಡಿ ಇಂಥಲ್ಲೇ ಬರಬೇಕೆಂಬ ನಿಯಮಗಳೇನೂ ಇರುವುದಿಲ್ಲ. ಧಾಟಿಯೂ ಅಷ್ಟೆ. ಹಸೆ ಬರೆಯುವ ವೇಳೆಯಲ್ಲಿ ಕೆಳಕಂಡ ಹಾಡನ್ನು ಹಾಡುವುದುಂಟು:

'ಒಂದೇ ಸೇರಕ್ಕಿ ತರುವೆ ನಮ್ಮ ಚೆಂದ್ರಮ್ಮಗೆ
ಒಂದೇ ಮಂಡ್ಲಾವ ಬರೀವೆ ನಮ್ಮ ಚೆಂದ್ರಮ್ಮಗೆ
ನಾನೂ ನಮ್ಮ ಚೆಂದ್ರಮ್ಮ ನೆರಮನೇಗಟ್ಟುಂಡು
ಮಟುಗೆ ಬಾಗಾಣ ಕೊಡಿವೆ'

ಹೀಗೆ 'ಎರಡೇ ಸೇರಕ್ಕಿ ತರುವೆ' 'ಮೂರೇ ಸೇರಕ್ಕಿ ತರುವೆ' ಎಂದು ಐದವರೆಗೂ ಧೃವದಜೊತೆಯಲ್ಲಿ ಹಾಡುತ್ತಾರೆ. ಇನ್ನು ಕೆಲವು ಸ್ಥಳಗಳಲ್ಲಿ ಒಂದು ಜನಪ್ರಿಯ ನುಡಿಯೊಂದಿಗೆ ಪ್ರಾರಂಭಿಸುತ್ತಾರೆ:

‘ಬಾರಪ್ಪ ಬೆಳದಿಂಗಳೇ
ನಮ್ಮೂರಿನಾಲಿನಂತ ಬೆಳದಿಂಗಳೇ’

ಈ ನುಡಿಗಳು ಅನೇಕರ ಮನಸೆಳೆದಿವೆ. ಕೆಲವು ಜನಪದ ಬಿಡಿ ಗೀತೆಗಳಲ್ಲಿ ಕಂಡು ಬರುವ ಸುಂದರವಾದ ಸಾಲುಗಳಿವು. ಈ ನುಡಿ ಬಂದ ಕಡೆ ಕೆಳಗಿನಂತೆ ಪ್ರಾರಂಭಿಸುತ್ತಾರೆ:

‘ಬೆಳದಿಂಗಳಾ ಬೆಳಕಿನಾಗೇ ನಮ್ಮಣ್ಣ
ಉಳ್ಳಿಯಾ ಸೆಲ್ಲಲೋದ ॥ ನಮ್ಮಣ್ಣ
ತಗರಿಯಾ ಸೆಲ್ಲಲೋದ

ಉಳ್ಳಿಯಾ ಸಾಲೆಲ್ಲ ಸರಮಲೆ ಗೆಜ್ಜಾಗಿ
ವರಮಲೆ ಗೆಜ್ಜಾಗಿ ॥ ನಾಯಕಾ
ನಮ್ಮಣ್ಣ ನವುಲುಬ್ಯಾಟೋಗ್ಯವ್ನೆ’

ಇದು ನಿಧಾನಗತಿಯಲ್ಲಿ ದೀರ್ಘವಾಗಿ ಎಳೆದು ಹಾಡುವ ಧಾಟಿ. ಹಾಡುವವರು ತಮ್ಮ ನೆನಪಿಗೆ ಬಂದ ಧಾನ್ಯಗಳನ್ನೆಲ್ಲಾ ಹೆಸರಿಸುತ್ತಾ ಹಾಡುತ್ತಾರೆ. ಅವರೆ, ಉದ್ದು, ಕಡಲೆ ಮುಂತಾದ ದ್ವಿದಳ ಧಾನ್ಯಗಳನ್ನು ಹೆಸರಿಸುತ್ತಾರೆ. ಸೂರ್ಯನ ಚಿತ್ರ ಬರೆಯುವಾಗ ಸೂರ್ಯನನ್ನು ಕುರಿತ ನುಡಿಗಳನ್ನೂ ಚಂದ್ರನ ಚಿತ್ರ ಬರೆಯುವಾಗ ಚಂದ್ರನಿಗೆ ಸಂಬಂಧಿಸಿದ ನುಡಿಗಳನ್ನೂ ಹಾಡುತ್ತಾರೆ. ಹಸೆಯ ಶೃಂಗಾರ, ಹಳ್ಳಿಯಲ್ಲಿ ಸಿಕ್ಕುವ ನಾನಾರೀತಿಯ ಹೂವು, ಪತ್ರೆಗಳಿಂದಾಗುತ್ತದೆ. ಮುಖ್ಯವಾಗಿ ಕಣಿಗಲು ಹೂವನ್ನು ಹೊಂಬಾಳೆ ತುದಿಗಿಟ್ಟು ಅಲಂಕರಿಸಲು ಬಳಸುತ್ತಾರೆ. ಹೊಳೆಯುವಂತೆ ಬೆಳಗಿದ ಕಳಶದಲ್ಲಿ ಹೊಂಬಾಳೆಯನ್ನು ಹರಡಿ ಒಂದೊಂದು ಎಸಳಿಗೂ ತುದಿಯಲ್ಲಿ ಕಣಿಗಲು ಹೂವನ್ನು ಸಿಕ್ಕಿಸುತ್ತಾರೆ. ಕಣಿಗಲು ಹೂ ಜನಪದ ಸಂಪ್ರದಾಯದ ಪೂಜೆಗಳಲ್ಲಿ ಬಹಳ ಶ್ರೇಷ್ಠವಾದುದು. ತುಂಬೆ ಹೂವನ್ನು ಹಸೆಯಮೇಲೆ ಹರಡುತ್ತಾರೆ. ಎಳ್ಳಿನ ಆರತಿ ಮಾಡುತ್ತಾರೆ. ಹೂವು, ಪತ್ರೆ, ಬೆಲ್ಲ, ತೆಂಗಿನಕಾಯಿ, ಬಾಳೇಹಣ್ಣು ಮುಂತಾದ ಪೂಜೆಯ ವಸ್ತುಗಳನ್ನು ಇಡುವಾಗಲೂ ಕೆಲವು ಹಾಡುಗಳನ್ನು ಹಾಡುತ್ತಾರೆ.

‘ಒಂದೇ ಸಿಬ್ಬುಲಾಗ್ಹೂವ
ಕಾಮಣ್ಣ ಕಲಿಗೆದ್ದ
ಬೀಮಣ್ಣ ಕಲಿಗೆದ್ದ

ಜಂಬು ಜಾಲಾರಿ ಮರವೇರಿ ನೋಡೆ
ಕೊಂಬೆಲ್ಲ ಬಿಳಿಯ ಪುಷ್ಪೆ
ರಂಬೇರ ರಾಯಪವಡ
ಸೀತಾಳ ದಂಡೆದ್ದು ಕೇಳಿಬಾರೋ'

ಸಗಣಿಯಲ್ಲಿ ಬೆನಕನನ್ನು ಮಾಡುತ್ತಾರೆ. ಬೆನಕ ಅಥವಾ ಬೆನವಣ್ಣ ಜನಪದ ಸಂಪ್ರದಾಯದ ಗಣೇಶ. ಸಗಣಿಯ ಉಂಡೆಗೆ ಒಂದು ಗರಿಕೆ ಹುಲ್ಲನ್ನು ಸಿಕ್ಕಿಸಿ ಬೆನಕನನ್ನು ಮಾಡುತ್ತಾರೆ. ಇದು ವ್ಯವಸಾಯ, ಬೆಳೆಗೆ ಸಂಬಂಧಿಸಿದ ರೈತರ ಸಾಂಕೇತಿಕ ದೇವತೆ. ಬೆಲ್ಲ, ಕೊಬ್ಬರಿ, ಎಲೆ ಮುಂತಾದ ವುಗಳನ್ನೂ ಬೆಳದಿಂಗಳಪ್ಪನಿಗೆ ಸಲ್ಲಿಸುತ್ತಾರೆ.

'ಒಂದೇ ಚಿಬ್ಲಾಗೆ ಒಂದಚ್ಚು ಬೆಲ್ಲಾನಿಟ್ಟು
ಒಂದೆಲೇ ಮಾವ ಚಿಗುರೆಲೆ॥ ತಿಂಗಳು ಮಾವ
ಒಂದೇ ಪಂಜಾಗೆ ಹೊರ ಹೊರಡೋ'

'ಎರಡೇ ಚಿಬ್ಲಾಗೆ, ಮೂರೇ ಚಿಬ್ಲಾಗೆ ಮುಂತಾಗಿ ಐದರವರೆಗೂ ಹಾಡುತ್ತಾ ಹೋಗುತ್ತಾರೆ. ಅವರಿಗೆ ಹಾಡುಗಳ ಸಾಹಿತ್ಯಿಕ ಅಂಶಗಳಿಗಿಂತ ಆಚರಣೆಯ ನಿರೂಪಣೆಯ ಕಡೆಗೆ ಹೆಚ್ಚು ಅಸಕ್ತಿಯಿರುತ್ತದೆ. ಅಂಥ ಆಸಕ್ತಿ ಯನ್ನು ಇಂಥ ಹಲವಾರು ನುಡಿಗಳಲ್ಲಿ ಕಾಣಬಹುದು:

'ಒಂದೇ ಮೂಲಿಗೊಂದೇ ಪತ್ರೆ, ಗೌರಾಜಿ
ನಿನ್ನ ಸಾಲಮೂಲಿಗು ಬಿಲ್ಲಪತ್ರೆ॥ ಗೌರಿ
ನಿನ್ನ ಸಾಲ ಮೂಲಿಗು ಬಿಲ್ಲಪತ್ರೆ'

'ದೀಪಾಲೆ ಕಂಬ'ಗಳನ್ನು ಹರಿಷಿಣ, ಕುಂಕುಮ, ಹೂಗಳಿಂದ ಅಲಂಕರಿಸಿ ದೀಪ ಹಚ್ಚಲು ಪ್ರಾರಂಭಿಸುತ್ತಾರೆ:

'ಒಂದೇ ದೀಪಕೆ ಒಂದೇ ಬತ್ತೀನ್ಹಾಕಿ
ಒಂದೇ ಪಾವೆಣ್ಣೆ ಅಳೆದೊಯ್ದು ॥ ತಿಂಗಳ ಮಾವ
ಒಂದೇ ಪಂಕ್ತಿಲೀ ಗುಡಿದುಂಬೋ'

ಹೀಗೆ 'ಎರಡೇ ದೀಪಕೆ ಎರಡೇ ಎರಡೇ ಬತ್ತೀನ್ಹಾಕಿ ಎರಡೇ ಪಾವೆಣ್ಣೆ ಅಳೆದುಯ್ದು... ಮೂರೇ ದೀಪಕೆ ಮೂರೇ ಬತ್ತೀನ್ಹಾಕಿ....'- ಎಂದು ಐದರವರೆಗೂ ಹಾಡುತ್ತಾರೆ. ಕೊನೆಗೆ ತಿಂಗಳು ಮಾವನನ್ನು ಹಸೆಗೆ ಕರೆಯು

ತ್ತಾರೆ. ಅವನು ಬರುವಾಗ ನಡೆಯುವ ಘಟನೆಗಳನ್ನು ಕುರಿತು ಬೇರೆ ಬೇರೆ ಕಡೆ ಹಲವಾರು ರೂಪಗಳು ದೊರೆಯುತ್ತವೆ.[೩] ಅವನನ್ನು ಸೂಳೆಯರು ತಡೆಯುವುದು, ಅವನು ಓರ್ವ ರಂಭೆಯನ್ನು ಕಂಡು ತನ್ನ ಮನೆಯನ್ನೇ ಮರೆತದ್ದು ಮುಂತಾದ ವಿವರಗಳು ದೊರೆಯುತ್ತವೆ.

'ಹೊಳಿಯ ದಡುದಾಗೆ ಎಳಿಯ ತಿಂಗಳು ಮಾವ
ಅಣ್ಣ ಬಾ ನಿನಗೆ ಮದುವಿಲ್ಲ ॥ ತಿಂಗಳ ಮಾವ
ಚೆಲುವ ಬಾ ನಿನಗೆ ಮದುವಿಲ್ಲ'

ಈ ವೇಳೆಗೆ ಸಾಲಂಕೃತ ಹೆಣ್ಣುಗಂಡನ್ನು ಕರೆತರುತ್ತಾರೆ. ಅವರು ನಾಚಿಕೆಯಿಂದ ಬರುವಾಗ ಅವರ ಹಿಂದೆ ಚಿಕ್ಕ ಹುಡುಗ ಹುಡುಗಿಯರ ದಂಡು ಹಿಂಬಾಲಿಸುತ್ತದೆ. ಅವರನ್ನು ಅಲಂಕರಿಸಿದ ಮಣೆಯ ಮೇಲೆ ಅಥವಾ ಕುರ್ಚಿಗಳ ಮೇಲೆ ಕುಳ್ಳಿರಿಸುತ್ತಾರೆ.

ಅವರಿಬ್ಬರಿಗೂ ಮದುವೆ ನಡೆಯುತ್ತದೆ. ಹಾಡುವವರು ಹಿಮ್ಮೇಳ ಮುಮ್ಮೇಳಗಳನ್ನು ತಮ್ಮ ತಮ್ಮಲ್ಲೇ ಹೊಂದಿಸಿಕೊಂಡು ಹಾಡಲು ಪ್ರಾರಂಭಿಸುತ್ತಾರೆ. ಇಂಥವರೇ ಹಾಡಬೇಕೆಂಬ ನಿಯಮಗಳೇನೂ ಇರುವುದಿಲ್ಲ. ಹೆಂಗಸರು ಹಾಡುವಾಗ, ಸ್ವಲ್ಪ ವಯಸ್ಸಾದ ಹುಡುಗಿಯರು ಗಮನವಿಟ್ಟು ಹಾಡಿನ ಧಾಟಿ ಮತ್ತು ಹಾಡುಗಳನ್ನು ಮನನ ಮಾಡಿಕೊಳ್ಳಲು ತೊಡಗುತ್ತಾರೆ. ಹಾಡುವವರ ಜೊತೆಗೆ ಅಲ್ಲಲ್ಲಿ ದನಿಗೂಡಿಸಿ ಹಿಮ್ಮೇಳಗಳನ್ನು ಹಾಡುತ್ತಾರೆ. ಭಾಗವಹಿಸದ ಹುಡುಗಿಯರನ್ನು ವಯಸ್ಸಾದ ಮುದುಕಿಯರು ಹಾಡು ಕಲಿತುಕೊಳ್ಳಲು ಹುರಿದುಂಬಿಸುತ್ತಾರೆ. ಬೆಳದಿಂಗಳ ಪೂಜೆಗೆ ಸಂಬಂಧಿಸಿದಂತೆ ಹಾಡುಗಳು ನಿರ್ದಿಷ್ಟವಾಗಿ ಇಂಥವೇ, ಇಷ್ಟೇ ಎಂದು ಹೇಳುವಂತಿಲ್ಲ. ಅವರಿಗೆ ಆಚರಣೆ ಮುಖ್ಯವೇ ಹೊರತು ಹಾಡುಗಳಲ್ಲ, ''ಯೇಳಿದ್ನೇ ಯೇಳ್ತಿರದೇ. ಮೂರು ಸಲ್ಲು ಮಾತ್ರ ತಿಂಗ್ಳು ಮಾವ್ನವೇಳಿ ಇನ್ನ್ಯಾವ್ನಾರ ಯೇಳಿಬಿಡ್ತಾರೆ.'' ''......ನನಿಗೆ ಬಂದೋವು ನಾನೇಳಬೌದು, ನಿನಗೆ ಬಂದೋವು ನೀನೇಳಬೌದು. ಕಲ್ತಕಂಡೋರು ಚೆನ್ನಾಗೇಳ್ತಾರೆ, ಕಾಣದೋರು ಅರ್ಧಬರ್ಧ ಯೇಳ್ತಾರೆ.''

ಹಸೆ ಬರೆಯಲು ಮತ್ತು ಕಳಶಕ್ಕೆ ಉಪಯೋಗಿಸಲು 'ಗಂಗಮ್ಮ'ನನ್ನು ತಂದಿರುತ್ತಾರೆ. ತರಲು ಹೋದಾಗ ದಾರಿಯಲ್ಲೆಲ್ಲೂ ಅವರು ಗಂಗಮ್ಮನನ್ನು ಕುರಿತು ಹಾಡಿರುವುದಿಲ್ಲ. ಈಗ ಅವು ಪ್ರಾರಂಭವಾಗುತ್ತವೆ:

'ಬಾಳೆಯ ವನಕೆ ಹೋದರು ಮುತ್ತೈದೇರು
ಬಾಳೆಯ ಹೂವ (ಗುಡಿಸ್ಸಾರೆ) ಗುಡಿಸಿ ॥ ಗುಡ್ಡೇಮಾಡಿ
ತುಂಬಿಕೊಡಮ್ಮ ಕೊಡಗಳಾ'

(ಐದು ಸಾರಿ ಹೇಳುತ್ತಾರೆ)

'ಗಂಗಮ್ಮ ಗೌವರಿಬಾರೇ ನೀರೊಳಗೇ
ಏನಡಿಗೆ ಮಾಡುತ್ತಿದ್ದೆ'

ಎಂಬ ಧೃವದೊಂದಿಗೆ ಗಂಗಮ್ಮನನ್ನು ಕರೆದು ಪೂಜೆಯ ಶಾಸ್ತ್ರ ಮಾಡುತ್ತಾರೆ. ಮುಂದೆ ತಿಂಗಳುಮಾವನ ಪೂಜೆ ಪದಗಳ ಅನೇಕ ವೈವಿಧ್ಯಮಯ, ವೈಶಿಷ್ಟ್ಯಪೂರ್ಣ ಸೊಲ್ಲುಗಳನ್ನು ಕಾಣಬಹುದು. ತಿಂಗಳುಮಾವನ ಮದುವೆ ಪ್ರಾರಂಭವಾಗುವುದು ಇಲ್ಲಿಂದ ಮುಂದೆ. ಈ ಸೊಲ್ಲುಗಳಲ್ಲಿನ ಹಲವು ಪದಗಳಿಗೆ ಅರ್ಥ ಸ್ಪಷ್ಟವಾಗುವುದಿಲ್ಲ. ಹಾಡುಗಾರರ ಬಳಿ ಅರ್ಥ ಕೇಳಿದರೆ, ''ಏನೋ ಅದ್ರಗಿತ್ತೆಪ್ಪ ನಮಗೇನ್ಗೊತ್ತು'' ಎನ್ನುತ್ತಾರೆ. ಮದುವೆ ಹಾಡುಗಳನ್ನು ಹೇಳಲು ನೆರದಿರುವವರಲ್ಲಿ ಎರಡು ಗುಂಪು ಮಾಡಿಕೊಳ್ಳುತ್ತಾರೆ. ಒಂದು ಹೆಣ್ಣಿನ ಕಡೆಯ ಗುಂಪು. ಮತ್ತೊಂದು ಗಂಡಿನ ಕಡೆಯದು. ಎರಡು ಗುಂಪಿನಲ್ಲೂ ಹಿಮ್ಮೇಳ ಮುಮ್ಮೇಳಗಳಿರುತ್ತವೆ. ಈ ಸಂದರ್ಭದ ಹಾಡುಗಳು ಬಹಳವಾಗಿ ಪುನರಾವರ್ತನೆಗೊಳ್ಳುತ್ತವಾದರೂ ಪ್ರಶ್ನೆ-ಉತ್ತರ ರೂಪದಲ್ಲಿರುವುದರಿಂದ ಸ್ವಾರಸ್ಯವಾಗಿರುತ್ತವೆ.

ಕುಲ ಕೇಳುವುದು

ಪ್ರಶ್ನೆ-'ಚಿನ್ನೀ ನಿಮ್ಮ ಕುಲವೇಳೇ?
ಚಿಲುಕ ನಿಮ್ಮ ಕುಲವೇಳೇ?
ಜಾಜೀ ನಿಮ್ಮ ಕುಲವೇಳೇ?
ಜಾಜಲ್ಲಾಪುರವೇ'

ಉತ್ತರ-'ಚಿನ್ನೀ ನಾವು ವಾಡ್ಡರು
ಚಿಲುಕ ನಾವು ವಾಡ್ಡರು
ಜಾಜೀ ನಾವು ವಾಡ್ಡರು
ಜಾಜಲ್ಲಾಪುರವೆ'

ಒಂದೊಂದು ಜಾತಿಯ ಹೆಸರನ್ನು ಹೇಳಿ ಉತ್ತರಿಸಿದ ಹಾಗೆಲ್ಲಾ ಮತ್ತೆ ಮತ್ತೆ ಪ್ರಶ್ನೆಯ ರೂಪದ ಹಾಡನ್ನು ಎದುರು ಗುಂಪಿನವರು ಹಾಡು

ತ್ತಾರೆ. ಗುಂಪಿನಲ್ಲಿ ಹಾಡುವವರು ತಮಗೆ ಗೊತ್ತಿರುವ ಎಲ್ಲ ಜಾತಿಯ ಹೆಸರುಗಳನ್ನೂ ಹೇಳುತ್ತಾರೆ. ಬಣಜಿಗರು, ಒಕ್ಕಲಿಗರು, ಗಾಣಿಗರು, ನೊಣಬರು, ಗೊಲ್ಲರು, ಬಂಜಾರರು, ಕ್ವಾಮಟಿಗರು, ಶೆಟ್ಟರು ಮುಂತಾದವರು: ಲಿಂಗಾಯಿತರು ಮತ್ತು ಬ್ರಾಹ್ಮಣರನ್ನು ಸಹ ಹೆಸರಿಸುತ್ತಾರೆ. ಆದರೆ ಅವರು ಈ ಆಚರಣೆಯನ್ನು ಮಾಡುವುದಿಲ್ಲ. ಅದರಲ್ಲಿ ಪಾಲ್ಗೊಳ್ಳುವುದೂ ಕಡಿಮೆ. ಜಾತಿಯ ಹೆಸರನ್ನು ಹೇಳುವಾಗ ಕೆಲವು ಕೀಳು ಎಂದು ಪರಿಗಣಿಲ್ಪಡುವ ಜಾತಿಯ ಹೆಸರುಗಳನ್ನು ಸೇರಿಸುವುದಿಲ್ಲ. ಬೆಳದಿಂಗಳ ಪೂಜೆಯನ್ನು ಹರಿಜನರೂ ತಮ್ಮ ಹಟ್ಟಿಗಳಲ್ಲಿ ಆಚರಿಸುತ್ತಾರೆ. ಉಳಿದ ಜನಾಂಗ ಊರೊಳಗೆ ಆಚರಿಸುತ್ತಾರೆ. ವಿಪರ್ಯಾಸವೆಂದರೆ ಹರಿಜನರು ತಮ್ಮಲ್ಲೇ ಇರುವ ಎರಡು ಪಂಗಡಗಳಲ್ಲಿ ಮತ್ತೊಂದು ಪಂಗಡದ ಹೆಸರನ್ನು ಹಾಡುಗಳಲ್ಲಿ ಸೇರಿಸುವುದಿಲ್ಲ. ''ಅವ್ರನ್ನ ಯೇಳಲ್ಲಸ್ವಾಮಿ ನಾವು'' ಎನ್ನುತ್ತಾರೆ. ಉಳಿದಂತೆ ತಮಗಿಂತ ಉತ್ತಮ ಜಾತಿಯ ಹೆಸರುಗಳನ್ನೆಲ್ಲಾ ಹೇಳುತ್ತಾರೆ. ಒಟ್ಟಾರೆ ಚಂದ್ರನನ್ನು ಒಂದೊಂದು ಪಂಗಡದವರೂ ಪ್ರತ್ಯೇಕವಾಗಿ ಪೂಜಿಸುತ್ತಿದ್ದರೆನ್ನಬಹುದು.

ಈ ಸಂದರ್ಭದಲ್ಲಿ ಕೊರಟಗೆರೆ ತಾಲ್ಲೂಕು ಜೆಟ್ಟಿ ಅಗ್ರಹಾರದಲ್ಲಿ ದೊರೆತ ಪಾಠವೊಂದನ್ನು ಗಮನಿಸಬಹುದು. 'ಕುಲಕೇಳುವ' ಮತ್ತು 'ಒಪ್ಪಿಗೆ ಪಡೆಯುವ' ಕೆಲವು ಹಾಡುಗಳು ತೆಲುಗು ಪದಗಳಿಂದ ಕೂಡಿವೆ. ಅವು ಕನ್ನಡ ಪದಗಳ ಜೊತೆ ಜೊತೆಯಲ್ಲೇ ಬಳಕೆಯಾಗಿ ಅರ್ಥದ ಗೊಂದಲಕ್ಕೆ ಕಾರಣವಾಗುತ್ತವೆ. ಕುತೂಹಲದ ಸಂಗತಿಯೆಂದರೆ ಈ ಹಾಡುಗಳನ್ನು ಹಾಡಿದವರಿಗೆ ತೆಲುಗು ಭಾಷೆ ಬರುವುದಿಲ್ಲ. ಕನ್ನಡ ಅವರ ಮನೆಮಾತು. ಹೀಗೆ ತೆಲುಗು ಬಳಕೆಯಾಗಿರುವುದು ತೆಲುಗು ಪ್ರಾಂತದ ಪ್ರಭಾವ ಹಾಗೂ ತೆಲುಗು ಜಾನಪದದಲ್ಲಿ ಈ ಸಂಪ್ರದಾಯ ಇರುವ ಅಂಶವನ್ನು ಗುರುತಿಸಬಹುದು:

ಪ್ರಶ್ನೆ-'ಚಿನ್ನೀ ನೀವೇಟ್ರೋಳ್ಳೆ?
ಚಿನ್ನಕ್ಕ ನೀವೇಟ್ರೋಳ್ಳೆ?
ದಾದೀ ನೀವೇಟ್ರೋಳ್ಳೆ?
ದಾದರ ಮಗ್ಗಾಲೇ'

ಉತ್ತರ-'ಚಿನ್ನೀ ನಾವು ಕಾಪೊಳ್ಳೆ
ಚಿನ್ನಕ್ಕ ನಾವು ಕಾಪೊಳ್ಳೆ
ದಾದೀ ನಾವು ಕಾಪೊಳ್ಳೆ
ದಾದರ ಮಗ್ಗಾಲೇ'

ಪ್ರಶ್ನೆ-'ಚಿನ್ನೀ ನೀ ಮಡಕೆಲೇದೆ?
ಚಿನ್ನಕ್ಕ ನೀ ಮಡಕಲೇದೆ?
ದಾದೀ ನೀ ಮಡಕೆಲೇದೆ?
ದಾದರ ಮಗ್ಗಾಲೇ'

ಉತ್ತರ-'ಚಿನ್ನೀ ನಾ ಮಡಕಾಲಿದಗೊ
ಚಿನ್ನಕ್ಕ ನಾ ಮಡಕಾಲಿದಗೊ
ದಾದೀ ನಾ ಮಡಕಾಲಿದಗೊ
ದಾದರ ಮಗ್ಗಾಲೇ'

ಕುಲ ಕೇಳುವ ಹಾಡುಗಳ ಒಂದು ವಿಶೇಷ ಅಂಶವೆಂದರೆ ಒಂದೊಂದು ಜಾತಿಯ ಹೆಸರನ್ನು ಹೇಳಿದಾಗಲೂ ಆ ಜಾತಿಗೆ ಸಂಬಂಧಿಸಿದ ಕೆಲವು ವಿಶೇಷ ಲಾಂಛನಗಳನ್ನೋ ಅಥವಾ ಆ ಜಾತಿಯ ವೈಶಿಷ್ಟ್ಯವನ್ನೋ ಹೇಳುತ್ತಾರೆ. ಮೇಲೆ ಉದಾಹರಿಸಿದ ಪದ್ಯಗಳಲ್ಲಿ ಒಕ್ಕಲಿಗರಿಗೆ (ತೆಲುಗಿನಲ್ಲಿ ಕಾಪೊಳ್ಳು) 'ನಿಮ್ಮ ಮಡಿಕೆ ಎಲ್ಲಿ?' ಎಂದು ಕೇಳುವುದನ್ನು ಗಮನಿಸಬಹುದು. ಇನ್ನು ಕೆಲವು ಉದಾಹರಣೆಗಳನ್ನು ನೋಡಬಹುದು. ಲಿಂಗಾಯಿತರು-ಲಿಂಗ, ಬ್ರಾಹ್ಮಣರು-ಹೋಮ, ಶಿಳ್ಳೇಕ್ಯಾತರು- ಬೊಂಬೆ, ಅರಸುಮಕ್ಕಳು-ಪೇಟ, ಮಾದಿಗರು-ತಬಟೆ, ಮಡಿವಾಳರು-ಉಬ್ಬೆ-ಹೀಗೆ ಜೆಟ್ಟಿ ಎನ್ನುವ ಒಂದು ಜಾತಿಯ ಹೆಸರನ್ನು ಹೆಸರಿಸುತ್ತಾರೆ. ಇವರು ಮಾಂಸಾಹಾರಿಗಳು. ಆದರೆ ಬ್ರಾಹ್ಮಣರಂತೆ ಜನಿವಾರ ಧರಿಸುತ್ತಾರೆ. ಮದುವೆ, ಮುಂಜಿ ಮುಂತಾದ ಸಂದರ್ಭಗಳಲ್ಲಿ ಬ್ರಾಹ್ಮಣರನ್ನು ಕರೆಸುತ್ತಾರೆ. ಇವರು ತಮ್ಮನ್ನು ತಾವು 'ಮಲ್ಲ ಬ್ರಾಹ್ಮಣ'ರೆಂದು ಕರೆದುಕೊಳ್ಳುತ್ತಾರೆ. ಹೆಸರುಗಳನ್ನು ಇಟ್ಟುಕೊಳ್ಳುವಾಗ ಗೌಡ, ಆರಾಧ್ಯ, ಅರಸು ಇರುವಂತೆ ಜೆಟ್ಟಿ ಎಂದು ಹೆಸರಿನ ಕೊನೆಯಲ್ಲಿ ಸೇರಿಸಿಕೊಳ್ಳುತ್ತಾರೆ.

ಪೂಜೆ ಆಚರಿಸುವವರು ಹಾಡುಗಳಲ್ಲಿ ಬಹು ಸಂಖ್ಯಾತರ ಅಥವಾ ಉತ್ತಮ ಜಾತಿಯನ್ನೇ ಒಪ್ಪಿಕೊಳ್ಳುತ್ತಾರೆ. ಒಪ್ಪಿಕೊಳ್ಳುವ ಮೊದಲು ಒಪ್ಪಿಗೆ ಪಡೆಯುವ ಕೆಲವು ಹಾಡುಗಳನ್ನು ಹಾಡುತ್ತಾರೆ. ಅವೂ ಸಹ ಪ್ರಶ್ನೆ-ಉತ್ತರ ರೂಪದಲ್ಲಿರುತ್ತವೆ. ಕುಲ ಕೇಳುವ, ಪ್ರಶ್ನೆ-ಉತ್ತರ ರೂಪದ ಹಾಡು ಜನಪದ ಐಡಿಗೀತೆಗಳಲ್ಲಿಯೂ ಪ್ರಕಟವಾಗಿವೆ.[೪]

ಹೆಣ್ಣು ಕೇಳುವುದು

ಗಂಡಿನ ಕಡೆಯವರು :	'ಒಂದಾರ ಕೊಟ್ಟೇವು ಒಂದ್ಹೆಣ್ಣ ಕೊಡಿರಮ್ಮ ಕಾವಾಟಿ ರಂಗಾಗೆ ಕಸ್ತೂರಿ ರಂಗಾಗೆ ಸಣ್ಣ ಸರಪಣಿಮ್ಯಾಲೆ ಸವುಲನಾಕಿಕೊಂಡಪ್ಪ ರಂಗಪ್ಪಗೊಂದ್ಹೆಣುಕೊಡಿರಮ್ಮಾ ಹೆಣ್ಣುಕೊಡಿರೇ'
ಹೆಣ್ಣಿನ ಕಡೆಯವರು :	'ಒಂದಾರ ಅಂಬೋದು ಏನಮ್ಮ ಮಗಳೀಗೆ? ಎತ್ತಮ್ಮ ಮಗಳೀಗೆ? ಹಾಸೋದು ಹಾಸಣಿಗೆ ಬೀಸೋದು ಬೀಸಣಿಗೆ ನೀರು ತರುವುದು ಗಿಂಡಿ ನಿದ್ರೆ ಮಾಡೋದು ಮಂಚ ಒತ್ತೋದು ಕೆಮ್ಮಣ್ಣು ಒರಗೋದು ಸುಳಿಮಂಚ ಚಿಟುಪಟ್ಲೆ ಕಾಯಿ ಚಿನ್ನಾದ ಕೈಕಟ್ಟು ರನ್ನಾದ ಮೊಲೆಕಟ್ಟು ಚಿಕ್ಕರಸಿ ಮನೆಯಾಗ್ಹೆಣ್ಣಲ್ಲವಮ್ಮಾ ಹೆಣ್ಣಲ್ಲವೇ'

ಎರಡಾರ ಕೊಟ್ಟೇವು ಎರಡ್ಹೆಣ್ಣ ಕೊಡಿರಮ್ಮ.... ಎಂದು ಮುಂದುವರೆಸಿ ಐದರವರೆಗೆ ಪ್ರಶ್ನೋತ್ತರ ಗೀತೆಗಳನ್ನು ಎರಡೂ ಕಡೆಯವರು ಹಾಡುತ್ತಾರೆ.

ಗಂ. ಕ: 'ಒಂದೇ ಸುತ್ತಿನ ಬಾವಿನಾರೂ ಸೇದಿರಮ್ಮ
ನಾವು ಚೆನ್ನಪ್ಪಸೆಟ್ಟಿ ಚೆಲುವನ ಮಗ್ಳ ಬಿಡಲಾರೋ'

ಹೆ.ಕ : 'ಒಂದೇ ಸುತ್ತಿನ ಬಾವಿನಾದ್ರೂ ಸೇದಲಾರೋ
ನಾವು ಚೆನ್ನಪ್ಪಸೆಟ್ಟಿ ಚೆಲುವನ ಮಗ್ಳ ಕೊಡಲಾರೋ'

ಬೆಳದಿಂಗಳ ಪೂಜೆ ಸಂದರ್ಭದಲ್ಲಿ ಹೆಣ್ಣುಕೇಳುವ ಹಾಡುಗಳು ಇತರೆ ಮದುವೆಗಳಲ್ಲಿನ ಹಾಡುಗಳಿಗಿಂತ ಭಿನ್ನವಾಗಿರುತ್ತವೆ. ಸಾಮಾನ್ಯವಾಗಿ ಸಂಪ್ರದಾಯದ ಹಾಡುಗಳನ್ನು ಬೇರೆ ಬೇರೆ ಸಂಪ್ರದಾಯದ ಆಚರಣೆಯ ಕಾಲದಲ್ಲೂ ಹಾಡುತ್ತಾರೆ. ಬೆಳದಿಂಗಳ ಪೂಜೆ ಪದಗಳಲ್ಲಿ ಬರುವ ಹೆಣ್ಣು ಕೇಳುವುದು, ಒಡವೆ ಕೇಳುವುದು ಮುಂತಾದ ಸೊಲ್ಲುಗಳನ್ನು ಕೊಂತಿ ಪೂಜೆ ಮತ್ತು ಬಸವನ ಪೂಜೆಯ ಸಂದರ್ಭದಲ್ಲೂ ಹಾಡುತ್ತಾರೆ. ಆದರಿಂದಾಗಿ ಈ ಸಂದರ್ಭದ ಹಾಡುಗಳು ಬೇರೆ ಬೇರೆ ರೂಪಗಳಲ್ಲಿ ಸಿಕ್ಕಲು ಸಾಧ್ಯವಿದೆ.

ಬಣ್ಣ ಕೇಳುವುದು

ಬಣ್ಣ ಹಳ್ಳಿಗರ ಬಾಯಲ್ಲಿ ಸೀರೆ ಎಂಬ ಅರ್ಥದಲ್ಲಿ ಬಳಕೆಯಾಗುವ ಪದ. ಈ ಪದ ಬಹಳ ಆಕರ್ಷಕವಾದದ್ದು. ಈಗಲೂ ನಮ್ಮ ಹಳ್ಳಿಗಳಲ್ಲಿ ಈ ಪದವನ್ನು ಬಳಸುತ್ತಾರೆ. ಹೆಣ್ಣನ್ನು ಒಪ್ಪಿದ ಮೇಲೆ ಹೆಣ್ಣಿಗಾಗಿ ಸೀರೆ, ಒಡವೆ ಕೇಳುವ ಸಂಪ್ರದಾಯ ಸಾಮಾನ್ಯವಾಗಿ ಎಲ್ಲ ಮದುವೆಗಳಲ್ಲೂ ಇರುವಂತೆ ಇಲ್ಲೂ ಇದೆ:

**'ಬೆಂಗ್ಳೂರ ಬಣ್ಣ
ತಂದಿವಲ್ಲೆ ಅತ್ತಿಗೆ
ತಂದಿವಲ್ಲ ನಾದ್ನಿ
ಅದು ನಿಮ್ಮೆಣ್ಣಿಗೆ
ಒಪ್ಪಿಗೇನೆ ಬೀಗತಿ?
ಒಪ್ಪಿಗೇನೆ ಬೀಗತಿ?'**

ಬೆಂಗಳೂರು, ಬೊಂಬಾಯಿ ಮುಂತಾದ ದೊಡ್ಡ ದೊಡ್ಡ ದೂರದ ಪಟ್ಟಣಗಳ ಸೀರೆಯನ್ನು ಬಹಳ ಸಾರಿ ನಮ್ಮ ಜನಪದರು ಒಪ್ಪುವುದಿಲ್ಲ. ತಮ್ಮ ಸುತ್ತಮುತ್ತಲ ಊರುಗಳ ಜೊತೆಗೆ ತಮಗೆ ಗೊತ್ತಿರುವ ಪಟ್ಟಣಗಳನ್ನೆಲ್ಲಾ ಹೆಸರಿಸುತ್ತಾರೆ.

**'ಬೆಂಗ್ಳೂರ ಬಣ್ಣ
ಅದು ಬವು ಸಣ್ಣ
ಅದು ಬವು ನುಣ್ಣ
ಅದು ನಮ್ಮೆಣ್ಣಿಗೆ
ಒಪ್ಪಿಗಿಲ್ಲ ಬೀಗ್ತಿ
ಒಪ್ಪಿಗಿಲ್ಲ ಬೀಗ್ತಿ'**

ತಮ್ಮ ಹಳ್ಳಿಯ ಸೀರೆಯನ್ನೇ ಅವರು .ಒಪ್ಪುವುದು. ತಮ್ಮ ಹಳ್ಳಿಯ ಹೆಸರು ಬಂದಾಗ 'ಒಪ್ಪಿಗೆ ಕಣೆ ಬೀಗ್ತಿ' ಎಂದು ಒಪ್ಪಿಕೊಳ್ಳುತ್ತಾರೆ. ಇದು ಹಳ್ಳಿಗರನ ಅಭಿಮಾನಕ್ಕೆ ನಿದರ್ಶನವಾಗುತ್ತದೆ.

ಒಡವೆ ಕೇಳುವುದು

ಒಡವೆಗಳು ಇಂಥವೇ ಎಂದು ಯಾವ ನಿರ್ಬಂಧಗಳೂ ಇರುವುದಿಲ್ಲ. ಹಳ್ಳಿಯಲ್ಲಿ ಪುರಾತನ ಕಾಲದಿಂದಲೂ ಧರಿಸುತ್ತಿದ್ದ ಪ್ರಾಚೀನ ಒಡವೆಗಳ ಹೆಸರುಗಳನ್ನೆಲ್ಲಾ ಹೆಣ್ಣಿಗೆ ಕೊಡುತ್ತಾರೆ.

'ಚಿಕ್ಕ ಚಿಕ್ಕ ಮಕ್ಕಳಿಗೇನೊಡವೆ?
ಚಿತ್ತಾರ ಮಕ್ಕಳಿಗೇನೊಡವೆ?
ಸ್ವಾಮಿ ದಂಡಿಗೇನೊಡವೆ?
ಶ್ರೀರಾಮರ ಮಕ್ಕಳಿಗೇನೊಡವೆ?'

'ಚಿಕ್ಕ ಚಿಕ್ಕ ಮಕ್ಕಳಿಗೆ ವಾಲೆ
ಚಿತ್ತಾರ ಮಕ್ಕಳಿಗೆ ವಾಲೆ
ಸ್ವಾಮಿ ದಂಡಿಗೆ ವಾಲೆ
ಶ್ರೀರಾಮರ ಮಕ್ಕಳಿಗೆ ವಾಲೆ'

ನಾಗರು, ಬಿಲ್ಲೆ, ಅಡ್ಡಿಕೆ, 'ಜಿಮ್ಕಿ' ಡಾಬು, ಕಾಸಿನಸರ, ಕೆನ್ನೆ ಚೈನು, ಕಾಲಂದ್ಗೆ, ತಾಳಿ, ಗುಂಡು, ಮಾಂಗಲ್ಯ-ಮುಂತಾದವುಗಳನ್ನು ಸೇರಿಸಿಕೊಂಡು ಸುದೀರ್ಘ ಕಾಲದವರೆಗೆ ಹಾಡುತ್ತಾರೆ. ಜನಪದ ಗೀತೆಗಳಲ್ಲಿ ಪುನರಾವರ್ತನೆ ಮತ್ತು ಏಕತಾನತೆ ಇದೆ ಎನ್ನುತ್ತೇವೆ. ಇಂಥ ಸಂದರ್ಭಗಳಲ್ಲಿ ಪುನರಾವರ್ತನೆ ಅನಿವಾರ್ಯ. ಹಳ್ಳಿಗರಿಗೆ ಗೀತೆಗಳು ಯಾವ ರೀತಿಯಿಂದಲೂ ಮುಖ್ಯವಾಗುವುದಿಲ್ಲ. ಅವರ ಉದ್ದೇಶ ಆಚರಣೆ. ಆಚರಣೆಯ ನಿರೂಪಣೆಯೇ ಅವರ ಪ್ರಮುಖ ಗುರಿಯಾಗಿರುತ್ತದೆ. ಪೂಜೆ ಒಂದು ದಿನಕ್ಕೆ ಮುಗಿಯುವುದಿಲ್ಲ. ಅವರಿಗೆ ಸಾಕಾಗುವವರೆಗೂ, ಮಕ್ಕಳು ಅಲ್ಲಲ್ಲೇ ಮಲಗುವವರೆಗೂ ಎಷ್ಟು ಸಾಧ್ಯವಾಗುತ್ತದೋ ಅಷ್ಟು ಹಾಡುತ್ತಾರೆ. ಕೊನೆಯಲ್ಲಿ ಅವತ್ತಿಗೆ ಮಾತ್ರ ಮಂಗಳ ಹಾಡಿ 'ಪಲ್ಲಾರ' ಹಂಚಿ ಮರುದಿನ ರಾತ್ರಿ ಮತ್ತೆ ಪೂಜೆ ಪ್ರಾರಂಭಿಸುತ್ತಾರೆ.

ಪೂಜೆಯ ಈ ಹಾಡುಗಳ ಜೊತೆಗೆ ಇನ್ನು ಕೆಲವು ಸ್ವಾರಸ್ಯಕರವಾದ ಚಿಕ್ಕ ಚಿಕ್ಕ ನಾಲ್ಕು ಸಾಲಿನ, ಐದು ಸಾಲಿನ ಪದ್ಯಗಳೂ ಇವೆ. ಅವುಗಳನ್ನು ಅನುಬಂಧದಲ್ಲಿ ನೋಡಬಹುದು. ಅವೆಲ್ಲ ವಿವಿಧ ಮಟ್ಟುಗಳಲ್ಲಿ ಧಾಟಿಗಳಲ್ಲಿವೆ. ಹಾಡಿನ ಧಾಟಿಗಳು ನನಗೆ ನೆನಪಿವೆಯಾದರೂ, ಅಕ್ಷರಗಳಲ್ಲಿ ಮುದ್ರಿಸುವಾಗ ಅದಕ್ಕೆ ಸ್ವರಪ್ರಸ್ತಾರ ಹಾಕಲು ಸಾಧ್ಯವಾಗಿಲ್ಲ. ಅದಕ್ಕೆ ಸಂಗೀತ ಶಾಸ್ತ್ರದ ತಿಳುವಳಿಕೆ ಅಗತ್ಯವಾಗುತ್ತದೆ.

ಹಾಡಿನ ಸುಗ್ಗಿ

ಪೂಜೆಯ ಕೊನೆಯ ಹಂತದಲ್ಲಿ, ಹಾಡಲು ಎಲ್ಲ ಹೆಂಗಸರಿಗೂ ಅವಕಾಶ ದೊರೆಯುತ್ತದೆ. ಬೆಳದಿಂಗಳ ಮೇಲಿನ ಪದಗಳು ಮುಗಿದವೆನ್ನುತ್ತಾರೆ. ಅವರು ಜ್ಞಾಪಿಸಿಕೊಳ್ಳಲು ತೊಡಗಿದಾಗ ಬಹುಶಃ ಇನ್ನೂ ಹಲವಾರು ತುಣುಕುಗಳು ಇವೆ ಎಂದು ಅನ್ನಿಸುತ್ತದೆ. ಅವುಗಳನ್ನು ಸಂಗ್ರಹಿಸದಿದ್ದಲ್ಲಿ ಅವು ಹಾಗೇ ನಶಿಸಿ ಹೋಗುತ್ತವೆ. ಸಂಗ್ರಹಿಸಲು ಇರುವ ತೊಡಕೆಂದರೆ, ಈಗಾಗಲೇ ಈ ಸುತ್ತಮುತ್ತಲಿನಲ್ಲಿ ಈ ಪೂಜೆ ಮಾಡುವುದನ್ನು ಕೈಬಿಟ್ಟಿದ್ದಾರೆ. ಈ ಆಚರಣೆಯನ್ನು ಅಭ್ಯಾಸಮಾಡಿರುವ ಹಳ್ಳಿಗಳಲ್ಲಿ ಈಗಾಗಲೆ ಈ ಪೂಜೆ ಮಾಡಿ ನಾಲ್ಕೈದು ವರ್ಷಗಳಾದವೆಂದು ಹೇಳುತ್ತಾರೆ. ಒಂದು ಹಳ್ಳಿಯಲ್ಲಂತೂ ಈ ಪೂಜೆ ಮಾಡದೆ ಎಂಟು ವರ್ಷಗಳಾಗಿವೆ. ಈ ಆಚರಣೆಯಲ್ಲಿ ಜನರು ನಂಬಿಕೆಯನ್ನು ಕಳೆದುಕೊಂಡಿದ್ದಾರೆ. ಹಳ್ಳಿಗಳಲ್ಲಿ ಈ ಪೂಜೆಯನ್ನು ಕೈಬಿಟ್ಟಿರುವ ಕಾರಣ ಕೇಳಿದರೆ, ''ಈಗ ಯಾರೂ ಒಂದಾಗಲ್ಲ. ನಮ್ಮ ನಮ್ಮಲ್ಲೇ ಒಡಕಾಗಿ ಬಿಟ್ಟಿದ್ದೀವಿ'' ಎನ್ನುತ್ತಾರೆ. ಜನಪದ ಸಾಹಿತ್ಯ, ಆಚರಣೆ, ಸಂಪ್ರದಾಯ-ಎಲ್ಲವೂ ಸಾಮೂಹಿಕ ಸೃಷ್ಟಿ ಎಂಬ ಮಾತಿಗೆ ಈ ಪ್ರತಿಕ್ರಿಯೆಯಲ್ಲಿ ಉತ್ತರವಿದೆ.

ಒಂದು ಪರಂಪರಾಗತ ಆಚರಣೆ ಇದ್ದಕ್ಕಿದ್ದಂತೆ ನಿಂತುಹೋಗಲು ಕಾರಣಗಳನ್ನು ಹುಡುಕಬೇಕಾಗುತ್ತದೆ. ನಂಬಿಕೆಗಳ ಹಿಂದಿನ ಭೀತಿ ಮಾಯವಾಗಿರುತ್ತದೆ. ಹಳ್ಳಿಗರಲ್ಲಿ ಯಾವ ರೀತಿಯ ಒಡಕು ಉಂಟಾಗಿ ಇವು ನಿಲ್ಲುತ್ತವೆ ಎನ್ನುವುದನ್ನು ತಿಳಿಯಬೇಕಾದರೆ ಅವರ ಜೊತೆಯಲ್ಲೇ ಬಹಳಕಾಲ ಬದುಕಬೇಕಾಗುತ್ತದೆ. ಕೆಲವು ವೇಳೆ ಪೂಜೆಯ ಮಧ್ಯದಲ್ಲೇ ವೈಮನಸ್ಸುಂಟಾಗುವ ಸಂಭವಗಳೂ ಉಂಟು. ಅಂತಹ ವೇಳೆಯಲ್ಲಿ, ''ಅವ್ರಗೂ ಇವ್ರಗೂ ಪೈಪೋಟಿ

ಬಿದ್ದು ಬ್ಯಾರೆ ಚಂದ್ರಮ್ಮನ್ನೇ ವುಯ್ದುಬುಡ್ತಾರೆ''. ಕುರುಬರು ಮತ್ತು ಯಾವ ನಾಗರೀಕ ಸಂಪರ್ಕಕ್ಕೂ ಇನ್ನೂ ಬಲಿಯಾಗದ, ಆಚರಣೆ, ನಡೆನುಡಿ, ಉಡುಪು ಎಲ್ಲದರಲ್ಲೂ ತಮ್ಮತನವನ್ನೇ ಉಳಿಸಿಕೊಂಡು, ಊರಿನಿಂದ ಹೊರಗೇ ವಾಸಮಾಡುವ ಕಾಡುಗೊಲ್ಲರಲ್ಲಿ ಇದು ಮೂರು ದಿನದ ಪೂಜೆಯಾಗಿ ವರ್ಷಕ್ಕೊಮ್ಮೆ ಆಚರಿಸಲ್ಪಡುತ್ತದೆ.

ಪೂಜೆ ಮುಗಿಯುವುದು ಸೋಬಾನೆ ಪದಗಳೊಂದಿಗೆ. ಎಲ್ಲ ಮದುವೆ ಸಂದರ್ಭದಲ್ಲೂ ಹಾಡುವ ಮಾಮೂಲಿ ಸೋಬಾನಗಳನ್ನೇ ಹಾಡಿದರೂ ಸಂದರ್ಭಕ್ಕನುಸಾರವಾಗಿ ಹಾಡುಗಾರ್ತಿಯರಲ್ಲಿ ವಿಶಿಷ್ಟವಾದ ಕ್ರಿಯಾಶೀಲತೆಯನ್ನು ಕಾಣಬಹುದು. ಸಂದರ್ಭಕ್ಕನುಗುಣವಾಗಿ ಚಂದ್ರನ ಹೆಸರನ್ನು ಸೇರಿಸದೆ ಬಿಡುವುದಿಲ್ಲ. ಹೆಣ್ಣುಗಂಡಿಗೆ ನೀರು ಹಾಕುವ ಶಾಸ್ತ್ರಮಾಡುವುದಿಲ್ಲವಾದರೂ ಅದೆಲ್ಲಾ ಹಾಡಿನಲ್ಲೇ ನಡೆಯುತ್ತದೆ.

'ಉಪ್ಪುರುಗೆ ಮುಂದೆ ಉಕ್ಕ ನೀರರಿವೆ
ಕಪ್ಪುರದಾ ಸೆಕ್ಕೆ ಬಳವೊಡ್ಡಿ ॥ ಕಾದನೀರು
ಎರಿಬನ್ನಿ ಮಾರಾಯರ ಮಗನೀಗೆ'

'ಮಾಳಿಗೆ ಮುಂದೆ ಕಾಯನೀರ್ಯಾರೀಗೆ
ಯಾಲಕ್ಕಿನ್ಹಾಕಿ ಗಮಗಮ ॥ ಕಾದನೀರ
ಎರಿಬನ್ನಿ ಮಾರಾಯರ ಮಗಳೀಗೆ'

ನೀರುಯ್ಯುವ ಪದಗಳಿಗೆ ಲೆಕ್ಕವೇ ಇಲ್ಲ. ನೆರದಿರುವವರೆಲ್ಲಾ ಪೈಪೋಟಿಯ ಮೇಲೆ ಪದಗಳಲ್ಲಿ ನೀರುಯ್ಯುತ್ತಾರೆ. ಧಾರೆ ಮುಹೂರ್ತದ ಪದಗಳನ್ನು ಹಾಡುತ್ತಾರೆ:

'ಕಲ್ಯಾಣ ಸ್ವಬ ಕಲ್ಯಾಣ
ಕಲ್ಯಾಣ ಗಿರಿಜಿ ಕಲ್ಯಾಣ

ಎಳಿಯ ಬೆಳುದಿಂಗಳು ಒಳಗಿಬ್ಬಾರರಾರು
ಗಳಿಗೆ ಬಟ್ಟುಲವ ಯಿಡುಕಂಡು ॥ ನಮ್ಮನಿಯ
ಕಂದಯ್ಯಗು ದಾರೆ ಎರದೇವು

ಸಂಜೆ ಬೆಳುದಿಂಗಳು ಮುಂದಿಬ್ಬರರಾರು
ಗಳಿಗೆ ಬಟ್ಟುಲವ ಯಿಡುಕಂಡು ॥ ನಮ್ಮನಿಯ
ಪುತ್ರಯ್ಯಗು ದಾರೆ ಎರದೇವು'

ಮದುವೆಯ ಸಂದರ್ಭದಲ್ಲಿ ಸಾಮಾನ್ಯವಾಗಿ ಎಲ್ಲ ಜನಾಂಗದವರೂ ಚೆಂಡಾಟ ಆಡಿಸುವುದುಂಟು. ಹೂವಿನ ದಂಡೆಯನ್ನು ಕಟ್ಟಿ ಚೆಂಡು ಮಾಡುತ್ತಾರೆ. ತಿಂಗಳು ಮಾವನ ಹಸೆಯ ಮೇಲಿರುವ ಹೆಣ್ಣುಗಂಡಿನ ಕೈಯಲ್ಲೂ ಚೆಂಡಾಟವನ್ನು ಆಡಿಸುವುದುಂಟು. ಕೆಲವು ಕಡೆ ಪದಗಳನ್ನು ಮಾತ್ರ ಹಾಡಿಬಿಡುತ್ತಾರೆ.

'........................
ಮಾರಾಯರು ಚೆಂಡ ಮರತಾರೆ ಒಳಗಿರುವೊ
ಮಾಲಕ್ಷ್ಮೀ ಚೆಂಡ ಕೊಡುಬಾರೆ
ಚೆಂಡ ಕಂಡೋರು ತಂದಾಣೆ ತಾಯಾಣೆ
ಗಂಗಮ್ಮನಾಣೆ ಜಲುದಾಣೆ ॥ ಮೂಡಿ ಬರವೋ
ಚಂದ್ರಮ್ಮನಾಣೆ ಚೆಂಡುಕಾಣೆ'

ಮದುವೆ ಮನೆಗಳಲ್ಲಿ ಹಸೆ ಬರೆಯುವುದು ರೂಢಿ. ಹಸೆಯನ್ನು ಒಮ್ಮೊಮ್ಮೆ ಗಂಡಿನ ಕೈಯಲ್ಲೂ ಬರೆಸುತ್ತಾರೆ. ಹಸೆ ಬರೆಯುವ ಮತ್ತು ಹಸೆಗೆ ಕರೆಯುವ ಹಾಡುಗಳನ್ನು ಹಾಡುತ್ತಾರೆ:

'ಕಡಲೆ ಕಾಳಂಗೆ ಕಡುದಾರೆ ಹಸೆಗಳಾ
ಕಡಿಜಾಣೆ ಅವ್ರ ಹಿರಿಯವ್ವ ॥ ಕೂತಗಂಡು
ತಗಂಡು ಹೂವ ಅರಡಾಳೆ ಅವ್ರೆಡಾಬಲಕೆ'

'ಹಾಲಕ್ಕಿ ಬಾಲಕ್ಕಿ ಬಾಲರಾಜುಣದಕ್ಕಿ
ಬಾಗೂರು ಬಯಲಾಗೆ ಬೆಳದಕ್ಕಿ ನೆಲ್ಲಕ್ಕಿ ॥ ನೆಲ್ಲಕ್ಕಿ
ಬಾಗೂರು ಬಯಾಲಾಗೆ ಬೆಳೆದಂತ
ಬಾಲಯ್ಯನಸಿಗೆ ಬರಬೇಕು'

'ನನ್ನ ಮುದ್ದು ರಾಣಿ ಕಂದ
ಹೆಜ್ಜೆಜ್ಜೆಗು ಶಿವನ ನೆನಸುತ ॥ ರಾಣಿ ಕಂದ
ನೆಡದೇ ಬಾರಸೆಯನೆಡವಾಕೆ'


ಹಸೆಗೆ ಸಂಬಂಧಿಸಿದ ಹಾಡುಗಳನ್ನು ಯತೇಚ್ಛವಾಗಿ ಹಾಡುತ್ತಾರೆ. ಈ ಸಮಯದಲ್ಲೇ ಹಾಡಿನ ಪರಂಪರೆ ಬೆಳೆಯುವ ಕಾರ್ಯವೂ ನಡೆಯುತ್ತಿರುತ್ತದೆ. ಹೊಸ ಪೀಳಿಗೆಯ ಹುಡುಗಿಯರು ಮುಂದಿನ ವರ್ಷ ಹಾಡಲು ತಯಾರಾಗುತ್ತಿರುತ್ತಾರೆ. ಈಗ ಇಂಥ ಸಂಪ್ರದಾಯಗಳನ್ನೇ ಕೈಬಿಡುತ್ತಿರುವುದರಿಂದ ಅನೇಕ ಗೀತೆಗಳು ಕೆಲವರಲ್ಲೇ ಸತ್ತು ಹೋಗುತ್ತಿವೆ.

ಮಂಗಳ ಎಲ್ಲ ಆಚರಣೆ, ಸಂಪ್ರದಾಯಗಳಲ್ಲೂ ಅನಿವಾರ್ಯ. ಮಂಗಳವನ್ನು ಹಾಡದೇ ದಿನದ ಪೂಜೆಯನ್ನು ಮುಕ್ತಾಯಗೊಳಿಸುವುದಿಲ್ಲ. ಪೂಜೆಮಾಡುವಷ್ಟೂ ದಿನ ಬೇರೆ ಬೇರೆ ಮಂಗಳಾರತಿ ಹಾಡುಗಳನ್ನು ಹಾಡುತ್ತಾರೆ. ಈ ಸಂದರ್ಭದಲ್ಲಿ ಅನೇಕ ಶಿಷ್ಟ ಸಂಪ್ರದಾಯದ (ಬ್ರಾಹ್ಮಣೀಯ) ಹಾಡುಗಳನ್ನೂ, ದಾಸರ ಕೀರ್ತನೆಗಳನ್ನೂ ಹಾಡುತ್ತಾರೆ.

'ಜಯ ಜಯ ಮಂಗಾಳವಾಗೀದೆ
ಶಿವ ಶಿವ ಮಂಗಾಳವಾಗೀದೆ
ಹರ ಹರ ಮಂಗಾಳವಾಗೀದೆ'

'ಪಲ್ಲಾರ' ಹಂಚಿದರೆ ಆಚರಣೆ ಮುಗಿದಂತೆ ಅಲ್ಲ. ಹೆಣ್ಣುಗಂಡನ್ನು ಮೆರವಣಿಗೆಯಲ್ಲಿ ಕರೆದೊಯ್ಯುತ್ತಾರೆ. ಮೆರವಣಿಗೆಯ ಸಮಯದಲ್ಲಿ ಓಲಗ ಮುಂತಾದ ವಾದ್ಯಗಳನ್ನು ಕೆಲವು ಹಳ್ಳಿಗಳಲ್ಲಿ ಬಳಸುತ್ತಾರೆ. ಕೆಲವು ತರುಣರು ಕೆಲವು ವೇಷಗಳನ್ನು ಹಾಕಿ ಕುಣಿಯುತ್ತಾರೆ. ಮನರಂಜನೆ ಮುಖ್ಯವಾಗುತ್ತದೆ. ಪೂಜೆಯ ಮಧ್ಯೆ ಒಗಟುಗಳನ್ನು ಒಡ್ಡಿ ಉತ್ತರ ಪಡೆಯುವ ಆಟವೂ ನಡೆಯುತ್ತಿರುತ್ತದೆ. ಕೊನೆಗೆ ಹಸೆಯ ಮೇಲೆ ಇರುವ ಎಲೆ, ಹೂ, ಅಕ್ಕಿ ಮುಂತಾದ ಪದಾರ್ಥಗಳನ್ನೆಲ್ಲಾ ತೆಗೆದುಕೊಂಡು ಕಳಶದ ತಟ್ಟೆಯೊಂದಿಗೆ ಹೆಂಗಸರೆಲ್ಲ ಊರಿನ ಕೆರೆ, ಬನ್ನಿಮರ ಅಥವಾ ಅಶ್ವತ್ಥವೃಕ್ಷದ ಬಳಿಗೆಹೋಗಿ ಹೊಂಬಾಳೆ, ಹೂ, ಅಕ್ಕಿ ಎಲ್ಲವನ್ನು ಬಿಟ್ಟು 'ಬೆಳದಿಂಗ್ಳಪ್ಪನ್ನ ಸಾಗಾಕ್ತಾರೆ.' ಆಮೇಲೆ ಹೆಂಗಸರಿಗೆ ಹೆಣ್ಣುಗಂಡಿಗೆ ತೊಡಿಸಿರುವ ಒಡವೆ ವಸ್ತ್ರಗಳ ಕಡೆ ಗಮನ ಹರಿಯುತ್ತದೆ.

ಈ ಆಚರಣೆ ಮೌಲ್ಯಗಳನ್ನು ಕಳೆದುಕೊಂಡು, ಮೂಲ ಸ್ವರೂಪದ ಸ್ಪಷ್ಟ ರೂಪುರೇಷೆಗಳನ್ನು ಅರಿಯಲು ತೊಡಕಾಗಿದೆ. ಪ್ರಸ್ತುತ ಅಭ್ಯಾಸವೂ ಸಹ ಒಂದು ಸಮಗ್ರತೆಯನ್ನು ತಂದುಕೊಡುವುದಿಲ್ಲ. ಕಾರಣ, ಇಲ್ಲಿ ಕೆಲವೇ ಹಳ್ಳಿಗಳಿಗೆ ಸೀಮಿತಗೊಂಡ ಆಚರಣೆಯ ವಿವರಗಳಿವೆ. ಬೇರೆ ಬೇರೆ ಸ್ಥಳಗಳಲ್ಲಿನ ಆಚರಣೆಯನ್ನು ಆಸ್ತಕರು ಅಭ್ಯಾಸ ಮಾಡಿದಲ್ಲಿ ಹೆಚ್ಚಿನ ಮಾಹಿತಿಗಳು ದೊರೆಯುವುದರಲ್ಲಿ ಸಂದೇಹವಿಲ್ಲ.



2

ವಂದೆ ಸೇರಕ್ಕಿ ತರುವೆ ನಮ್ಮ ಚಂದ್ರಮ್ಮಗೆ
ವಂದೇ ಮಂಡ್ಲವ ಬರಿವೆ'

ಅಡಿಟಿಪ್ಪಣಿಗಳು

೧. **The Golden Bough; J.G. Frazer** ಪು.೪

೨. ಅದೇ ; ಪು. ೪೭೨-೪೭೩

೩. ಹಾಗಲವಾಡಿ-ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನಲ್ಲಿರುವ ಒಂದು ಊರು

೪. ಸೋಬಾನೆ ಚಿಕ್ಕಮ್ಮನ ಪದಗಳು; ಸಂ. ಎಚ್.ಎಲ್. ನಾಗೇಗೌಡ
ಮಾತಾಡು ಲಿಂಗವೆ; ಸಂ. ಚಂದ್ರಶೇಖರ ಕಂಬಾರ
ನಾಡಪದಗಳು; ಸಂ. ಮತಿಘಟ್ಟ ಕೃಷ್ಣಮೂರ್ತಿ

೫. ಸಿರಿಗಂಧ ಸೂಸ್ಯಾವೆ; ಸಂ. ಜಿ.ಎಸ್. ಭಟ್ಟ ಉಬರಡ್ಕ

ಅನುಬಂಧ

ಪೂಜೆ ಪದಗಳು

ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ಜೆಟ್ಟಿ ಅಗ್ರಹಾರ ಎಂಬ ಗ್ರಾಮದಲ್ಲಿ ಸಂಗ್ರಹಿಸಿದ ಹಾಡುಗಳು: ಹಾಡಿದವರು ನರಸಮ್ಮ/ವ. ೩೦/ ಹರಿಜನರು. ಚಿಕ್ಕಮ್ಮ/ವ. ೫೦/ಹರಿಜನರು. ರಾಮಕ್ಕ/ವ. ೧೯/ ನಾಯಕರು.

೧

ಬೆಳದಿಂಗಳ ಬೆಳಕಿನಾಗೇನಮ್ಮಣ್ಣ
ಉಳ್ಳಿಯ್ಯಾ ಸೆಲ್ಲಲೋದ್ದ ॥ ನಮ್ಮಣ್ಣ
ಉಳ್ಳಿಯ್ಯಾ ಸೆಲ್ಲಲೋದ್ದ

ಉಳ್ಳಿಯಾ ಸಾಲೆಲ್ಲ ಸರಮಲ್ಲೆ ಗೆಜ್ಜಾಗಿ
ವರಮಲ್ಲೆ ಗೆಜ್ಜಾಗಿ ॥ ನಾಯಕಾ
ನಮ್ಮಣ್ಣ ನವುಲುಬ್ಯಾಟೋಗ್ಯವ್ನೆ

ವರಗಿತ್ತಿ ಗೌರಮ್ಮ ಹವಳಾದ ಕೈಕಟ್ಟು
ಬಾರಕ್ಕ ಬೆಳದಿಂಗಳೇ
ನಮ್ಮೂರಿನಾಲಿನಂತ ಬೆಳದಿಂಗಳೇ

ಆವರೆ, ತೊಗರಿ, ಉದ್ದು-ಮುಂತಾದ ಧ್ಯಾನಗಳನ್ನು ಸೇರಿಸಿಕೊಳ್ಳಬೇಕು.

೨

ಒಂದೇ಼ ಮುತ್ತೊಂದು ಒಂದೇ ಮುತ್ತೊಂದೇರ್‍ಯಾವೇ಼ ಗೌರಿ
ಒಂದೇ ಮುತ್ತಿನ ಸಾಲೊಂದೇರ್‍ಯಾವ್ವೆ಼
ಕಲ್ಲೆಂಬ ಕಲಪತ್ತೊಂದೇರ್‍ಯಾವೇ಼ ಗೌರಿ
ಕಂಚಿ ಗುಬ್ಬಿಯ ತೇರೊಂದರುದಾವ್ವೆ಼

ಎರಡೇ ಮುತ್ತೊಂದು ಎರಡೇ ಮುತ್ತೊಂದೇರಾವೇ಼ ಗೌರಿ॥ ಮೂರೇ ಮುತ್ತೊಂದು......
ಮುಂತಾಗಿ ಐದರವರೆಗೆ ಹಾಡಬೇಕು

ಒಂದೇ ಮೂಲಿಗೊಂದೇ಼ ಪತ್ರೆ಼ ಗೌರಿ
ನಿನ್ನ ಸಾಲಮೂಲಿಗು ಬಿಲ್ಲಪತ್ರೆ಼ ॥ ಗೌರಿ
ನಿನ್ನ ಸಾಲಮೂಲಿಗು ಬಿಲ್ಲಪತ್ರೆ

ಆ ಪತ್ರೆ ಕೊಂಡೋಗಿ ಯೆಣ್ಣೇಮಜ್ಜಣಕ್ಕಾಕಿ
ಸಾಕಮ್ಮ ಶಿವನೆ ಬಂದ್ರಾ಼ ॥ ಗೌರಮ್ಮ
ನೂಕಮ್ಮ ರನ್ನದಲಿಗೆ

ಎಜ್ಜರಿ ಸಿದ್ಧ ಬಂದಾ ಗೌರಮ್ಮ ಚೆಂದದಾ ಬಟ್ಟನೀಡೇ
ಬಲಪೂಜಿ ಲಿಂಗಬಂದಾ ॥ ಗೌರಮ್ಮ
ತಿಲಕದಾ ಬಟ್ಟನೀಡೇ

೩

ಒಂದೇ ಸಿಬ್ಬುಲಾಗವ್ವ
ಕಾಽಮಣ್ಣ ಕಲಿಗೆದ್ದ
ಬೀಮಣ್ಣ ಕಲಿಗೆದ್ದ
ಜಂಬು ಜಾಲಾರಿ ಮರವ್ವೇ಼ರಿ ನೋಡೆ
ಕೊಂಬೆಲ್ಲ ಬಿಳಿಯಪ್ಪುಪ್ಪೆ
ರಂಬ್ಯೇ಼ರ ರಾಯಪವಡ್ಡ಼
ಸೀತಾಳ ದಂಡೆದ್ದು ಕೇಳಿಬಾರೋ
ಎರಡೇ ಸಿಬ್ಬುಲಾಗವ್ವ ಮುಂತಾಗಿ ಐದರವರೆಗೆ ಹಾಡಬೇಕು.

೪

ಉಯ್ಯಾಲೇ ಎಲ್ಲಿ ತೂಗೆಲ್ಲಿ ಬಿಡಲೇ
ಉಯ್ಯಾಲೇ ಎಲ್ಲಿ ತೂಗೆಲ್ಲಿ ಬಿಡಲೇ ॥ ಶಿವಗಂಗೆ
ನಲ್ಲಿಯಾ ತೋಪಿನೊಳಗೆ ॥ಪಲ್ಲವಿ॥
ನೆಲ್ಲಿಯ ಮರುದುಯ್ಯಾಲೇऽ ಅದು ನಮ್ಮ
ಅತ್ತೇऽ ಕಟ್ಟಿಸಿದುಯ್ಯಾಲೇ ॥ ಅದು ನಮ್ಮ
ಅತ್ತೇ ಕಟ್ಟಿಸಿದುಯ್ಯಾಲೇ
ಅತ್ತೆಯ ಮಗನಾದ್ರೆ ಪರದಂಡಿಗೋಗ್ಯವ್ನೆ
ಗ್ಯಾನದಿಂದಾಡುಯ್ಯಾಲೇ ॥ ಉಯ್ಯಾಲೇ
ಎಲ್ಲಿ ತೂಗೆಲ್ಲಿ ಬಿಡಲೇ

ಮಾವಿನ ಮರೆದುಯ್ಯಾಲೆ ಅದು ನಮ್ಮ
ಮಾವರು ಕಟ್ಟಿಸಿದುಯ್ಯಾಲೆ ॥ ಅದು ನಮ್ಮ
ಮಾವರು ಕಟ್ಟಿಸಿದುಯ್ಯಾಲೆ

ಮಾವನ ಮಗನಾದ್ರೆ ಪರದಂಡಿಗೋಗ್ಯವ್ನೆ
ಗ್ಯಾನದಿಂದಾಡುಯ್ಯಾಲೆऽ ॥ ಉಯ್ಯಾಲೇ
ಎಲ್ಲಿ ತೂಗೆಲ್ಲಿ ಬಿಡಲೇ

ಆಲಸಿನ ಮರದುಯ್ಯಾಲೇऽ ಅದು ನಮ್ಮ
ಅರಸರು ಕಟ್ಟಿಸಿದುಯ್ಯಾಲೇऽ ॥ ಅದು ನಮ್ಮ
ಅರಸರು ಕಟ್ಟಿಸಿದುಯ್ಯಾಲೇऽ

ಅರಸನಾ ಮಗನಾದ್ರೆ ಪರದಂಡಿಗೋಗ್ಯವ್ನೆ
ಗ್ಯಾನದಿಂದಾಡುಯ್ಯಾಲೇ ॥ ಉಯ್ಯಾಲೆ
ಎಲ್ಲಿ ತೂಗೆಲ್ಲಿ ಬಿಡಲೇ

೫

ಒಂದಾರ ಕೊಟ್ಟೇವು ಒಂದ್ಹೆಣ್ಣ ಕೊಡಿರಮ್ಮ
ಕಾವೇಟಿ ರಂಗಾಗೆ ಕಸ್ತೂರಿ ರಂಗಾಗೆ
ಸಣ್ಣ ಸರಪಣಿಮ್ಯಾಲೆ ಸವುಲನಾಕಿಸಿಕೊಂಡಪ್ಪ
ರಂಗಪ್ಪಗೊಂದ್ಹೆಣುಕೊಡಿರಮ್ಮಾ ಹೆಣ್ಣುಕೊಡಿರೇ

ಒಂದಾರ ಅಂಬೋದು ಯೇನಮ್ಮಾ ಮಗಳೀಗೆ
ಯೆತ್ತಮ್ಮ ಮಗಳೀಗೆ ಹಾಸೋದು ಆಸಣಿಗೆ
ಬೀಸೋದು ಬೀಸಣಿಗೆ ನೀರು ತರುವುದು ಗಿಂಡಿ
ನಿದ್ರೆ ಮಾಡೋದು ಮಂಚ ಚಿಟುಪಟ್ಲೆಕಾಯಿ
ಚಿನ್ನಾದ ಕೈಕಟ್ಟು ರನ್ನಾದ ಮೊಲೆಕಟ್ಟು
ಚಿಕ್ಕರಸಿ ಮನೆಯಾಗ್ಹೆಣ್ಣಲ್ಲವಮ್ಮಾ ಹೆಣ್ಣಲ್ಲವೇ

(ಎರಡಾರ ಕೊಟ್ಟೇವು ಎರಡ್ಹೆಣ್ಣ ಕೊಡಿರಮ್ಮ... ಎಡರಾಡ ಅಂಬೋದು ಯೇನಮ್ಮಾ ಮಗಳೀಗೆ ಮುಂತಾಗಿ ಐದರವರೆಗೆ ಹಾಡಬೇಕು)

೬

ಚಿನ್ನೀ ನೀವು ವಪ್ಪಿದಮೇಮೇ?
ಚಿನ್ನಕ್ಕ ನೀವು ವಪ್ಪಿದಮೇಮೇ?
ದಾದೀ ನೀವು ವಪ್ಪಿದಮೇಮೇ?
ದಾದರಮಗ್ಗಾಲೇ

ಚಿನ್ನೀ ನಾವು ವಪ್ಪಾಲೇದು
ಚಿನ್ನಕ್ಕ ನಾವು ವಪ್ಪಾಲೇದು
ದಾದೀ ನಾವು ವಪ್ಪಾಲೇದು
ದಾದರು ಮಗ್ಗಾಲೇ

ನಾಲ್ಕು ಸಲ ಪುನರಾವರ್ತಿಸಿ ಐದನೆ ಬಾರಿಗೆ ಮುಂದಿನಂತೆ

ಚಿನ್ನೀ ನೀವು ವಪ್ಪಲೆದುಗ?
ಚಿನ್ನಕ್ಕ ನೀವು ವಪ್ಪಲೆದುಗ?

ದಾದೀ ನೀವು ವಪ್ಪಲೆದುಗ?
ದಾದರ ಮಗ್ಗಾಲೇ

ಚಿನ್ನೀ ನಾವು ವ್ವಪ್ಪಿತಿವೆ
ಚಿನ್ನಕ್ಕ ನಾವು ವ್ವಪ್ಪಿತಿವೆ
ದಾದೀ ನಾವು ವ್ವಪ್ಪಿತಿವೆ
ದಾದರು ಮಗ್ಗಾಲೇ

೭

ಚಿಕ್ಕ ಚಿಕ್ಕ ಮಕ್ಕಳಿಗೇನೊಡವೆ
ಚಿತ್ತಾರ ಮಕ್ಕಳಿಗೇನೊಡವೆ?
ಸ್ವಾಮಿ ದಂಡಗೇನೊಡವೆ?
ಶ್ರೀರಾಮರ ಮಕ್ಕಳಿಗೇನೊಡವ್ವೆ?

ಚಿಕ್ಕ ಚಿಕ್ಕ ಮಕ್ಕಳಿಗ್ವಾಲೆ
ಚಿತ್ತಾರ್ರ ಮಕ್ಕಳಿಗ್ವಾಲೆ
ಸ್ವಾಮಿ ದಂಡಿಗ್ವಾಲೆ
ಶ್ರೀರಾಮರ ಮಕ್ಕಳಿಗ್ವಾಲೆ

ನಾನಾ ರೀತಿಯ ಒಡವೆಯ ಹೆಸರುಗಳನ್ನು ಸೇರಿಸಿಕೊಳ್ಳಬೇಕು.

ಚಿನ್ನೀ ನೀವೇಟ್ರೋಳ್ಳೆ?
ಚಿನ್ನಕ್ಕ ನೀವ್ವೇಟ್ರೋಳ್ಳೆ?
ದಾದೀ ನೀವ್ವೇಟ್ರೋಳ್ಳೆ
ದಾದರ ಮಗ್ಗಾಲೇ

ಚಿನ್ನೀ ನಾವು ಕ್ವಾಪೊಳ್ಳೆ
ಚಿನ್ನಕ್ಕ ನಾವು ಕ್ವಾಪೊಳ್ಳೆ
ದಾದೀ ನಾವು ಕ್ವಾಪೊಳ್ಳೆ
ದಾದರ ಮಗ್ಗಾಲೇ

ಚಿನ್ನೀಽ ನೀ ಮಡಕೆಲೇದೆ?
ಚಿನ್ನಕ್ಕ ನೀ ಮಡಕೆಲೇದೆ?
ದಾದೀ ನೀ ಮಡಕೆಲೇದೆ?
ದಾದರ ಮಗ್ಗಾಲೇ

ಚಿನ್ನೀಽ ನಾ ಮಡಕಾಲಿದಗೊ
ಚಿನ್ನಕ್ಕ ನಾ ಮಡಕಾಲಿದಗೊ
ದಾದೀಽ ನಾ ಮಡಕಾಲಿದಗೊ
ದಾದರ ಮಗ್ಗಾಲೇಽ

ಹೀಗೆ ಈ ಸರಣಿ ಮುಂದುವರಿಯುತ್ತದೆ. ಪ್ರತಿಯೊಂದು ಜಾತಿಗೂ ಪ್ರಶ್ನೋತ್ತರಗಳ ಈ ಸರಣಿ ನಾಲ್ಕು ಚರಣಗಳಲ್ಲಿರುತ್ತದೆ. ಈ ಮುಂದೆ ಉದಾಹರಣೆಗಾಗಿ ಸಂಕ್ಷಿಪ್ತಗೊಳಿಸಿ ಒಂದೊಂದು ಸಾಲನ್ನು ಕೊಡಲಾಗಿದೆ. ಈಗಾಗಲೇ ಮೇಲೆ ಸೂಚಿಸಿದಂತೆ ಒಂದೊಂದು ಸಾಲೂ ಒಂದೊಂದು ಚರಣವಾಗುತ್ತದೆ.

ಚಿನ್ನೀಽ ನೀವೇಟ್ರೊಳ್ಳೆ?
ಚಿನ್ನೀ ನಾವು ಲಿಂಗಾಯತ್ರೆ
ಚಿನ್ನೀ ನಿಮ್ಮ ಲಿಂಗಾಲೇದೇ?
ಚಿನ್ನೀಽ ನಮ್ಮ ಲಿಂಗಾಲಿದಗೊ

ಚಿನ್ನೀಽ ನೀವೇಟ್ರೋಳ್ಳೆ?
ಚಿನ್ನೀಽ ನಾವು ಜ್ಯೆಟ್ರೋರೇ
ಚಿನ್ನೀಽ ನಿಮ್ಮ ಜನಿವಾರೇದೇ?
ಚಿನ್ನೀಽ ನಮ್ಮ ಜನಿವಾರಲಿದಗೊ

ಚಿನ್ನೀಽ ನೀವೇಟ್ರೊಳ್ಳೆ?
ಚಿನ್ನೀಽ ನಾವು ಮ್ಯಾದಗೊಳ್ಳೆ
ಚಿನ್ನೀಽ ನಿಮ್ಮ ತಬಟಲೇದೇ?
ಚಿನ್ನೀಽ ನಮ್ಮ ತಬಟಲಿದಗೊ

ಚಿನ್ನೀಽ ನೀವೇಟ್ರೋಳ್ಳೆ?
ಚಿನ್ನೀಽ ನಾವು ಮ್ಯಽಡಿವಾಳ್ರು
ಚಿನ್ನೀ ನಿಮ್ಮ ವುಬ್ಬೇಲೇದೇ?
ಚಿನ್ನೀ ನಾ ವುಬ್ಬಾಲಿದಗೊ

ಚಿನ್ನೀಽ ನೀವೇಟ್ರೋಳ್ಳೆ?
ಚಿನ್ನೀಽ ನಾವು ಬ್ರ್ಯಾಂಬ್ರೋರೆ
ಚಿನ್ನೀಽ ನಿಮ್ಮ ಓಮಾಲೇದೇ?
ಚಿನ್ನೀಽ ನಮ್ಮ ಓಮಾಲಿದಗೊ

ಚಿನ್ನೀಽ ನೀವೇಟ್ರೋಳ್ಳೆ?
ಚಿನ್ನೀಽ ನಾವು ಶಿಳ್ಳೇಕ್ಯಾತರು
ಚಿನ್ನೀಽ ನಿಮ್ಮ ಬೊಂಬಾಲೇದೆ?
ಚಿನ್ನೀಽ ನಮ್ಮ ಬೊಂಬಾಲಿದಗೊ

ಚಿನ್ನೀಽ ನೀವೇಟ್ರೋಳ್ಳೆ?
ಚಿನ್ನೀಽ ನಾವು ಅರಸುಮಕ್ಕಳೇ
ಚಿನ್ನೀಽ ನಿಮ್ಮ ಪೇಟಾಲೇದೇ?
ಚಿನ್ನೀಽ ನಮ್ಮ ಪೇಟಾಲಿದಗೊ

೮

ಸ್ಯಾವೆ ಅಕ್ಕಿ ಸಣ್ಣ ಽ
ಬಾರೆನಕ್ಕಿ ಬಣ್ಣ ಽ
ಅಗ್ರ್ಯಾಽರದ ಬಣ್ಣ
ತಂದೀವಲ್ಲೆ ಬೀಗತಿ

ಅದು ಬಲು ಸಣ್ಣ
ಅದು ಬಲು ದರುಗ
ಅದು ನಮ್ಮ ಯೆಣ್ಣಿಗೆಽ
ಒಪ್ಪಿಗಿಲ್ಲ ಬೀಗತಿ

೯

ನಿಂಬೇ ವಣಗೀತ್ತೋ಼ ಮಗನೆ
ನಿಂಬಿಗು ನೀರೆತ್ತೋ

ಜೋಡು ಬಿಂದಿಗೋ಼ ಮಗನೆ
ಕಲಕಲ ದಂಡಿಗೋ಼
ದಂಡಿಗು ಸಮರಂತ಼ ನೀನು
ಯೆಂದಿಗು ಬರತೀಯೋ಼
ತುರಾಯಿ ಮುಡಿವಾಗ಼
ರಾಮರು ಕೈ ಚೆಂಡಾಡುವಾಗ
ಸೀತೇ ಬರುತ್ತಾ಼ಳೇ
ಸೀತೆ ಜತೆಯಲಿ ಬರುತೀನಿ

'ಬಾಳೇ ವಣಗೀತೋ ಮಗನೆ- ಬಾಳಿಗು ನೀರೆತ್ತೋ ಹಾಗೂ ದ್ರಾಕ್ಷೀ ವಣಗೀತೋಽ ಮಗನೆ, ದ್ರಾಕ್ಷಿಗು ನೀರೆತ್ತೋ ಎಂದು ಹಲವು ಹಣ್ಣು ಹೂವಿನ ಗಿಡಮರಗಳ ಹೆಸರುಗಳನ್ನು ಪಲ್ಲವಿಯಲ್ಲಿ ಸೇರಿಸಿಕೊಂಡು ಇಡೀ ಹಾಡನ್ನು ಪುನರಾವರ್ತಿಸುತ್ತಾರೆ.

೧೦

ವಂದೇ ಸೇರಕ್ಕಿ ತರುವ್ಹೆ಼
ವಂದೇ ಮಂಡ್ಲಾವ ಬರಿವೆ
ನಾನ್ಹು಼ ನಮ್ಮ ಶ್ರೀಗೌರಿ
ಅರಮ್ಹಾ಼ನೇಗಟ್ಟುಂಡು
ಮಟಕೆ ಬಾಗಾಣ ಕೊಡುವ್ಹೆ಼

ಎರಡೇ ಸೇರಿಕ್ಕಿ ಮೂರೇ ಸೇರಕ್ಕಿ ಮುಂತಾಗಿ ಐದವರೆಗೆ ಹೇಳಬೇಕು

ಮಂಗಳ :

ಜಯ ಜಯ ಮಂಗಾಳವಾಗೀದೆ
ಶಿವ ಶಿವ ಮಂಗಾಳವಾಗೀದೆ
ಹರ ಹರ ಮಂಗಾಳವಾಗೀದೆ ||ಪ||

ತಿಂಗಳಾ ಕೊನೆಯಲ್ಲಿ ಮಂಗಾಳವಾಗೀದೆ
ತಿಂಗಳ ಬೆಳಕಿನ ತಿಳಿರಸವುಕ್ಕುತ
ಕಂಗಳ ಕೊನೆಯೊಳು ತಳತಳ ಹೊಳೆಯುವ

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಶಿವಪುರ ಗ್ರಾಮದಲ್ಲಿ ಸಂಗ್ರಹಿಸಿದ ಹಾಡುಗಳು: ಹಾಡಿದವರು ಹನುಮಕ್ಕ/ವ. ೭೦/ಹರಿಜನರು.

ಕೋಲು ಮಲ್ಲಿಗೆ ಕೋಲೆ
ಕೋಲು ಸಂಪಿಗೆ ಕೋಲೆ

ತಿಂಗು ತಿಂಗುಳಿಗೂ ತಿಂಗಳು ಮಾವನ ಪೂಜೆ
ಗರುಡನಾ ಪೂಜೆ ಗನಪೂಜೆ ॥ ಈ ಊರ
ಮಲ್ಲಯ್ನ್ಗ ಪೂಜೆ ಸ್ವಾಮಾರ

ಸೂರ್ಯದೇವನ ನಾರಿ ಮೈನೆರುದಾರೆ
ಜಾಜೀಯವ್ಹೂವೆ ಆದಿನಾರು ॥ ಮಾಲೆಕಟ್ಟಿ
ಅಂದ ಅಂಗುಳುದಾಗೆ ಮೆರಣೀಗೆ

ಸೂರ್ಯಗೆ ಗುಡಿಕಟ್ಟಿ ಮ್ಯಾಗೆ ಬಾವಿ ತೋಡಿ
ಮ್ಯಾಲೆ ಚಪ್ಪುರದ ಮರಮಾಡಿ ॥ ಮಲ್ಲಯ್ನ
ಪಾದಕಗ್ಗುಣಿಯ ಯಿಡುದೇವು

೧೧

ಸಾಲ ಮೂಲಿಗೂ ಸಾಲಪತ್ತುರೆ ಗೌರಾಜಿ
ಮೂಲ ಮೂಲಿಗೂ ಬಿಲ್ಲಪತುರೆ ॥ ಆ ಪತ್ರೆ
ಕೊಂಡ್ಹೋಗಿ ಯಣ್ಣೆ ಮಜ್ಜುಣಕ್ಹಾಕಿ

ಬಾರಕ್ಕ ಬೆಳದಿಂಗಳೇ
ನನ್ನೂರಿನಾಲಿನಂತ ಬೆಳದಿಂಗಳೇ

೧೨

ಒಂದೇ ಸುತ್ತಿನ ಕ್ವಾಟ್ಕೆ ಗೌರಿ
ಒಂದೇ ಚೆಂದದ ಬಸುವ

ಬಾರನುಮ್ಮ ಬವು ಚದುರ
ನಿನ್ನ ಬಲಾಬುಜದಮ್ಯಾಲೆ ಸಣ್ಣನಾಮ

ಸಣ್ಣನಾಮ ಕೊಂದೋರ್‍ಯಾರೆ ಹೋಳಿಯಾಗೆ
ನಾವು ಬಂದು ಬ್ಯಾಟೆನಾಡಲಿಲ್ಲ ಬಯಲಾಗೆ

ಎರಡೇ ಸುತ್ತಿನ ಕ್ವಾಟೆ... ಮುಂತಾಗಿ ಐದರವರೆಗೆ ಹಾಡಬೇಕು

೧೩

ಚಿನ್ನೀ ನಿಮ್ಮ ಕುಲವೇಳೇ?
ಚಿಲುಕ ನಿಮ್ಮ ಕುಲವೇಳೇ?
ಜಾಜೀ ನಿಮ್ಮ ಕುಲವೇಳೇ?
ಜಾಜಲ್ಲಾಪುರವೆ

ಚಿನ್ನೀ ನಾವು ಆರುವರು
ಚಿಲುಕ ನಾವು ಆರುವರು
ಜಾಜೀ ನಾವು ಆರುವರು
ಜಾಜಲ್ಲಾಪುರವೆ

ಕ್ವಾಮಟಗರು, ಬಣಜಿಗರು, ಒಕ್ಕಲಿಗರು-ಮುಂತಾದ
ಜಾತಿಗಳ ಹೆಸರುಗಳನ್ನು ಸೇರಿಸಿಕೊಂಡು ಪುನರಾವರ್ತಿಸುತ್ತಾರೆ

೧೪

ತುಂಕೂರು ಬಣ್ಣ
ತಂದೀವೇ ಬೀಗತಿ
ಅದು ನಿಮ್ಮೆಣ್ಣಿಗೆ
ವಪ್ಪಿಗೇನ್ ಬೀಗ್ತಿ?
ವಪ್ಪಿಗೇನ್ ಬೀಗ್ತಿ?

ತುಂಕೂರು ಬಣ್ಣ
ಅದು ಬವು ಸಣ್ಣ

ಅದು ಬವು ದರುಗ
ಅದು ನಮ್ಮೆಣ್ಣಗೆ
ವಪ್ಪಿಗಿಲ್ಲ ಬೀಗ್ತಿ
ವಪ್ಪಿಗಿಲ್ಲ ಬೀಗ್ತಿ

ಮೈಸೂರು, ಬೆಂಗ್ಳೂರು, ಬೊಂಬಾಯಿ ಹಾಗೂ ತಮ್ಮ ಊರಿನ ಸುತ್ತಮುತ್ತಲ ಪ್ರಸಿದ್ಧ ಊರು, ಪಟ್ಟಣಗಳನ್ನು ಸೇರಿಸಿಕೊಂಡು ಹಾಡುತ್ತಾರೆ. ಯಾವುದೋ ಒಂದು ಹಂತದಲ್ಲಿ ಒಪ್ಪಿಕೊಳ್ಳುವಾಗ- 'ವಪ್ಪಿಗೆಕಣೆ ಬೀಗ್ತಿ'- ಎಂದು ಬಣ್ಣ ಕೇಳುವ ಹಾಡುಗಳನ್ನು ಮುಕ್ತಾಯಗೊಳಿಸುತ್ತಾರೆ.

ಸ್ವಾಮಿ ದಂಡಿಗೇನೊಡವೆ?
ಶ್ರೀರಾಮರ ಮಕ್ಕಳಿಗೇನೊಡವೆ?
ಗುಜ್ಜ ಗುಜ್ಜಾರ್‍ರಗೇನೊಡವೆ?
ಗುಜ್ಜಾರ ಮಕ್ಕಳಿಗೇನೊಡವೆ?

ಸ್ವಾಮಿ ದಂಡಿಗಡ್ಕೆ
ಶ್ರೀರಾಮರ ಮಕ್ಕಳಿಗಡ್ಕೆ
ಗುಜ್ಜ ಗುಜ್ಜಾರಗಡ್ಗೆ
ಗುಜ್ಜಾರ ಮಕ್ಕಳಿಗಡ್ಕೆ

ನಾಗರು, ವಾಲೆ, ಬಿಲ್ಲೆ, ಕಾಪು-ಮುಂತಾದ ವಡವೆಗಳನ್ನೂ ಸೇರಿಸಿಕೊಂಡು ಹಾಡುತ್ತಾರೆ

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು ಹಾಗಲವಾಡಿ ಗ್ರಾಮದ ಜುಂಜಪ್ಪನ ಹಟ್ಟಿಯಲ್ಲಿ ಸಂಗ್ರಹಿಸಲಾದ ಗೀತೆಗಳು : ಹಾಡುಗಾರ್ತಿಯರು ಕೆಂಚಮ್ಮ/ವ. ೪೫. ದೊಡ್ಡಕ್ಕ/ವ. ೫೨. ಚಿಕ್ಕಮ್ಮ/ವ. ೪೦. ಮಲ್ಲಮ್ಮ/ವ.೫೫. ಹಿಮ್ಮೇಳ: ಲಲಿತಮ್ಮ/ವ.೧೩. ಎರ್ರಮ್ಮ/ವ. ೧೪. ಎಲ್ಲರೂ ಗೊಲ್ಲರು.

ಬಾರಪ್ಪ ಬೆಳದಿಂಗಳೇ
ನನ್ನೂರ ಆಲಿನಂತ ಬೆಳದಿಂಗಳೇ
ವಂದೇ ಪಂಜಿಗೆ ವಂದೇ ಬತ್ತಿನ್ಹಾಕಿ
ವಂದೇ ಪಾವೆಣ್ಣೆ ಅಳೆದೊಯ್ದು ॥ ಬೆಳದಿಂಗ್ಳಪ್ಪ
ವಂದೇ ಪಂಜಿಲಿ ಗುಡಿದುಂಬೋ

ಎರಡೇ ಪಂಜಿಗೆ..... ಮೂರೇ ಪಂಜಿಗೆ ಮುಂತಾಗಿ ಐದರವರೆಗೆ ಹಾಡುತ್ತಾರೆ

ಸೂರ್ಯಗೆ ಗುಡಿಕಟ್ಟಿ ಮುಂದೆ ಬಾವಿ ತೋಡಿ
ಮುಂದಿದ್ದ ಕಲ್ಲಾ ಮರೆಮಾಡಿ ॥ ಬೆಳದಿಂಗ್ಳಪ್ಪ
ವಂದೇ ಪಂಜಲಿ ಗುಡಿದುಂಬೋ

ಸೂರ್ಯಗೆ ಗುಡಿಕಟ್ಟಿ ಮ್ಯಾಲೆ ಬಾವಿತೋಡಿ
ಮ್ಯಾಲಿದ್ದ ಕಲ್ಲಾ ಮರಿಮಾಡಿ ॥ ಮಲ್ಲಯ್ಗೆ
ಲಿಂಗಕಾಗ್ಗುಣಿಯ ಕೊಡು ಬನ್ನಿ

ತಿಂಗಳು ಮಾವನ ತಂಗಿ ಮೈನೆರುದಾರೆ
ವಂಬತ್ತು ವುಂಡೆ ಕೊಪ್ಪರೀ್ಯ
ವಂಬತ್ತೇ ವುಂಡೆ ಕೊಪ್ಪರೀ್ಯ ಬಾಗ್ಯದಣ್ಣ
ತಂದಾನೆ ಗೊಲ್ಲ ಬಲುರಾಮ

ತಿಂಗಳು ಮಾವನ ನಾರೇ ಮೈನೆರುದಾರೆ
ನಲವತ್ತು ವುಂಡೆ ಕೊಪರೀಯ
ವಂಬತ್ತೇ ವುಂಡೆ ಕೂಪಸೀಯ ಬಾಗ್ಯದಣ್ಣ
ವಾಡಾದು ಗೊಲ್ಲ ಬಲುರಾಮ

೧೫

ಒಂದೇ ಸುತ್ತಿನ ಬಾವಿನಾರೂ ಸೇದಿರ್‍ಮ್ಮ
ನಾವು ಚೆನ್ನಪ್ಪಸೆಟ್ಟಿ ಚೆಲುವನಮಗ್ಳ ಬಿಡಲಾರೋ

ಒಂದೇ ಸುತ್ತಿನ ಬಾವಿನಾದ್ರೂ ಸೇದಲಾರೋ
ನಾವು ಚೆನ್ನಪ್ಪಸೆಟ್ಟಿ ಚೆಲುವನಮಗ್ಳ ಕೊಡಲಾರೋ

ಎರಡೇ ಸುತ್ತಿನ, ಮೂರೇ ಸುತ್ತಿನ ಮುಂತಾಗಿ ಐದರವರೆಗೆ ಹಾಡುತ್ತಾರೆ.

ಗುಂಡು ನಮ್ಮ ಮಗಳಿಗೆ
ಕುಂಬಾನಕ್ಕಿ ತಾಯ್‌ಮಾರ್
ಸೂಳೇರಾಡೋ ಸುಪ್ಪತ್ಗೆ
ನಾರೇರಾಡೋ ಮಲ್ಲೀಗೆ

ತುಂಬಿದು ಗುಂಡಿ ತುಳುಕದಿದ್ದರೆ
ತುಂಬಿಕ್ಕೊಡತ್ತಿಗೆ
ಯೆಣ್ಣಕ್ಕೊಡತ್ತಿಗೆ
ಯೆಣ್ಣಕ್ಕೊಡತ್ತಿಗೆ

೧೬

ತೊಗರಿ ತೊಗರಿ ಗೊಲ್ಲಾರಮ್ಮ
ಬಾಗಿಲಿಗಾನಾರದ್ದಾರಮ್ಮಾ
ರಾಮನಪೇಟೆನಾಳೇರಮ್ಮ
ಲಕ್ಷಂಪೇಟೆನಾಡ್ಯಾರಮ್ಮ
ಕಣ್ಣಾಗುಳ ಮರುಳುಗ್ಯಾರ್‍ರ್‍
ಇವನೆಂತೆ ಚಂದ್ರಮ್ಮನ ಸೂಳೆಗಾರ

ಚೆಂಡಾಟ:

ಚೆಂಡನಾಡೊ ಶ್ರೀಪತಿ
ಚೆಂಡನಾಡೊ ಶ್ರೀಪತಿ
ಇಂದಿರೆಗೆ ಬೂಪತಿ ||ಪ||

ದುಂಡು ಮಲ್ಲಿಗೆ ಸುತ್ತುತ
ಪನ್ನೀರಾಗೇ ಯೆಜ್ಜುತ
ಚೆಂಡ ಬೀಸಿ ಯೆಸೆಯುತ

ರಾಮ ರಾಮನೆ ನೋಡುತ
ಚೆಂಡ ಬೀಸಿ ಬೀಸಿ ಎಸೆಯತ
ಅರಳು ಮಲ್ಲಿಗೆ ಸುತ್ತುತ
ಪನ್ನೀರಾಗೇ ಯೆಜ್ಜುತ
ಚೆಂಡ ಬೀಸಿ ಎಸೆಯುತ

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು ಹಾಗಲವಾಡಿ: ಗ್ರಾಮದಲ್ಲಿ ಸಂಗ್ರಹ ಮಾಡಿದ ಗೀತೆಗಳು : ಹಾಡುಗಾರ್ತಿಯರು; ಮುದ್ದಮ್ಮ/ವ. ೩೮. ರೇವಕ್ಕ/ವ. ೪೦. ವಕ್ಕಲಿಗರು.

ಕೋಲು ಮಲ್ಲೀಗೆ ಕೋಲೇಽ
ಕೋಲು ಸಂಽಪೀಗೆ ಕೋಲೇಽ

ದೊಡ್ಡೋರಾಕಿದ ಗುಡ್ಡೇ ಸಗಣಿಮ್ಯಾಲೆ
ಎದ್ದು ಮೂಡ್ಯವನೆ ಬೆನುವಣ್ಣ
ಎದ್ದು ಮೂಡ್ಯವನೆ ಬೆನುವಣ್ಣಾಗುಲವಾಡಿ
ಹೆಬ್ಬಾಗಲಾಗೇ ನಿಲಿಸಿಕೊಂಡ

ತಿಂಗಳುಮಾವನ ತಂಗೇರು ನಾಲ್ವರು ಮಂದಿ
ಬಂಗಾರದವರು ಬಳೆಯೋರುಽ
ಬಂಗಾರದವರು ಬಳೆಯೋರ್ ತಿಂಗಳ ಮಾವ
ತಂಗಿನಕಾಯಿ ಬರಬೇಕ್ಽ
ತಂಗಿನಕಾಯಿ ಬರಬೇಕು ತಿಂಗಳ ಮಾವ
ಪಂಜರಮ್ಮನ ಮಡಿಲೀಗೆ.

ತಿಂಗಳುಮಾವನ ಚೆಂದದಿ ನೀ ಪೂಜೋಽ
ಮುಂದಿದ್ದಾ ಕಲ್ಲ ಮರಿಮಾಡೀ ॥ ತಿಂಗಳಮಾವ
ಲಿಂಗಕಗ್ಗುಣಿಯಾ ಕೊಡುತ್ತಿದ್ದಾ ॥ ಅಲ್ಲೊಬ್ಬ
ರೆಂಬೆನಾಕಂಡು ಮನೆಮರತಾ

ವಂದೇ ಚಿಬ್ಲಾಗೆ ವಂದಚ್ಚು ಬೆಲ್ಲಾನಿಟ್ಟು
ವಂದೆಲೇ ಮಾವ ಚಿಗುರೆಲೆ ॥ ತಿಂಗಳುಮಾವ
ವಂದೇ ಪಂಜಾಗೆ ಹೊರಹೊರಡೋ

ಎರಡೇ ಚಿಬ್ಲಾಗೆ, ಮೂರೇ ಚಿಬ್ಲಾಗೆ ಮುಂತಾಗಿ ಐದರವರೆಗೆ ಹಾಡಬೇಕು

ಹೊಳಿಯ ದಡುದಾಗೆ ಎಳಿಯ ತಿಂಗಳುಮಾವ
ಅಣ್ಣ ಬಾ ನಿನಗೆ ಮದುವಿಲ್ಲ ॥ ತಿಂಗಳುಮಾವ
ಚೆಲುವ ಬಾ ನಿನಗೆ ಮದುವಿಲ್ಲ

ವಂದೇ ಮೂಲಿಗೊಂದು ಪತ್ತಾರೇ ಗೌರಾಜಿ
ಸಾಲು ಮೂಲೀಗೂ ಶಿವ ಪತ್ತುರೆ
ಆ ಪತ್ರೆ ಕೊಂಡೋಗಿ ಯೆಣ್ಣೆಮಜ್ಜುಣಕ್ಹಾಕಿ
ಲೋಭಿ ಮುಟ್ಯಾವಂದು ಲಂಚ ಯೇರ್‍ಯಾವಂದು
ಯೇಳೇ ಗೌರಾಜಿ ಶಿವ್‌ಕರಿಯ ಬಂದ

ಯೇಳೇಳು ಅಂದಾರೆ ನಾವೇನ ಯೇ್ಳಳಲಿ
ಅಡಿಯಲು ಅಂದುಣವಿಲ್ಲ ಮ್ಯಾಲೆ ಚತ್ತಿರಿಯಿಲ್ಲ
ಬ್ಯಾಸೀಗೇ ಬಿಸುಲೋಳು ಸಾಕಪ್ಪ ಶಿವನೇ
ಬೋರು ಬೋರಂಬೋ ಮರನೆ

ಎರಡೇ ಮೂಲಿಗೆರಡು ಪತ್ತಾರೆ, ಮೂರೇ ಮೂಲಿಗು ಮೂರು ಪತ್ತಾರೆ ಮುಂತಾಗಿ ಐದರವರೆಗೆ ಹಾಡಬೇಕು

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕು ಗುಡ್ಡೇನ ಹಳ್ಳಿ ಗ್ರಾಮದಲ್ಲಿ ಸಂಗ್ರಹಿಸಲಾದ ಹಾಡುಗಳು: ಹಾಡುಗಾರ್ತಿಯರು: ಗುಡ್ಡೇನಹಳ್ಳಿ : ಸಣ್ಣಮುದ್ದಕ್ಕ/ವ. ೩೫/ವಕ್ಕಲಿಗರು. ಚಿತ್ರದೇವರ ಹಟ್ಟಿ ಚಿಕ್ಕಮ್ಮ/ವ. ೩೦/ಗೊಲ್ಲರು.

ವಂದೆ ಬೆಟ್ಟಕ್ಹೋಗಿ ನಮ್ಮಣ್ಣ
ವಂದೆ ಬಿದುರು ತಂದು ನಮ್ಮಣ್ಣ
ವಂದೆ ಬಿದುರ್ ತಂದು
ಬೀಮನ್ಯಾರೇ್ ತಡದ್ಯಾನ್ಸು
ಕಾಮನ್ಯಾರೇ್ ತಡದಾನ್ಸು

ಬಾಲರುಳ್ಳೋರಟ್ಟೀ ಮುಂದ್ಕೆ
ಬಾಲರುಳ್ಳೋರಟ್ಟೀ ಮುಂದ್ಕೆ
ಬಾಗಿತಮ್ಮ ಬೆಳದಿಂಗ್ಳು
ಕಂದರುಳ್ಳೋರಟ್ಟೀಮುಂದೆ
ಕುಂದಿತಮ್ಮ ಬೆಳದಿಂಗ್ಳು

ಎರಡೇ ಬೆಟ್ಟಕ್ಹೋಗಿ, ಮೂರೇ ಬೈಕ್ಹೋಗಿ ಮುಂತಾಗಿ ಐದರವರೆಗೆ ಹಾಡಬೇಕು

ವಂದೇ ಸೇರಕ್ಕಿ ತ್ಕರುವ್ಕೆ ನಮ್ಮ ಚೆಂದ್ರಮ್ಮಗೆ
ವಂದೇ ಮಂಡ್ಲವ ಬರೀವೆ ನಮ್ಮ ಚೆಂದ್ರಮ್ಮಗೆ
ವಂದೇ ಮಂಡ್ಲವ ಬರಿವೆ ನಾನೂ ನಮ್ಮ ಚೆಂದ್ರಮ್ಮ
ನೆರಮನೇಗಟ್ಟುಂಡು ಮಟುಗೆ ಬಾಗಾಣಕೊಡಿವೆ

ಎರಡೇ ಸೇರಕ್ಕಿ, ಮೂರೇ ಸೇರಕ್ಕಿ ಮುಂತಾಗಿ ಐದರವರೆಗೆ ಹಾಡಬೇಕು

ವಂದೆ ಮೂಲಿಗೊಂದೆ ಪತ್ರೆ ಗೌರಜಿ ನಿನ್ನ
ಸಾಲ ಮೂಲಿಗು ಬಿಲ್ಲಪತ್ರೆ ಗೌರಜಿ ನಿನ್ನ
ಸಾಲ ಮೂಲಿಗು ಬಿಲ್ಲಪತ್ರೆ ಗೌರಜಿ
ಆ ಪತ್ರೆ ತ್ಕಗಂಡು ಯೆಣ್ಣೆ ಮಜ್ಜಣಕ್ಹಾಕಿ

ಓಗೇ ಗೌರಾಜಿ ಗಂಡ್ಯಾನ ಮನಿಗೆ
ಬಾರೇ ಗೌರಾಜಿ ಗಂಡ್ಯಾನ ಮನಿಗೆ

ಓಗೋದು ಅಂದಾರೆ ನಾನೇನು ಓಗೇನು
ಯೇರಲಂದುವಿಲ್ಲ ಮ್ಯಾಲೆ ಚತ್ತಿರಿಯಿಲ್ಲ
ಸಾಕೆನ್ನೆ ಸಕಿಯೇ ಬೂರುಗದ ಮರವೆ

ಹಸೆ ಹಚ್ಚುವುದು :

ಬಾರೋ ಮಾರುದ್ದ ವೊತ್ತಿಗೆ ತಗಂಡು
ಯೆತ್ತ್ವಾವೆ ಯಿದುರ ಮೊದಲಿಂದ ॥ ಸರಸತಿಯೆ
ಬರೊದ ಪದನ ಬರಕೊಡೆ

ಬರ್ದ್ಯೊದ ಪದನ ವೊತ್ತಿಗೆ ಮ್ಯಾಲೈದಾವೆ
ವೊತ್ತಿಗೆ ತ್ಯತ್ತಾರೋ ಬೆನವಣ್ಣಾ ॥ ನಮ್ಮಿಬ್ಬುರಿಗೆ
ಬರೊದ ಪದನ ಬರಕೊಡೋ

ಮಾರುದ್ದ್ಯ ವಾಲೇಯ ತಗಂಡು
ಓದ್ಯೊವೆ ಯಿದುರ ಮೊದಲಿಂದ ॥ ಸರಸತಿಯೆ

ತಪ್ಪಿದ್ದಾ ಪದುನ ಬರಕೊಡೆ
ತಪ್ಪಿದ್ದಾ ಪದವ ವೊತ್ತಿಗೇಮ್ಯಾಲೈದಾವೆ
ವೊತ್ತಿಗೆ ತತ್ತಾರೊ ಬೆನವಣ್ಣ ॥ ನಮ್ಮಿಬ್ಬುರಿಗೆ
ತಪ್ಪಿದಾ ಪದನ ಬರಕೊಡೋ ॥ ವಾಲೆಮ್ಯಾಲೈದಾವೆ
ವಾಲ್ಯೇ ತತ್ತಾರೊ ಬೆನವಣ್ಣ

ಅಕ್ಕಕ್ಕಿ ಬಾಲಕ್ಕಿ ಪುಟ್ಟರಾಜಣದಕ್ಕಿ
ನಿಟ್ಟೂರು ಬಯಲಾಗೆ ಬೆಳದಕ್ಕಿ
ನಿಟ್ಟೂರು ಬಯಲಾಗೆ ಬೆಳದಂತ ನೆಲ್ಲಕ್ಕಿ
ಪುತ್ರಯ್ಯನಸಿಗೆ ಬರಬೇಕು

ಆಲಕ್ಕಿ ಬಾಲಕ್ಕಿ ಬಾಲರಾಜುಣದಕ್ಕಿ
ಬಾಗೂರು ಬಯಲಾಗೆ ಬೆಳದಕ್ಕಿ
ಬಾಗೂರು ಬಯಲಾಗೆ ಬೆಳದಂತ ನೆಲ್ಲಕ್ಕಿ
ಬಾಲಯ್ಯನಸಿಗೆ ಬರಬೇಕು

ವಂದ ಬರೆಯಂದ್ರೆ ವಂಬತ್ತು ಬರುದಾನೆ
ವಂಬತ್ತು ದಿನವೆ ಪಡನೂಡಿ ॥ ಅಸಿಯಮ್ಯಾಲೆ
ಬಾಸಿಂಗನ್ಯಾರೇ ಬರದಾರು

ಕಡಲೆಕಾಳಂಗೆ ಕಡುದಾರೆ ಹಸೆಗಳಾ
ಕಡಿಜಾಣೆ ಅವ್ರ ಹಿರಿಯವ್ವ ॥ ಕೂತಗಂಡು
ತಗಂಡುವೂವ ಅರಡಾಳೆ ಅವ್ರೆಡಾಬಲಕೆ

ನನ್ನ ಮುದ್ದು ರಾಣಿ ಕಂದ
ಯೆಜ್ಜೆಜ್ಜಿಗು ಶಿವನ ನೆನಸುತ ॥ ರಾಣಿ ಕಂದ
ನೆಡದೇ ಬಾರಸೆಯನೆಡವಾಕೆ

ನಡದು ಬಾ ನಿನ್ನ ನೆಡಿಗೆನಂದವಂದು
ನೆಡಿನೆಡಿಗೂ ಶಿವನ ನೆನಸುತ ॥ ರಾಣಿ ಕಂದ
ನೆಡದೇ ಬಾರಸೆಯನೆಡವಾಕೆ

ವುದ್ದಿನಕಾಳಂಗೆ ತಿದ್ದಾರೆ ಹಸೆಗಳಾ
ಬುದ್ಧಿವಂತೆ ಅವರ ಹಿರಿಯಕ್ಕ ॥ ಕೂತಗಂಡು
ವುಗ್ಗಾನರುಡ್ಯಾಳೆ ಅವ್ನ ಯೆಡಬಲುಕೆ

ಗಂಗಮ್ಮನ ಪೂಜೆ:

ಬಾಳೆಯ ವನಕೆ ವೋದರು ಮುತ್ತೈದೇರು
ಬಾಳೆಯ ವೂವ ಗುಡಿಸ್ಯಾರೆ
ಬಾಳೆಯವೂವ ಗುಡಿಸಿ ಗುಡ್ಡೇಮಾಡಿ
ಬಾವುಸಿ ಗಂಗಮ್ಮನ ಕರುದಾರೆ

ನಿಂಬೆಯ ವನಕೆ ವೋದರು ಮುತ್ತೈದೇರು
ನಿಂಬೆಯ ವೂವ ಗುಡಿಸ್ಯಾರೆ
ನಿಂಬೆಯ ವೂವ ಗುಡಿಸಿ ಗುಡ್ಡೇಮಾಡಿ
ನಂಬುಸಿ ಗಂಗಮ್ಮನ ಕರುದಾರೆ

ಅಂಬಾರದ ಶಿವನೆ ರಂಬೆ ಮೇಲಿರುವೊಳೆ
ಅಂಗಂದಾರೆ ಮುಸಗ ತಗಿಯೋಳೆ
ಆಗಂದಾರೆ ಮುಸುಗ ತೆಗೆಯೋ ಶ್ರೀಗಂಗೆ
ಬೇಕಾದರ್ಹೋಗಿ ಕರತನ್ನಿ

ಅರಸಳ್ಳಾದಾಗೆ ಉಳ್ಳುಳ್ಳಿ ಅರಿಯೋಳೆ
ಚಿನ್ನಾವೊಳುದಂಗೆ ವೊಳೆಯೋಳೆ
ಚಿನ್ನಾವೊಳುದಂಗೆ ವೊಳೆಯೋಳೆ ಶ್ರೀ ಗಂಗೆಯ
ಬೇಕಾದರ್ಹೋಗಿ ಕರೆತನ್ನಿ

ಸುತ್ತಳ್ಳಾದಾಗೆ ಸ್ಯತಿಸುತಿ ಅರಿಯೋಳೆ
ಸುಕ್ಕವೊಳದಂಗೆ ವೊಳಿಯೋಳೆ
ಸುಕ್ಕವೊಳುದಂಗೆ ವೊಳೆಯೋ ಶ್ರೀಗಂಗೆಯ
ಬೇಕಾದರ್ಹೋಗಿ ಕರೆತನ್ನಿ

ವಂದೆಲೆ ವಂದಡಿಕೆ ವಂದೇ ಗಂದಾದುಂಡೆ
ಬಂದುವೆಮ್ಮ ಗಂಗಮ್ಮಗಾಗಿ
ಬಂದುವೆಮ್ಮ ಗಂಗಮ್ಮ ನಿಮಸ್ಯಾವೆಗಾಗಿ
ತುಂಬ್ಕಿಕೊಡಮ್ಮ ಕೊಡಗಳ್ನಾ

ಎರಡೆಲೆ ಎರಡಡಿಕೆ, ಮೂರಲೆ ಮೂರಡಿಕೆ ಮುಂತಾಗಿ ಹೇಳುತ್ತಾರೆ.

ಬಾಳೆಯ ಅಣ್ಣಂಗೆ ಬಾಗಿ ಬಂದಳು ಗಂಗೆ
ಬಾಲಾನ ಮಗುನ ಬೆಳಸಾಕೆ ॥ ಅಗ್ಗುಣಿಕೊಟ್ಟು
ಬಾಳೇ ವತ್ತಲಿಸಿ ನಿಲಲಂದು

ನಿಂಬೆ ಅಣ್ಣನಂಗೆ ವುಲ್ಡಿಬಂದಳು ಗಂಗೆ
ಪುತ್ರಾನ ಮಗುನ ಬೆಳಸಾಕೆ ॥ ಅಗ್ಗುಣಿಕೊಟ್ಟು
ನಿಂಬೇ ವತ್ತಲಿಸಿ ನಿಲಲಂದು

ಆರಾರ ಕೊಟ್ಟು ತಗಸ್ಯಾರೆ ಕಲ್ಲಾಬಾವಿ
ವೂವಿನ ಸೋಪಾನಡಿಗಲ್ಲು ॥ ಬಾವ್ಯಾಗೆ
ರೂಡಿಗೀಸ್ವರನ ಮಡುದೇರು ॥ ಗಂಗಮ್ಮ ತಾಯಿ
ದಾಯನಾಡುತಲೆ ಬರುತೀನಿ

ಮುತ್ತು ಕೊಟ್ಟು ತಗುಸ್ಯಾರೆ ಕಲ್ಲಾಬಾವಿ
ಮುತ್ತಿನ ಸೋಪಾನದಡಿಗಲ್ಲು ॥ ಬಾವ್ಯಾಗೆ
ಮುಕ್ಕಣ್ಣನೀಸ್ವರನ ಮಡುದೇರು ॥ ಗಂಗಮ್ಮತಾಯಿ
ದಾಯನಾಡುತಲೆ ಬರುತೀನಿ

ಗಂಗಮ್ಮ ಗವರಿ ಬಾರೇ ನೀರೊಳಗೇ
ಯೇನಡಿಗೆ ಮಾಡುತ್ತಿದ್ದೆ

ಯೇನಡಗೆ ಮಾಡಲ್ಕಿಲ್ಲ ಶಿವನೀಗೆ
ಕೆಸರೊಳಗು ಪಾಯಸ ಮಾಡುತ್ತಿದ್ದೆ ॥ ಶಿವನೀಗೆ
ಯೆಡಿಮಾಡುತ್ತಿದ್ದೆ ತಡವಾದೊ

ನೀವೋಗಿ ತನ್ನೀ ತನ್ನೀರೀ ಜಲದಾನೀರ
ಪಾರಿವಾಳದ ಪಕ್ಷೀಗಳೀರಾ ನೀವೋಗಿ
ತನ್ನೀ ತನ್ನೀರೀ ಜಲದಾನೀರ

ಕಲ್ಯಾಣ:

ಕಲ್ಯಾಣ ಸ್ಯಬ ಕಲ್ಯಾಣ
ಕಲ್ಯಾಣ ಗಿರಿಜಿ ಕಲ್ಯಾಣ

ಬೆಳ್ದಿಂಗಪ್ಪನ ಪೂಜೆ

ಯೆಳೆಯ ಬೆಳುದಿಂಗಳು ವಳಗಿಬ್ಬಾರಾರಾರು
ಗಳಿಗೆ ಬಟ್ಟುಲುವ ಯಿಡುಕಂಡು ॥ ನಮ್ಮನಿಯ
ಕಂದಯ್ಯಗು ದಾರೆ ಯೆರುದೇವು

ಸಂಜೆ ಬೆಳುದಿಂಗಳು ಮುಂದಿಬ್ಬರಾರಾರು
ಗಳಿಗೆ ಬಟ್ಟುಲವ ಯಿಡುಕಂಡು ॥ ನಮ್ಮನಿಯ
ಪುತ್ರಯ್ಯಗು ದಾರೆ ಯೆರುದೇವು

ಚೆಂಡಾಟ:

ಆವಳದ ಆಸಂಗ ಮುತ್ತೀನ ಬೀಸಂಗ
ಮತ್ತಿಬ್ಬರಾಡೋ ಚದುರಂಗ ॥ ಸಾವುಡಿ ಮುಂದೆ
ಮಾರಾಯರು ಚೆಂಡ ಮರುತಾರೆ ॥ ವಳಗಿರುವೊ
ಮಾಲಕ್ಷ್ಮೀ ಚೆಂಡ ಕೊಡುಬಾರೆ

ಚೆಂಡ ಕಂಡೋರು ತಂದಾಣೆ ತಾಯಾಣೆ
ಗಂಗಮ್ಮನಾಣೆ ಜಲುದಾಣೆ॥ ಮೂಡಿಬರುವೊ
ಚಂದ್ರಮ್ಮನಾಣೆ ಚೆಂಡುಕಾಣೆ ॥ ಮೂಡಿಬರುವೊ
ಸೂರ್ಯದಮ್ಮನಾಣೆ ಚೆಂಡುಕಾಣೆ

ಅತ್ತೆಯಾ ಮನಿಮುಂದೆ ಅತ್ತರಿನ್ನುಯ್ಯಾಲೆ
ಅತ್ತುಸಾಲನ್ನೀ ಮರಿಗುದುರೆ ॥ ಆಡುವಾಗ
ಅತ್ತೆ ಬೈದಾಳು ಮನಿಗ್ಹೋಗೆ

ಅತ್ತೆ ಬೈದಾರೆ ಅತ್ತುಕಂಡು ಶರಣೆನ್ನಿ
ವುಪ್ಪುರುಗೆ ವಳಗೆ ಮನಗಿರುವೊ ॥ ರಾಯರ
ಮುತ್ತಿನ ಸರವ ಗೆಲಬೇಕು

ಅತ್ತೆ ಮಗುಳಲ್ಲೆ ಅತ್ತಾಲು ತಾವಲ್ಲೆ
ಅತ್ತತ್ತ ವೋಗೆ ಸೆಕಿಬಾಳ ॥ ನಿನ್ನ ಕೊರಳಾಗುಳ
ಮಾಲಿಗೆ ಮಾಲೆ ತೊಡಿರಾವೆ

ಮಾವನ ಮಗುಳಲ್ಲೆ ದೂರೋಗುತಾವಲ್ಲೆ
ದೂರಾಸೀ ಬಾರೆ ಸೆಕಿಬಾಳ ॥ ನಿನ್ನ ಕೊರಳಾಗುಳ
ಮುತ್ತೀಗೆ ಮತ್ತು ತೊಡಿರಾವೆ

ಮಾವನ ಮುನಿಮುಂದೆ ಆರ್ದೊನ್ನಿನುಯ್ಯಾಲೆ
ಆರು ಸಾಲನ್ನಿ ಮರಿಗುದುರೆ ॥ ಆಡುವಾಗ
ಮಾವ ಬೈದಾನು ಮನಿಗ್ಹೋಗೆ

ಮಾವ ಬೈದಾರೆ ಆರಪೇಟು ಶರಣೆನ್ನಿ
ವುಪ್ಪುರುಗೆ ವಳಗೆ ಮನಗಿರುವೊ ॥ ರಾಯರ
ಮುತ್ತಿನ ಸರವ ಗೆಲಬೇಕು

ಹೆಣ್ಣು ಗಂಡಿಗೆ ನೀರುಯ್ಯುವುದು:

ವೂವಿದ್ದಾವೆ ಅಂಗುಳುದ್ಯಾಗೆ ಗಂದಾ
ಸಿರಿಗಂದಾ ಚೆಲ್ಲಾಡ ಜೋಡಂಗಿ ಮ್ಯಾಲೆ ॥ಪ॥

ವುಪ್ಪುರುಗೆ ಮುಂದೆ ವುಕ್ಕ ನೀರರಿವೆ
ಕಪ್ಪುರದಾ ಸೆಕ್ಕೆ ಬಳವೊಡ್ಡಿ ॥ ಕಾದನೀರು
ಯೆರಿಬನ್ನಿ ಮಾಳಾಯರ ಮಗನೀಗೆ

ಮಾಳಿಗೆ ಮುಂದೆ ಕಾಯನೀರ್ಯಾರೀಗೆ
ಯಾಲಕ್ಕಿನ್ಹಾಕಿ ಗಮಗಮ ॥ ಕಾದನೀರ
ಯೆರಿಬನ್ನಿ ಮಾರಾಯರ ಮಗಳೀಗೆ

ನೀರೀರಾತಾವ ನೀರಾಕು ನಿಂತಾವೆ
ವೂರಿಗೆ ದೊಡ್ಡೋರ ಮಗನಿಂದು ॥ ಅಪ್ಪಯ್ಯನೆಂದು
ಕುಸಲಿ ಸೊಪ್ಪಿಗೆ ನೆರಳಾದೆ

ಕೆಸರಿರೋತಾವ ಕೆಸರ್‍ಯಾಕೆ ನಿಂತಾವೆ
ಯೆಸರಿಗು ದೊಡ್ಡೋರ ಮಗನಿಂದು ॥ ಅಪ್ಪಯ್ಯನೆಂದು
ನೀಲಿಸೊಪ್ಪಿಗೆ ನೆರಳಾದೆ

ಅಣ್ಣಗಳು ಜೂಜಾಡಿ ಬಾವಿ ತೋಡಿ
ಜಾರಿಕೆಯಿಲ್ಲ ಕೆಸರಿಲ್ಲ
ಜಾರಿಕೆಯಿಲ್ಲ ಕೆಸರಿಲ್ಲದ ಬಾವ್ಯಾಗೆ
ನಾನೋಗಿ ಮಗುದೆ ಅರಿಗಡಿಗೆ ॥ ಮಿಕ್ಕನೀರು
ಕರೆಯಕು ಬಂದುಣ್ಣಗೆರೆದೇವೋ

ಮಂಗಳ :

ಜಯ ಮಂಗಳಂ ನಿತ್ಯ ಸೃಬ ಮಂಗಳ

ಮುತ್ತು ಮುತ್ತಿನ ಕೋಟೆ ಮುತ್ತಿನ ತೆನಿಗೋಟೆ
ಮುತ್ತೈದೆರಿರುವೋದು ಮೇಲುಗೋಟೆ ॥ ರಂಗನತೇರು
ಮುತ್ತಿನಂಗುಡಿ ಮುಂದರುದಾವಯ್ಯ

ಕಂಚು ಕಂಚಿನ ಕೋಟೆ ಕಂಚಿನ ತೆನಿಗೋಟೆ
ಪಂಚೈವರಿರುವೋದು ಮೇಲುಗೋಟೆ ॥ ರಂಗನತೇರು
ಕಂಚಿನಂಗಡಿ ಮುಂದರುದಾವಯ್ಯ

ಅವಳದವಳದ ಕೋಟೆ ಅವಳಾದ ತೆನಿಗೋಟೆ
ಅವರೈವರಿರುವೋದು ಮೇಲುಗೋಟೆ ॥ ರಂಗನತೇರು
ಅವಳದಂಗಡಿ ಮುಂದರುದಾವಯ್ಯ

ಬಗ್ಗೀರೆ ಬಗ್ಗೀರೆ ಬಗ್ಗಿ ಶರಣೆನ್ನೀರೆ
ಮಗ್ಗಾಲಕಿರುವಂತ ವಡಯ
ಮಗ್ಗಾಲಕಿರುವಂತ ವಡಯನೀಗ್ಕೆ ಬೆಳದಿಂಗ್ಳಪ್ಪಗೆ
ಬದ್ರೆರಾರತಿಯ ತಿರಿವಿಟ್ಟರು

ಬಾಗೀರೆ ಬಾಗೀರೆ ಬಾಗಿ ಶರಣೆನ್ನೀರೆ
ಬಾಗಾಲಗಿರುವಂತ ವಡಯ
ಬಾಗಾಲಗಿರುವಂತ ವಡಯನೀಗ್ಕೆ ಬೆಳದಿಂಗ್ಳಪ್ಪಗೆ
ಬಾಲೇರಾರುತಿಯ ತಿರಿವಿಟ್ಟರು

-ಬೆಳ್ದಿಂಗ್ಳಪ್ಪನ ಪೂಜೆ ಮುಗಿದುದು-

ಅರ್ಥಕೋಶ

ಅಡ್ಕೆ-ಒಂದು ಒಡವೆ
ಅಗ್ಗುಣಿ-ಅಗ್ಘವಣಿ, ನೀರು
ಅವಳ-ಹವಳ
ಆಸಂಗ-ಹಾಸಿಗೆ?
ಇದಿಗೋ (ತೆಲುಗು)-ಇಲ್ಲಿದ್ದಾವೆ
ಎದುಗ (ತೆ)-ಯಾಕೆ
ಏಮೇ (ತೆ)-ಏನು
ಏದೇ (ತೆ)-ಎಲ್ಲಿ
ಏಟ್ರೋಳ್ಳೆ (ತೆ)-ಯಾವ ಜಾತಿ
ಓಮಾಲು (ತೆ)-ಹೋಮಗಳು
ಕಲ್ಲೆಂಬ ಕಲಪತ್ರೆ-?
ಕಾಪೊಳ್ಳು (ತೆ)-ವಕ್ಕಲಿಗರು
ಗುಂಡಿ-ಹಿತ್ತಾಳೆಯ ಕೊಡ
ಗುಂಡು-ಒಂದು ವಡವೆ
ಜಂಬು-ನೇರಿಳೆ?
ಜಾಲಾರಿ-ಜಾಲರಿ ಹೂವಿನ ಮರ
ತಬಟಾಲು (ತೆ)-ತಮಟೆಗಳು
ದರುಗ-ತರಗು, ಒರಟು
ದಾಯ-ದಾಳ
ಪತ್ತುರೆ-ಪತ್ರೆ
ಪಂಜರಮ್ಮೆನ-ಹಕ್ಕಿ?
ಪುಪ್ಪೆ-ಪುಷ್ಪ
ಪೇಟಾಲು (ತೆ)-ರುಮಾಲುಗಳು
ಬಳವೊಡ್ಡಿ-ಬಹಳವಾಗಿ ಒಡ್ಡಿ
ಬಣ್ಣ-ಸೀರೆ, ಬಣ್ಣ
ಬಸುವ-ಬಸವ
ಬಾವುಸಿ-ಭಾವಿಸಿ
ಬಾರೆನಕ್ಕಿ-ಒಂದು ಪಕ್ಷಿ
ಬಿಲ್ಲಪತ್ರೆ-ಬಿಲ್ವಪತ್ರೆ
ಬೀಸಂಗ-ಬೀಸಣಿಗೆ
ಬೊಂಬಾಲು (ತೆ)-ಬೊಂಬೆಗಳು
ಮಡಕೆಲು (ತೆ)-ಮಡಿಕೆಗಳು, ಹಾರು
ಮಟುಗೆ-ಮಠಕ್ಕೆ
ಮಗುದೆ-ತುಂಬಿಕೊಂಡೆ
ಮಾವರು-ಮಾವನವರು
ರಂಬೆ-ಸೂಳೆ
ಲಿಂಗಾಲು (ತೆ)-ಕರಡಿಗೆಗಳು
ಲೇದು (ತೆ) - ಇಲ್ಲ
ವಪ್ಪತಿವೆ (ತೆ)-ಒಪ್ಪಿದೆವು
ವಾಲೆ-ಓಲೆ
ವುಬ್ಬೇಲು (ತೆ)-ಆಗಸರ ಉಬ್ಬೆಗಳು
ಸಾವುಡಿ-ಚಾವಡಿ
ಸ್ಯಾವೆ ಅಕ್ಕಿ-ಸಾವೆ ಅಕ್ಕಿ
ಸಿಬ್ಬುಲು-ಚಿಬ್ಬುಲು,
ಬಿದುರಿನ ಚಿಕ್ಕತಟ್ಟೆ
ಸುಕ್ಕೆ-ಚುಕ್ಕೆ, ನಕ್ಷತ್ರ
ಸೆಕ್ಕೆ-ಚಕ್ಕೆ
ಸೆಲ್ಲಲು-ಚೆಲ್ಲಲು



"....ಪುಸ್ತಕದಲ್ಲಿ ಕಣ್ಣಾಡಿಸಿದೆ. ತುಂಬ ಖುಷಿ ಆಗುವಂತೆ ಸಂಗ್ರಹಿಸಿದ್ದೀರಿ. ಮಾಹಿತಿ - ಇದು ಮುಂದಿನ ತಲೆಮಾರಿಗೆ ಲಭ್ಯವಾಗದು...."

- ಶಂ.ಬಾ. ಜೋಶಿ

(ಪತ್ರದಿಂದ)

ಈ ಪುಸ್ತಿಕೆ ಚಿಕ್ಕದಾದರೂ ತುಂಬ ಉಪಯುಕ್ತವಾದುದು ನಮ್ಮ ಒಂದು ಜನಪದ ಸಂಪ್ರದಾಯವನ್ನು ಸಮರ್ಥವಾಗಿ ಪರಿಚಯಿಸುತ್ತದೆ.

- ಹಾ.ಮಾ. ನಾಯಕ

(ಪತ್ರದಿಂದ)

ಪ್ರಕೃತಿಯನ್ನು ಆರಾಧಿಸುವ ನಮ್ಮ ಪ್ರಮುಖ ಸಂಪ್ರದಾಯಗಳಲ್ಲಿ ಒಂದಾದ ಚಂದ್ರನ ಪೂಜೆಯನ್ನು ಕುರಿತಂತೆ ಕನ್ನಡದಲ್ಲಿ ಮೊಟ್ಟಮೊದಲು ಪ್ರಕಟವಾದ ಜನಪದ ಕೃತಿ. **ಬೆಳ್ದಿಂಗಳ್ಳಪ್ಪನ ಪೂಜೆ** ತನ್ನ ಕ್ಷೇತ್ರದಲ್ಲಿ ತುಂಬಾ ವೈಶಿಷ್ಟ್ಯಪೂರ್ಣ ಗ್ರಂಥವಾಗಿದೆ. ಜಾನಪದದ ನಿಷ್ಠಾವಂತ ವಿದ್ಯಾರ್ಥಿಯಾದ ಅಗ್ರಹಾರ ಕೃಷ್ಣಮೂರ್ತಿಯವರು ಬೆಳ್ದಿಂಗಳ ಒಡೆಯನ ಬಗೆಗಿನ ಚಿಂತನೆಯ ಅವಶ್ಯ ಸಾಮಗ್ರಿಯನ್ನೆಲ್ಲ ಗಮನದಲ್ಲಿಟ್ಟುಕೊಂಡು, ಬೇರೆ ಬೇರೆ ಭಾಗಗಳಲ್ಲಿನ ತಮ್ಮ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ನಡೆಸಿರುವ ಈ ಅಧ್ಯಯನವು ಸಮರ್ಥವೂ, ಪರಿಣಾಮಕಾರಿಯೂ ಆಗಿದೆ. ಮಾನವ ಲೋಕ ಪ್ರಕೃತಿಯೊಡನೆ ಬೆಳೆಸಿಕೊಂಡಿರುವ ಭಾವ ಸಂಬಂಧಗಳ ಸೂಕ್ಷ್ಮತೆಗಳನ್ನು ಜಾನಪದದ ತಿಳಿವಿನಿಂದ ಸಂಘಟಿಸುವ ಪ್ರಯತ್ನ ಈ ಕೃತಿಯಲ್ಲಿ ನಡೆದಿದೆ.

- ಕಿ.ರಂ. ನಾಗರಾಜ್